ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಆಗಸ್ಟ್ 1 ಶುಕ್ರವಾರ 2025

₹4

ಸಂಪುಟ: 46 | ಸಂಚಿಕೆ: 106 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರಿನ ಘನ ತ್ಯಾಜ್ಯ ನಿರ್ವಹಣಾ ಘಟಕದ ಸುತ್ತಲಿನ ನಿವಾಸಿಗಳ ಸಮೀಕ್ಷೆ

ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಆದೇಶ

- ಜನರ ಆರೋಗ್ಯದತ್ತ ಗಮನ ನೀಡಿ
- ಅಕ್ರಮ ಬಡಾವಣೆ ತಲೆ ಎತ್ತದಂತೆ ಕ್ರಮ ವಹಿಸಿ
- ಕೆಲಸಗಾರರಿಗೆ ಆಗಾಗ ಆರೋಗ್ಯ ತಪಾಸಣೆ ನಡೆಸಿ
- ಮೈಸೂರು ಇಡೀ ರಾಜ್ಯಕ್ಕೆ ಮಾದರಿ



ಮೈಸೂರಿನ ರಾಯನಕೆರೆಗೆ ಗುರುವಾರ ಭೇಟಿ ನೀಡಿದ್ದ ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅಲ್ಲಿನ ತ್ಯಾಜ್ಯ ನಿರ್ವಹಣೆಯನ್ನು ಪರಿಶೀಲಿಸಿದರು. ಮೈಸೂರು ನಗರಪಾಲಿಕೆಯ ಆಯುಕ್ತ ಶೇಕ್ ತನ್ವೀರ್ ಆಸೀಫ್, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಉಮಾಶಂಕರ್, ತಹಶೀಲ್ದಾರ್ ಮಹೇಶ್‌ಕುಮಾರ್ ಇತರರಿದ್ದರು.

ಮೈಸೂರು, ಜು.31(ಬಿಎಲ್‌ಯು)– ಮೈಸೂರಿನ ಘನ ತ್ಯಾಜ್ಯ ನಿರ್ವಹಣಾ ಘಟಕದ ಸುತ್ತ, 5ರಿಂದ 10 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ವಾಸ ಮಾಡುವ ನಿವಾಸಿಗಳ ಸಮೀಕ್ಷೆ ಮಾಡಿ, ಅವರ ಆರೋಗ್ಯಕ್ಕೆ ಸಂಬಂಧಿಸಿದಂತೆ ಯಾವುದೇ ತೊಂದರೆ ಆಗದಂತೆ ಕ್ರಮ ಕೈಗೊಳ್ಳಿ ಎಂದು ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ, ಮೈಸೂರು ನಗರಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮೈಸೂರಿನ ರಾಯನಕೆರೆ ನೀರು ಸಂಸ್ಕರಣಾ ಘಟಕ ಹಾಗೂ ಘನ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಇಂದು ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಘನತ್ಯಾಜ್ಯ ಘಟಕಗಳ ಸುತ್ತ ಅಕ್ರಮ ಬಡಾವಣೆಗಳು ಹಾಗೂ ಇತರೆ ಕಟ್ಟಡಗಳು ನಿರ್ಮಾಣ ಆಗದಂತೆ ಕ್ರಮ ವಹಿಸಬೇಕು. ನೀರು ಸಂಸ್ಕರಣಾ ಘಟಕದಲ್ಲಿ ಬೆಳೆದಿರುವ ಗಿಡಗಂಟಿಗಳನ್ನು ತೆರವು ಮಾಡಬೇಕು ಎಂದು ಸಲಹೆ ನೀಡಿದರು.

ಘನ ತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಕೆಲಸ ಮಾಡುವವರಿಗೆ ಪ್ರತಿ ತಿಂಗಳು ಆರೋಗ್ಯ ತಪಾಸಣೆ ಮಾಡಿಸಬೇಕು, ಜೊತೆಗೆ ಅವರಿಗೆ ಗುಣಮಟ್ಟದ ಗ್ಲೌಸ್, ಬೂಟ್ ಹಾಗೂ ಮಾಸ್ಕ್ ನೀಡಬೇಕು ಎಂದು ತಾಕೀತು ಮಾಡಿದರು.

ರಾಯನಕೆರೆ ನೀರು ಸಂಸ್ಕರಣಾ ಘಟಕದಲ್ಲಿ ಒಳಚರಂಡಿ ನೀರನ್ನು ಸಂಸ್ಕರಿಸಿ ಕೆರೆಗಳಿಗೆ ಬಿಡುಗಡೆ ಮಾಡುತ್ತಿರುವುದು ಅತ್ಯುತ್ತಮ ಕಾರ್ಯ ವಿಧಾನವಾಗಿದೆ. ಇದರ ನಿರ್ವಹಣೆಯನ್ನು ಚೆನ್ನಾಗಿ ಮಾಡಲಾಗುತ್ತಿದೆ. ಆದರೆ ಇದರಿಂದ ಸುತ್ತಮುತ್ತಲಿನ ಜನರಿಗೆ ಯಾವುದೇ ತೊಂದರೆ ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಮತ್ತೊಮ್ಮೆ ಸಲಹೆ ನೀಡಿದರು.

ಮೈಸೂರಿನಲ್ಲಿ ಪರಿಸರ ಸಂರಕ್ಷಣೆಗೆ ಪೂರಕವಾಗುವಂತೆ ಹಸಿ ಕಸ, ಒಣ ಕಸ ಬೇರ್ಪಡಿಸಿ ತ್ಯಾಜ್ಯ ನಿರ್ವಹಣೆ, ತ್ಯಾಜ್ಯ ನೀರು ಸಂಸ್ಕರಣೆ ಮಾಡಿ ಕೆರೆಗೆ ಬಿಡುತ್ತಿರುವುದು ಮಾದರಿಯಾಗಿದೆ. ಇದೇ ವಿಧಾನವನ್ನು ರಾಜಧಾನಿ ಬೆಂಗಳೂರು ಸೇರಿದಂತೆ ಇತರೆ ಜಿಲ್ಲೆಗಳಲ್ಲೂ ಅನುಸರಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಮೈಸೂರು ನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಉಮಾಶಂಕರ್, ತಹಶೀಲ್ದಾರ್ ಮಹೇಶ್‌ಕುಮಾರ್ ಹಾಗೂ ಇತರೆ ಅಧಿಕಾರಿಗಳು ಈ ವೇಳೆ ಹಾಜರಿದ್ದರು.

ನಾಳೆಯಿಂದ ಮೈಸೂರಲ್ಲಿ ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನ 'ಗೀತೋತ್ಸವ–2025'

ಓವಲ್ ಮೈದಾನದಿಂದ ಸಮ್ಮೇಳನದ ಅಧ್ಯಕ್ಷರ ಮೆರವಣಿಗೆ

- ಬಿ.ಆರ್.ಲಕ್ಷ್ಮಣರಾವ್, ಡಾ.ನಾ.ದಾಮೋದರ ಶೆಟ್ಟಿಗೆ 'ಕಾವ್ಯಶ್ರೀ' ಪ್ರಶಸ್ತಿ, ರತ್ನಮಾಲ ಪ್ರಕಾಶ್, ಕೆ.ಎಸ್.ಸುರೇಖಾಗೆ 'ಭಾವಶ್ರೀ' ಪ್ರಶಸ್ತಿ ಪ್ರದಾನ
- ಕವಿ ಚಿತ್ರಗೀತೆಗಳು, ಗೀತ ಸಂಗೀತ ಕಾರ್ಯಕ್ರಮ, ಗೀತ ನೃತ್ಯ, ಸಮಾರೋಪ ಸಮಾರಂಭ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನ 'ಗೀತೋತ್ಸವ –2025' ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಜು.31(ಜಿಎ)–ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಮೈಸೂರು ಘಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಲಾಮಂದಿರದಲ್ಲಿ ಆ.2 ಮತ್ತು 3ರಂದು ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನ 'ಗೀತೋತ್ಸವ–2025' ಹಮ್ಮಿಕೊಳ್ಳಲಾಗಿದೆ ಎಂದು ಘಟಕದ ಅಧ್ಯಕ್ಷ ನಾಗರಾಜ ವಿ.ಬೈರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನವನ್ನು ಆ.2ರಂದು ಬೆಳಿಗ್ಗೆ 10 ಗಂಟೆಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸುವರು. ಜಿಲ್ಲಾಧಿಕಾರಿ ಡಾ.ಲಕ್ಷ್ಮೀಕಾಂತ ರೆಡ್ಡಿ ಸ್ವಾಗತಿಸುವರು. ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ ಅಧ್ಯಕ್ಷತೆ ವಹಿಸುವರು. ಕವಿ ನಗರ ಶ್ರೀನಿವಾಸ ಉಡುಪ ಅವರು ಸಮ್ಮೇಳನದ ಅಧ್ಯಕ್ಷರ ಅಧಿಕಾರ ಸ್ವೀಕಾರ ನಡೆಯಲಿದೆ. ಇದಕ್ಕೂ ಮುನ್ನ ಓವಲ್ ಮೈದಾನದಿಂದ ಕಲಾಮಂದಿರದವರೆಗೆ ಬೆಳ್ಳಿರಥದಲ್ಲಿ ಸಮ್ಮೇಳನದ ಅಧ್ಯಕ್ಷರ ಮೆರವಣಿಗೆ ನಡೆಯಲಿದೆ ಎಂದರು.

ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್‌ಗೌಡ, ತನ್ವೀರ್‌ಸೇಠ್, ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ, ಸಿ.ಎನ್.ಮಂಜೇಗೌಡ ಮತ್ತಿತರರು ಪಾಲ್ಗೊಳ್ಳುವರು ಎಂದರು.

ಕಾರ್ಯಕ್ರಮದಲ್ಲಿ ಪ್ರೇಮಕವಿ ಬಿ.ಆರ್. ಲಕ್ಷ್ಮಣ ರಾವ್, ಹಿರಿಯ ಯಕ್ಷಗಾನ ಕಲಾವಿದ ಡಾ.ನಾ.ದಾಮೋದರ ಶೆಟ್ಟಿ ಅವರಿಗೆ 'ಕಾವ್ಯಶ್ರೀ ಪ್ರಶಸ್ತಿ', ರತ್ನಮಾಲಾ ಪ್ರಕಾಶ್ ಮತ್ತು ಕೆ.ಎಸ್.ಸುರೇಖಾ ಅವರಿಗೆ 'ಭಾವಶ್ರೀ ಪ್ರಶಸ್ತಿ'ಯನ್ನು ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಪ್ರದಾನ ಮಾಡಲಿದ್ದಾರೆ ಎಂದು ಕಾರ್ಯಕ್ರಮಗಳ ವಿವರ ನೀಡಿದರು.

ಮಧ್ಯಾಹ್ನ 12ಗಂಟೆಗೆ ಮೈಸೂರಿನ ಕಲಾವಿದರಿಂದ ಭಾವ ಕುಸುಮ ಸಮೂಹ ಗಾಯನ, 12.30ಕ್ಕೆ ಶಿವಮೊಗ್ಗ, ದಾವಣಗೆರೆ, ಶಿರಸಿ, ಚಾಮರಾಜನಗರ, ಕಾಸರಗೋಡು, ಮಂಡ್ಯ, ಹಾಸನದ ಕಲಾವಿದರು ಭಾವಾಂಜಲಿ ಸಮೂಹ ಗಾಯನ ನಡೆಸಿಕೊಡುವರು. ಮಧ್ಯಾಹ್ನ 3ಕ್ಕೆ ವೈ.ಕೆ. ಮುದ್ದುಕೃಷ್ಣ, ಅಪ್ಪಗೆರೆ ತಿಮ್ಮರಾಜು, ಡೇವಿಡ್ ಮಂಡ್ಯ, ಡಾ.ರಾಮೇಶ್ವರಪ್ಪ ಅಮ್ಮ ರಾಮಚಂದ್ರ, ಶುಭಾ ರಾಘವೇಂದ್ರ, ಸಿ.ಎಂ.ನರಸಿಂಹಮೂರ್ತಿ, ಸುನೀತಾ ಮುರಳಿ, ಎನ್.ಬೆಟ್ಟೇಗೌಡ ಅವರು ತತ್ವಪದ ಗಾಯನ ನಡೆಸಲಿದ್ದಾರೆ ಎಂದರು.

ಸಂಜೆ 4 ಗಂಟೆಗೆ ಕವಿಯ ನೋಡಿ ಕವಿತೆ ಕೇಳಿ ಕಾರ್ಯಕ್ರಮದಲ್ಲಿ ನಾಗೇಶ್ ಕಂದೇಗಾಲ, ಚಾಂದನಿ ಗರ್ತಿಕೆರೆ, ಪ್ರಮೋದ್ ಸಪ್ರೆ, ಆನಂದ ಮೂದಲಗೆರೆ, ಶ್ರೀರಕ್ಷ ಅರವಿಂದ್, ಅಜಿತ್ ಕಿಕ್ಕೇರಿ, ಭಾಗ್ಯಶ್ರೀ ಗೌಡ, ರಶ್ಮಿ ಚಿಕ್ಕಮಗಳೂರು, ಶ್ರುತಿ ರಾವ್ ಕವಿತೆ ವಾಚಿಸುವರು. ಸಂಜೆ 5ಕ್ಕೆ ಕವಿ ಚಿತ್ರಗೀತೆಗಳು ನಡೆದರೆ ಸಂಜೆ 6ಗಂಟೆಗೆ ಸಮ್ಮೇಳನಾಧ್ಯಕ್ಷರ ಗಾಯನದೊಂದಿಗೆ ಗೀತ ಸಂಗೀತ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭವಾಗಲಿವೆ.

ಆ.3ರಂದು ಬೆಳಿಗ್ಗೆ 10ಗಂಟೆಗೆ ನವ ಅನ್ವೇಷಣೆ ನಡೆದರೆ 11ಕ್ಕೆ ಕವಿಗಳಾದ ಎಂ.ಗೋವಿಂದ ಪೈ, ಬಿ.ಎಂ.ಶ್ರೀಕಂಠಯ್ಯ, ಡಾ.ಸಿ.ಸೀತಾರಾಮಯ್ಯ, ಪಂಜೆ ಮಂಗೇಶರಾಯರ, ಆನಂದಕಂದ ಇನ್ನಿತರರ ನವ್ಯ–ನವೋದಯ ಕವಿ ಗೀತೆಗಳ ಗಾಯನ ನಡೆಯಲಿದೆ. ಮಧ್ಯಾಹ್ನ 12ಕ್ಕೆ ರಾಗಾಧಾರಿತ ಗೀತೆಗಳು, ಮಧ್ಯಾಹ್ನ 3ಕ್ಕೆ ಕವಿ ಎಂ.ಎನ್.ವ್ಯಾಸರಾವ್ ರಚಿತ 'ಗೀತ ನೃತ್ಯ' ಪ್ರದರ್ಶನ ಇರಲಿದೆ ಎಂದರು.

ಸಂಜೆ 5.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ನಾಡೋಜ ಡಾ.ಹಂಪ ನಾಗರಾಜಯ್ಯ ಸಮಾರೋಪ ಭಾಷಣ ಮಾಡುವರು. ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಅಧ್ಯಕ್ಷತೆ ವಹಿಸುವರು. ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅತಿಥಿಗಳಾಗಿ ಪಾಲ್ಗೊಳ್ಳುವರು. ಇದಾದ ಬಳಿಕ ಒಂದು ಸಾಲಿನ ಕವಿತೆ, ಗೀತ–ಸಂಗೀತ ಕಾರ್ಯಕ್ರಮ ನಡೆಯಲಿವೆ ಎಂದು ವಿವರಿಸಿದರು.

ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, 2 ದಿನಗಳ ಕಾಲ ಗೀತೋತ್ಸವದಲ್ಲಿ ಭಾಗವಹಿಸುವವರಿಗೆ ಊಟ, ತಿಂಡಿ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಮ್ಮೇಳನ ಯಶಸ್ವಿಗೊಳಿಸಬೇಕು ಎಂದರು. ಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪರಿಷತ್ತಿನ ಕಾರ್ಯದರ್ಶಿ ಸಿರಿಬಾಬು, ರಾಜಶೇಖರ ಕದಂಬ, ಅಜಯ್ ಶಾಸ್ತ್ರೀ ಉಪಸ್ಥಿತರಿದ್ದರು.

ಸಾಮಾಜಿಕ ಕಾರ್ಯಗಳಿಗೆ ದೇಣಿಗೆ ಸಂಗ್ರಹಿಸುವ ಸಲುವಾಗಿ ಲಯನ್ಸ್ ಕ್ಲಬ್ ಆಫ್ ಪ್ಲಾಟಿನಂನಿಂದ ಸ್ಟ್ಯಾಂಡಪ್ ಕಾಮಿಡಿಯನ್ ಶೋ

ಮೈಸೂರು, ಜು.31(ಜಿಎ)–ಲಯನ್ಸ್ ಕ್ಲಬ್ ಆಫ್ ಮೈಸೂರು ಪ್ಲಾಟಿನಂ, ದಿ ಹೌಸ್ ಆಫ್ ಎಡಿಟ್ಸ್ ವತಿಯಿಂದ ಸಾಮಾಜಿಕ ಕಾರ್ಯಗಳಿಗೆ ದೇಣಿಗೆ ಸಂಗ್ರಹಿಸುವ ಉದ್ದೇಶದಿಂದ ಆ.2 ಮತ್ತು 3ರಂದು ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಸ್ಟ್ಯಾಂಡಪ್ ಕಾಮಿಡಿಯನ್ ಶೋ ಆಯೋಜಿಸಲಾಗಿದೆ ಎಂದು ಕಲಾವಿದ ದೀಲಿಪ್ ಶಂಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆ.2ರಂದು ಸಂಜೆ 4ಕ್ಕೆ ಮತ್ತು ಆ.3ರಂದು 5.30ಕ್ಕೆ ಶೋ ಪ್ರಾರಂಭವಾಗಲಿದೆ. ಕಾರ್ತಿಕ್ ಪಟ್ಟರ್, ಪ್ರಮೋದ್ ಅಶ್ನಾಲ್, ರಾಘವೇಂದ್ರ ಆಚಾರ್ಯ ಸೇರಿದಂತೆ 10 ಮಂದಿ ಸ್ಟ್ಯಾಂಡಪ್ ಕಾಮಿಡಿಯನ್‌ಗಳು ನಗೆಗಡಲಿನಲ್ಲಿ ತೇಲಿಸಲಿದ್ದಾರೆ.

ಕುಟುಂಬ ಸಮೇತರಾಗಿ ಆಗಮಿಸಿ ಶೋ ಅನ್ನು ವೀಕ್ಷಿಸಿ ಮನರಂಜಿಸಬಹುದು. ಈ ಪ್ರದರ್ಶನದಲ್ಲಿ ಕಾಮಿಡಿಯನ್‌ಗಳು ಅಶ್ಲೀಲ ಪದ ಬಳಸುವುದಿಲ್ಲ. ಡಬಲ್ ಮೀನಿಂಗ್ ಕಾಮಿಡಿ ಮಾಡುವುದಿಲ್ಲ. ಸಾಮಾಜಿಕ ಕಾರ್ಯಕ್ಕಾಗಿ ಶೋ ನಡೆಸುತ್ತಿರುವ ಉದ್ದೇಶದಿಂದ 200 ಮತ್ತು 300 ರೂ.ಟಿಕೆಟ್ ದರ ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9164659370 ಸಂಪರ್ಕಿಸಿ ಎಂದರು. ಲಯನ್ಸ್ ಕ್ಲಬ್ ಆಫ್ ಮೈಸೂರು ಪ್ಲಾಟಿನಂ ಉಮಾಶಂಕರ್ ಮಾತನಾಡಿ, ಲಯನ್ಸ್ ಕ್ಲಬ್ ಸಂಸ್ಥೆಯು ಈಗಾಗಲೇ ಆರೋಗ್ಯ ತಪಾಸಣಾ ಶಿಬಿರ ನಡೆಸಿದೆ. ಜೊತೆಗೆ ಆರ್ಥಿಕ ದುರ್ಬಲರಿಗೆ ಸಹಾಯ ಮಾಡುತ್ತಿದೆ. ಈ ಬಾರಿ ಪ್ರದರ್ಶನದಲ್ಲಿ ಸಂಗ್ರಹವಾಗುವ ದೇಣಿಗೆಯನ್ನು ಮತ್ತೊಂದು ಸಾಮಾಜಿಕ ಕಾರ್ಯಕ್ಕೆ ಬಳಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಟೆಕ್ನಿಷಿಯನ್ ವೈಭವ್, ಪ್ರಚಾರಕ ವಿಹಾನ್, ಪ್ರಮೋದ್ ಅಶ್ನಾನ್, ರಾಘವೇಂದ್ರ ಆಚಾರ್ಯ ಉಪಸ್ಥಿತರಿದ್ದರು.

ಪುಣೆಯಿಂದ ನಿರ್ಗಮಿಸುವ ಕ್ವಾಂಟಮ್ ಟೆಕ್ ಕಂಪನಿಗಳಿಗೆ ಬೆಂಗಳೂರಿಗೆ ಸ್ವಾಗತ

ಬೆಂಗಳೂರು, ಜು.31– ಮಹಾರಾಷ್ಟ್ರವನ್ನು ತೊರೆಯಲು ಬಯಸುವ ಎಲ್ಲಾ ಕ್ವಾಂಟಮ್ ಟೆಕ್ ಕಂಪನಿಗಳಿಗೆ ಬೆಂಗಳೂರಿಗೆ ಸ್ವಾಗತಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಗುರುವಾರ ಹೇಳಿದ್ದಾರೆ.



ಬೆಂಗಳೂರಿನಲ್ಲಿ, ನಮ್ಮಲ್ಲಿ ಸಾಕಷ್ಟು ಮಾನವ ಸಂಪನ್ಮೂಲ ಮತ್ತು ಮೂಲ ಸೌಕರ್ಯಗಳಿವೆ. ಅವರಿಗೆ ಬೇಕಾದುದನ್ನು ಒದಗಿಸಲು ನಾವು ಸಿದ್ಧರಿದ್ದೇವೆ ಎಂದು ಅವರು, ಬೆಂಗಳೂರಿನಲ್ಲಿ ನಡೆಯುತ್ತಿರುವ ಕ್ವಾಂಟಮ್ ಇಂಡಿಯಾ ಬೆಂಗಳೂರು 2025ರ ಉದ್ಘಾಟನಾ ಕಾರ್ಯಕ್ರಮದ ಸಂದರ್ಭದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಯೋಗಾಚಾರ್ಯ ಡಾ.ಎ.ಆರ್.ಸೀತಾರಾಮ್ ಇನ್ನಿಲ್ಲ

ಮೈಸೂರು,ಜು.31– ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ (ಆರ್‌ಐಎಂಎಸ್‌ಇ) ಹಾಗೂ ಉಳುಂದೂರು ಪೇಟೆಯ (ತಮಿಳುನಾಡು) ಶಾರದಾ ಶಿಕ್ಷಣ ಕಾಲೇಜಿನ ಮಾಜಿ ಪ್ರಾಂಶುಪಾಲ ಮತ್ತು ಶಿಕ್ಷಣ ಪ್ರಾಧ್ಯಾಪಕ ಯೋಗಾಚಾರ್ಯ ಡಾ.ಎ.ಆರ್.ಸೀತಾರಾಮ್ (77) ಬುಧವಾರ ಮೈಸೂರಿನಲ್ಲಿ ನಿಧನರಾದರು.



ಡಾ.ಎ.ಆರ್.ಸೀತಾರಾಮ್

ಮೈಸೂರಿನ ಬೋಗಾದಿಯ ಸಿಎಫ್‌ಟಿಆರ್‌ಐ ಲೇಔಟ್ ನಿವಾಸಿಯಾದ ಮೃತರು, ಪತ್ನಿ ಡಾ.ಗೀತಾ ಸೀತಾರಾಮ್, ಪುತ್ರರಾದ ದೀಪಕ್ ರಾಮ್, ದರ್ಶನ್ ರಾಮ್ ಸೇರಿದಂತೆ ಸೊಸೆಯಂದಿರು, ಮೂವರು ಮೊಮ್ಮಕ್ಕಳು ಹಾಗೂ ಬಂಧು–ಮಿತ್ರರನ್ನು ಅಗಲಿದ್ದಾರೆ.

ಡಾ.ಎ.ಆರ್.ಸೀತಾರಾಮ್ ಅವರು ಮೈಸೂರಿನ ಮಾನಸ ಸರೋವರ ಪುಷ್ಕರಿಣಿ ವಿದ್ಯಾಶ್ರಮದ ಅಧ್ಯಕ್ಷರಾಗಿ, ನವದೆಹಲಿಯ ಎನ್‌ಸಿಇಆರ್‌ಟಿ ಸಂಪನ್ಮೂಲ ವ್ಯಕ್ತಿಯಾಗಿ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದರು. ಮೌಲ್ಯಯುತ ಶಿಕ್ಷಣ ತಜ್ಞರಾಗಿ ಡಾ.ಸೀತಾರಾಮ್ ಅವರು ಹಲವು ಪ್ರಶಸ್ತಿ ಹಾಗೂ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ವ್ಯಕ್ತಿತ್ವ ವಿಕಸನ ಮತ್ತು ಆಧ್ಯಾತ್ಮಿಕತೆ ಕ್ಷೇತ್ರಕ್ಕೆ ಇವರ ಕೊಡುಗೆ ಅಪಾರ.

ಶವಾಗಾರದಲ್ಲಿ ಇರಿಸಿರುವ ಇವರ ಪಾರ್ಥಿವ ಶರೀರವನ್ನು ನಾಳೆ (ಆ.1) ಬೆಳಗ್ಗೆ 10 ಗಂಟೆಗೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸ್ಮಶಾನಕ್ಕೆ ನೇರವಾಗಿ ಅಂತ್ಯಸಂಸ್ಕಾರಕ್ಕಾಗಿ ಕೊಂಡೊಯ್ಯಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೇಸೋನಿಕ್ ಗ್ರ್ಯಾಂಡ್ ಲಾಡ್ಜ್ ಆಫ್ ಇಂಡಿಯಾದ ಪ್ರಾದೇಶಿಕ ಗ್ರ್ಯಾಂಡ್ ಮಾಸ್ಟರ್ ನಿಧನ

ಚೆನ್ನೈ,ಜು.31– ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಮತ್ತು ಮೇಸೋನಿಕ್ ಗ್ರ್ಯಾಂಡ್ ಲಾಡ್ಜ್ ಆಫ್ ಇಂಡಿಯಾದ ಪ್ರಾದೇಶಿಕ ಗ್ರ್ಯಾಂಡ್ ಮಾಸ್ಟರ್ ಆರ್.ಡಬ್ಲ್ಯು.ಬ್ರೋ. ಟಿ.ಎನ್. ಮನೋಹರನ್ ಬುಧವಾರ ಮುಂಬೈನಲ್ಲಿ ನಿಧನರಾದರು.



ಟಿ.ಎನ್.ಮನೋಹರನ್

ಮೃತರು ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾದ ರಾಷ್ಟ್ರೀಯ ಅಧ್ಯಕ್ಷರಾಗಿ ಮತ್ತು ಕೆನರಾ ಬ್ಯಾಂಕಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು ಪತ್ನಿ, ಇಬ್ಬರು ಪುತ್ರಿಯರು, ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇಂದು ಮಧ್ಯಾಹ್ನ ಚೆನ್ನೈನಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಮೂಲಗಳು ತಿಳಿಸಿವೆ.

ಗೌರಮ್ಮ




ಮೈಸೂರು, ಜು.31– ಮೈಸೂರಿನ ಎನ್.ಆರ್.ಮೊಹಲ್ಲಾದ ಲೇಟ್ ಕಾಳಪ್ಪ ಅವರ ಪತ್ನಿ ಶ್ರೀಮತಿ ಗೌರಮ್ಮ(84) ಅವರು ಗುರುವಾರ ನಿಧನರಾದರು. ಕುಟುಂಬದವರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿರುವ ಇವರ ಅಂತ್ಯಕ್ರಿಯೆ ಎನ್.ಆರ್. ಮೊಹಲ್ಲಾದ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ 1ಕ್ಕೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರ್.ಎನ್. ವೆಂಕಟೇಶ್



ಮೈಸೂರು: ಮೈಸೂರಿನ ವಿನಾಯಕನಗರದ ನಿವಾಸಿ ಆರ್.ಎನ್. ವೆಂಕಟೇಶ್(70) ಗುರುವಾರ ಬೆಳಗ್ಗೆ ನಿಧನರಾದರು. ಇವರು ರಾಮಸಮುದ್ರದ ನಿವಾಸಿ ದಿವಂಗತ ನಾಗರಾಜು ಅವರ ಪುತ್ರ ಹಾಗೂ ಮಾಜಿ ಶಾಸಕ ಕೆ.ಎನ್. ಸೋಮಸುಂದರ್ ಅವರ ಭಾವಮೈದುನ. ಅಂತ್ಯಕ್ರಿಯೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಆ.2ರಂದು ಬೆಳಗ್ಗೆ 11 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

01.08.2025 ಶುಕ್ರವಾರ, ಮಳೆ ನಕ್ಷತ್ರ: ಪುಷ್ಯ, 20.07.2025 ರಿಂದ 2.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ


- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಅರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ಕ್ಕೆ
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಸಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 9 ರಿಂದ.
- **ಕನಕದಾಸನಗರ ದಟ್ಟಗಳ್ಳಿ ಕ್ಷೇಮಾಭಿವೃದ್ಧಿ ಸಂಘ :** ರಾಕೇಶ್ ಸಿದ್ದರಾಮಯ್ಯರವರ ಪುಣ್ಯಸ್ಮರಣೆ ಕಾರ್ಯಕ್ರಮ, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಉಪಸ್ಥಿತರು: ಹರೀಶ್ ಮೊಗಣ್ಣ, ಲಕ್ಷ್ಮಣ್‌ರಾವ್, ವಿಕ್ಕಿ ವಾಸ್, ಪ್ರಸನ್ನ ಅಪ್ಪಿ, ವಿಜಯ್‌ಕುಮಾರ್, ರಾಣಿಪ್ರಭಾ, ಸುಶೀಲ ನಂಜಪ್ಪ, ಮುಡಾ ಪುಟ್ಟಸ್ವಾಮಿ, ಸುಶೀಲ, ಸುಧಾ, ಸರೋಜ, ನಾಗರಾಜು, ರವಿ, ಕಾರ್ತಿಕ್, ಅನಿಲ್, ಸಂತೋಷ್, ಪ್ರದೀಪ್, ಸಂಜು, ಸ್ಥಳ: ನೇತಾಜಿ ಸರ್ಕಲ್ ಹತ್ತಿರ, ಕನಕದಾಸನಗರ ದಟ್ಟಗಳ್ಳಿ, ಬೆಳಿಗ್ಗೆ 9.30ಕ್ಕೆ.
- **ವಿದ್ಯಾವರ್ಧಕ ಕಾನೂನು ಕಾಲೇಜು:** ವಿಕಾಸ ಪರ್ವ, ಪ್ರಥಮ ಬಿಎ, ಎಲ್‌ಎಲ್‌ಬಿ (5 ವರ್ಷಗಳು) ಸೇರ್ಪಡೆ ಕಾರ್ಯಕ್ರಮ, ಉದ್ಘಾಟನೆ: ಹಿರಿಯ ಸಿವಿಲ್ ಜಡ್ಜ್ ಕೆ.ಕೆ.ಅಮರ್‌ನಾಥ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು: ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಎಸ್.ಶಿವಲಿಂಗಯ್ಯ, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.
- **ಜೆಎಸ್‌ಎಸ್ ಆಸ್ಪತ್ರೆ :** ಆನ್‌ಲೈನ್ ನಡವಳಿಕೆ ಮತ್ತು ವರ್ತನಾ ವ್ಯಸನಗಳ ಹಾಗೂ ಡಿಜಿಟಲ್ ಯೋಗಕ್ಷೇಮಕ್ಕೆ ಸಂಬಂಧಿಸಿದ ವಿಶೇಷ ಚಿಕಿತ್ಸಾ ಕೇಂದ್ರ ಉದ್ಘಾಟನೆ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಉನ್ನತ ಶಿಕ್ಷಣ ಅಕಾಡೆಮಿ ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಗೌರವ ಅತಿಥಿಗಳು : ಕುಲಸಚಿವ ಡಾ. ಬಿ. ಮಂಜುನಾಥ್, ಪ್ರಿನ್ಸಿಪಾಲ್ ಡಾ. ಡಿ. ನಾರಾಯಣಪ್ಪ, ನಿರ್ದೇಶಕ ಡಾ. ಸಿ.ಪಿ. ಮಧು, ಡಾ. ವಿಜಯ ರಾಮನ್, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಒಳಾಂಗಣ, ಎಂ.ಜಿ. ರಸ್ತೆ, ಬೆಳಗ್ಗೆ 10ಕ್ಕೆ.
- **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.
- **ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಕರುಮಾರಿಯಮ್ಮನವರ ದೇವಸ್ಥಾನ ಟ್ರಸ್ಟ್ :** 95ನೇ ವರ್ಷದ ವಿಶೇಷ ಕರಗ ಮಹೋತ್ಸವ, ಬೆಳಗ್ಗೆ 8 ಗಂಟೆಗೆ ಕರಗವು ದೇವಸ್ಥಾನದಿಂದ ಹೊರಟು ಕನಕಗಿರಿಯ ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ, ಸ್ಥಳ: ದೇವಸ್ಥಾನ, ವಿದ್ಯಾರಣ್ಯಪುರಂ.
- **ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜ ಕುವೆಂಪುನಗರ :** 25ನೇ ವಾರ್ಷಿಕೋತ್ಸವ ಸಮಾರಂಭ, ಸಾನ್ನಿಧ್ಯ : ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಧ್ಯಕ್ಷತೆ : ಶ್ರೀಮತಿ ಸವಿತಾ ಸಣ್ಣತಮ್ಮೇಗೌಡ, ಮುಖ್ಯ ಅತಿಥಿಗಳಾಗಿ ಶಾಸಕರಾದ ಕೆ. ಹರೀಶ್‌ಗೌಡ, ಸಿ.ಕೆ. ವಿವೇಕಾನಂದ, ಸಿ.ಎನ್. ಮಂಜೇಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ಶ್ರೀಮತಿ ಲಲಿತಾ ಜಿ.ಟಿ. ದೇವೇಗೌಡ, ಮಾಜಿ ಶಾಸಕ ಎಲ್. ನಾಗೇಂದ್ರ, ಶಿವಣ್ಣ ಮಾಯಸಂದ್ರ, ಡಾ. ಲತಾ ರಾಜಶೇಖರ್, ಜೆ. ಗಂಗಾಧರ್, ಕೆ.ವಿ.ಶ್ರೀ, ಡಾ. ಎಂ.ಬಿ. ಮಂಜೇಗೌಡ, ಸ್ಥಳ: ಆದಿಶಕ್ತಿ ಕಾಳಮ್ಮ ಬಂದಂತಮ್ಮ ಕಲ್ಯಾಣ ಮಂಟಪ, ಬೆಳಗ್ಗೆ 10.30ಕ್ಕೆ.
- **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ಪ್ರಾಚೀನರ ಜ್ಞಾನ : ಭಾರತೀಯ ಜ್ಞಾನ ವ್ಯವಸ್ಥೆಗಳಲ್ಲಿ ಆಧ್ಯಾತ್ಮಿಕತೆ ಮತ್ತು ಸಾಂಪ್ರದಾಯಿಕ ಚಿಕಿತ್ಸೆ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಚಾಮರಾಜನಗರ ವಿವಿ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್, ಮುಖ್ಯ ಅತಿಥಿಗಳು : ಪ್ರಜ್ಞಾ ಪ್ರವಾಹದ ರಾಷ್ಟ್ರೀಯ ಸಹ ಸಂಚಾಲಕ ರಘುನಂದನ, ಅತಿಥಿಗಳು : ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಪ್ರಿನ್ಸಿಪಾಲ್ ಡಾ. ಶ್ರೀವತ್ಸ, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಆರ್. ನರಸಿಂಹ, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಶಿ, ಸ್ಥಳ: ಪ್ರೊ. ಚಿನ್ನಸ್ವಾಮಿ ಶೆಟ್ಟಿ ಸಭಾಂಗಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ–ಶೋಧನ ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ: ಡಾ.ಎಂ.ಎನ್.ಚಿಕ್ಕಮಾದು, ಪ್ರಸ್ತುತಿ: ಡಾ.ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಸದಾಶಿವ ಪಾಟೀಲ್, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.05 ಸರ್ಕೋಮ–ಜಾಗೃತಿ ಕುರಿತ ಪ್ರಾಯೋಜಿತ ಕಾರ್ಯಕ್ರಮ, 9.10 ನಮ್ಮ ಆರೋಗ್ಯ, 9.40 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ: ಜಿ.ಎನ್.ಮಂಜುನಾಥ್ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ–ಎಂ.ಆರ್.ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ–ಸಖೀ ಸಂವಾದ–ಮಕ್ಕಳಲ್ಲಿ ದೇಶಭಕ್ತಿ ಹೆಚ್ಚಿಸುವಲ್ಲಿ ಪೋಷಕರ ಪಾತ್ರ, ಪ್ರಸ್ತುತಿ–ಸಹನ ಹಾಗೂ ಕೀರ್ತನಾ ವಿ., 4.30 ವೃತ್ತಿ ಮಾರ್ಗದರ್ಶನ–ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕುರಿತು ಕ್ರಿಯಾ ಮೈಸೂರು ಸಂಸ್ಥಾಪಕ ಪ್ರಸನ್ನಕುಮಾರ್ ಕೆರಗೋಡು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸು ತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ–ಹಲೋ ಕೃಷಿರಂಗ ನೇರ ಫೋನ್–ಇನ್ ಪ್ರಾಯೋ ಜಿತ ಕಾರ್ಯಕ್ರಮ, ಪ್ರಾಯೋಜಕರು–ಕೃಷಿಇಲಾಖೆ, ಕರ್ನಾಟಕ ಸರ್ಕಾರ, ವಿಷಯ–ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆ ಅಡಿಯಲ್ಲಿ ತೋಟಗಾರಿಕಾ ಇಲಾಖಾ ಸವಲತ್ತುಗಳು, ಭಾಗವಹಿಸುತ್ತಾರೆ–ತೋಟಗಾರಿಕಾ ಅಪರ ನಿರ್ದೇಶಕರಾದ ಡಾ.ಕೆ.ಬಿದುಂಡಿ, 7.20 ಪರಾಗ–ಬೇಸಾಯದ ಬದುಕು ಸರಾಗ, 7.45 ಕನ್ನಡದಲ್ಲಿ ಭಾಷಣ, 8.00 ಸಂಸತ್ ಸಮೀಕ್ಷಾ, 8.15 ವಿಜ್ಞಾನ ಭಾರತಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ

- **ಪ್ರಾದೇಶಿಕ ಶಿಕ್ಷಣ ಸಂಸ್ಥೆ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ, ನವದೆಹಲಿ :** 63ನೇ ಸಂಸ್ಥಾಪನಾ ದಿನಾಚರಣೆ, ಮುಖ್ಯ ಅತಿಥಿಗಳು : ಎನ್‌ಸಿಇಆರ್‌ಟಿ, ನವದೆಹಲಿ ನಿರ್ದೇಶಕ ಪ್ರೊ. ದಿನೇಶ್ ಪ್ರಸಾದ್ ಸಕ್ಲಾನಿ, ಗೌರವ ಅತಿಥಿಗಳು : ಆಯಿಷ್ ನಿರ್ದೇಶಕರಾದ ಪ್ರೊ. ಎಂ. ಪುಷ್ಪಾವತಿ, ಸ್ಥಳ : ಡಾ. ರಾಧಾಕೃಷ್ಣನ್ ಸಭಾಂಗಣ, ಬೆಳಗ್ಗೆ 11.30ಕ್ಕೆ
- **ನನ್ನವ್ವ ಸಾಂಸ್ಕೃತಿಕ ಕಲಾ ತಂಡ :** ಕನ್ನಡ ರಾಜ್ಯೋತ್ಸವ–2025, ರಾಜ್ಯ ಮಟ್ಟದ ಕವಿಗೋಷ್ಠಿ ಮತ್ತು ಸಾಧಕರಿಗೆ ಸನ್ಮಾನ ಸಮಾರಂಭ, ಉದ್ಘಾಟನೆ : ಸುತ್ತೂರು ಗ್ರಾಪಂ ಅಧ್ಯಕ್ಷ ಜೀಮಾರಹಳ್ಳಿ ರಂಗಸ್ವಾಮಿ, ಅಧ್ಯಕ್ಷತೆ : ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಆಕಾಶವಾಣಿ ನಿವೃತ್ತ ಕಾರ್ಯಕ್ರಮಾಧಿಕಾರಿ ಎನ್.ವಿ. ರಮೇಶ್ ಅವರಿಂದ ಕನ್ನಡ ಭಾಷೆ ಉಳಿಸಿ ಬೆಳೆಸಿ ಕುರಿತು ಉಪನ್ಯಾಸ, ಉಪಸ್ಥಿತರು : ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಎಸ್. ಉಮೇಶ್, ಸಾಹಿತಿ ರವಿಕುಮಾರ್ ಕುಮಾರನಪುರ, ಸ್ಥಳ: ನಮನ ಕಲಾ ಮಂಟಪ, ಅಶೋಕ ವೃತ್ತ, ಬಲ್ಲಾಳ್ ಸರ್ಕಲ್, ಮಧ್ಯಾಹ್ನ 2ಕ್ಕೆ.
- **ಸುಶಿರ, ಶ್ರೀ ವಿ. ದೇಶಿಕಾಚಾರ್ ಅಕಾಡೆಮಿ ಆಫ್ ಮ್ಯೂಸಿಕ್ :** ವಾರ್ಷಿಕ ಸಂಗೀತ ಸಂಭ್ರಮ, ವಿದ್ವಾನ್ ಯೋಗ ಕೀರ್ತನ ಅವರಿಂದ ಗಾಯನ, ವಿದ್ವಾನ್ ಕೇಶವ್ ಮೋಹನ್ ಕುಮಾರ್–ವಯೋಲಿನ್, ವಿದ್ವಾನ್ ಜಿ.ಎಸ್. ರಾಮಾನುಜಮ್ –ಮೃದಂಗ, ವಿದ್ವಾನ್ ಸುನಾದ್ ಅನೂರ್–ಖಂಜೀರಾ, ಸ್ಥಳ: ಸುಶಿರ ಸಭಾಂಗಣ, ಕುವೆಂಪುನಗರ, ಸಂಜೆ 6ಕ್ಕೆ.
- **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು, ವಾಚನ : ವಿಶ್ರಾಂತ ಕಾರ್ಯಪಾಲಕ ಅಭಿಯಂತರ ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.
- **ಗಾನಭಾರತೀ :** ವಿದುಷಿ ದಾತ್ರಿ ಹೆಚ್. ಕುಮಾರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಅಮೋಘ್ ನಡಾದುರ್ –ವಯೋಲಿನ್, ವಿದ್ವಾನ್ ಬಿ.ಎಸ್. ಆನಂದ್–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.
- **ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ :** ಶುಕ್ರವಾರ ಸ್ವಾತಿ ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ, ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ, ಸಂಜೆ 7.30ಕ್ಕೆ ಪ್ರಾಕಾರೋತ್ಸವ, ಸ್ಥಳ: ದೇವಸ್ಥಾನ, ಕಾಳಿದಾಸ ರಸ್ತೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಆಗಸ್ಟ್ 1 ಶುಕ್ರವಾರ 2025



ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 106 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಹೊರಗಿಂದ ಸಾಮಾನ್ಯ ಶೆಡ್; ಒಳಗಡೆ ಎಸಿಯಡಿ ಕೂಲ್ ಆಗಿ ನಡಿತಿತ್ತು ಡ್ರಗ್ಸ್ ದಂಧೆ

- ಮಹಾರಾಷ್ಟ್ರ ಪೊಲೀಸರು ಬಯಲಿಗೆಳೆದ ಮೈಸೂರು ಡ್ರಗ್ಸ್ ಫ್ಯಾಕ್ಟ್ರಿ ಚಿತ್ರಣ
- ಸ್ಥಳೀಯ ಪೊಲೀಸರಿಂದ ಸ್ಥಳ ಮಹಜರು
- ಈ ಶೆಡ್ ಅಜ್ಮಲ್ ಎಂಬುವರಿಗೆ ಸೇರಿದ್ದು; ಪೊಲೀಸರ ಮಾಹಿತಿ



ಮೈಸೂರಿನ ರಿಂಗ್ ರಸ್ತೆಯಲ್ಲಿರುವ ಡ್ರಗ್ಸ್ ತಯಾರಿಕಾ ಘಟಕ.

ಮೈಸೂರು, ಜು.31– ರಿಂಗ್ ರಸ್ತೆಯ ಸರ್ವೀಸ್ ರಸ್ತೆಗೆ ಹೊಂದಿಕೊಂಡಂತೆ ತಗಡು ಶೀಟ್‌ಗಳಿಂದ ನಿರ್ಮಿಸಿರುವ ಸಾಧಾರಣ ಶೆಡ್ ಅದು. ಅದರೊಳಗೆ ಎರಡು ಕಾರುಗಳನ್ನು ನಿಲ್ಲಿಸಿದ್ದು, ಕಾರ್ ಗ್ಯಾರೇಜ್‌ನಂತೆ ಕಂಡುಬರುತ್ತದೆ. ಇದು ಹೊರನೋಟಕ್ಕೆ ಮಾತ್ರ. ಈ ಶೆಡ್‌ನಲ್ಲಿ ಪ್ರತ್ಯೇಕವಾಗಿ 3 ಕೋಣೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಮಾಡಲಾಗಿದೆ. ಎಸಿ, ಎಕ್ಸಿಟ್ ಫ್ಯಾನ್ ಅಳವಡಿಸಿರುವ ಐಷಾರಾಮಿ ಕೋಣೆಗಳವು.

ಈ ಕಾರ್ ಶೆಡ್ ಸಾಮಾನ್ಯವಾದುದಲ್ಲ! ಜುಲೈ 26ರಂದು ಮಹಾರಾಷ್ಟ್ರ ಪೊಲೀಸರು ಮೈಸೂರು ಪೊಲೀಸರ ಸಹಕಾರದೊಂದಿಗೆ ದಾಳಿ ನಡೆಸಿ 390 ಕೋಟಿ ರೂ. ಮೌಲ್ಯದ ಎಂಡಿಎಂಎ ಡ್ರಗ್ಸ್ ವಶಪಡಿಸಿಕೊಂಡು ನಾಲ್ವರನ್ನು ಬಂಧಿಸಿದ್ದ ಶೆಡ್‌ನ ಅಸಲಿ ಚಿತ್ರಣವಿದು.

ಮಹಾರಾಷ್ಟ್ರ ಪೊಲೀಸರು ಜುಲೈ 26ರಂದು ತಮ್ಮ ಕಾರ್ಯಾಚರಣೆ ಮುಗಿಸಿ ವಶಕ್ಕೆ ಪಡೆದಿದ್ದ ಮೈಸೂರಿನ ಓರ್ವ ಸೇರಿದಂತೆ ನಾಲ್ವರನ್ನು ಕರೆದೊಯ್ದ ನಂತರ ನರಸಿಂಹರಾಜ ಠಾಣಾ ಪೊಲೀಸರು ಈ ಶೆಡ್ ಅನ್ನು ಪರಿಶೀಲಿಸಲು ನಿರ್ಧರಿಸಿದರು. ಠಾಣೆಯ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ಅವರು ಎನ್.ಆರ್. ಉಪ ವಿಭಾಗದ ಎಸಿಪಿ ಅವರ ಅನುಮತಿ ಪಡೆದು, ಎಫ್‌ಎಸ್‌ಎಲ್ ತಂಡವನ್ನು ಕರೆಸಿಕೊಂಡು ಜುಲೈ 28ರಂದು ಪರಿಶೀಲಿಸಿದ ವೇಳೆ ಹೊರನೋಟಕ್ಕೆ ಸಾಧಾರಣ ಶೆಡ್‌ನಂತೆ ಕಾಣುತ್ತಿದ್ದ ಇಲ್ಲಿ ಐಷಾರಾಮಿ ಸೌಲಭ್ಯಗಳನ್ನು ಕಲ್ಪಿಸಿಕೊಂಡಿರುವುದು ಕಂಡುಬಂದಿದೆ.

ಅಂದು ಪೊಲೀಸರು ಶೆಡ್‌ನ ಮಾಲೀಕ ಅಜ್ಮಲ್ ಸಂಬಂಧಿಕರಿಂದ ಶೆಡ್‌ನ ಕೀ ತರಿಸಿಕೊಂಡು ಒಳ ಪ್ರವೇಶಿಸಿದಾಗ ಅಲ್ಲಿ ರಿಪೇರಿಗೆ ನಿಲ್ಲಿಸಿದ್ದ 2 ಕಾರುಗಳು ಕಂಡುಬಂತು. ಅದರ ಉತ್ತರ ದಿಕ್ಕಿನ ಬಾಗಿಲನ್ನು ತೆರೆದು ನೋಡಿದ ಪೊಲೀಸರಿಗೆ ಅಚ್ಚರಿ ಕಾದಿತ್ತು. ಆ ಕೋಣೆಯ ಈಶಾನ್ಯ ಮೂಲೆಯಲ್ಲಿ ಮತ್ತೊಂದು ಬಾಗಿಲು ಇರುವುದು ಕಂಡುಬಂದಿದೆ. ಅದನ್ನು ತೆರೆದು ಒಳ ಪ್ರವೇಶಿಸಿದರೆ, 10X12 ಅಡಿ ವಿಸ್ತೀರ್ಣವಿದ್ದ ಈ ಕೋಣೆಗೆ ಎಸಿ ಅಳವಡಿಸಲಾಗಿದೆ. ಅಲ್ಲಿ ಕೆಲವು ಟೇಬಲ್‌ಗಳನ್ನಿಟ್ಟಿದ್ದು, ಅದರ ಮೇಲೆ ಹರಡಿದ್ದ ರಾಸಾಯನಿಕ ವಸ್ತುಗಳನ್ನು ಎಫ್‌ಎಸ್‌ಎಲ್ ಅಧಿಕಾರಿಗಳು ಪರಿಶೀಲಿಸಿದಾಗ ಅದು ಮಾದಕ ವಸ್ತು ಎಂಬುದು ತಿಳಿದುಬಂದಿದೆ. ಅದರ ಉತ್ತರ ದಿಕ್ಕಿನಲ್ಲಿ ಮತ್ತೊಂದು ಕೊಠಡಿ. ಆ ಕೊಠಡಿ ಪ್ರವೇಶಿಸಿದರೆ ಅದಕ್ಕೆ ಎಕ್ಸಿಟ್ ಫ್ಯಾನ್ ಅಳವಡಿಸಿರುವುದು ಕಂಡುಬಂದಿದೆ. ಅದು ಮಾತ್ರವಲ್ಲ. ಎಸಿ ಅಳವಡಿಸಿದ್ದ ಕೊಠಡಿಯಲ್ಲಿ ಸೆಲ್ಲರ್‌ನಂತಹ ಒಂದು ಭಾಗವನ್ನು ರಚಿಸಿದ್ದು, ಮೇಲಕ್ಕೆ ಹೋಗಲು ಕಬ್ಬಿಣದ ಮೆಟ್ಟಿಲುಗಳೂ ಕೂಡ ಇತ್ತು.

ಅಲ್ಲಿ ದೊಡ್ಡ ದೊಡ್ಡ ಬಲ್ಬ್‌ಗಳನ್ನು ಅಳವಡಿಸಿದ್ದು, ಪೇಪರ್ ಶೀಟ್‌ಗಳ ಮೇಲೆ ರಾಸಾಯನ ಪದಾರ್ಥ ಒಣಗಿಸಿರುವುದು ಕಂಡುಬಂತು. ಅಂದರೆ ದ್ರವರೂಪದಲ್ಲಿ ಇದ್ದ ಮಾದಕ ವಸ್ತುವನ್ನು ದೊಡ್ಡ ದೊಡ್ಡ ಬಲ್ಬ್‌ಗಳ ಶಾಖದಿಂದ ಒಣಗಿಸಲಾಗುತ್ತಿತ್ತು ಎಂದು ಹೇಳಲಾಗಿದೆ. ಈ ಕೋಣೆಗಳಲ್ಲಿ ದೊರೆತ ವಸ್ತುಗಳನ್ನು ಎಫ್‌ಎಸ್‌ಎಲ್ ಅಧಿಕಾರಿಗಳು ಸಂಗ್ರಹಿಸಿಕೊಂಡಿದ್ದಾರೆ. ಈ ಪರಿಶೀಲನೆ ಪೂರ್ಣಗೊಂಡ ನಂತರ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ಅವರು ತಾವೇ ಕಾರ್ಯ ನಿರ್ವಹಿಸುತ್ತಿರುವ ಎನ್.ಆರ್. ಠಾಣೆಯಲ್ಲಿ ಶೆಡ್‌ನ ಮಾಲೀಕ ಅಜ್ಮಲ್ ಮತ್ತು ಎಂಡಿಎಂಎ ಡ್ರಗ್ಸ್ ತಯಾರಿಸುತ್ತಿದ್ದವರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಕೆಬಿಜಿಯವರ ಸ್ಮರಣೆಯಲ್ಲಿ...

■ ಪುಟ–4

ನಾಯಕತ್ವ ಬದಲಾವಣೆ ಅನಿವಾರ್ಯವಾದರೆ ದಲಿತರಿಗೆ ಅವಕಾಶ ನೀಡಿ

- ಡಾ. ಪರಮೇಶ್ವರ್ ನೇತೃತ್ವದಲ್ಲಿ ಶೀಘ್ರ ನಿರ್ಣಯ ಕೈಗೊಂಡು ಹೈಕಮಾಂಡ್‌ಗೆ ಸಂದೇಶ
- ಒಳ ಮೀಸಲಾತಿ ಗೊಂದಲ ನಿವಾರಣೆ ಸಂಬಂಧ ಆ.2ರಂದು ಕರೆದಿರುವ ಸಭೆಯಲ್ಲಿ ಈ ಬಗ್ಗೆಯೂ ನಿರ್ಣಯ



ಬೆಂಗಳೂರು, ಜು.31(ಕೆಎಂಶಿ)–ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಸಮಯ ಬಂದರೆ ದಲಿತರಿಗೆ ಅಧಿಕಾರ ನೀಡಬೇಕು ಎಂದು ಪಕ್ಷದ ವರಿಷ್ಠರನ್ನು ಒತ್ತಾಯಿಸಲು ಗೃಹ ಸಚಿವ ಡಾ.ಜಿ.ಪರಮೇಶ್ವರ್ ನೇತೃತ್ವದಲ್ಲಿ ನಿರ್ಣಯ ಕೈಗೊಳ್ಳಲು ಸಮುದಾಯ ಮುಂದಾಗಿದೆ.

ಸಮುದಾಯಕ್ಕೆ ಸೇರಿದ ಸಚಿವರು ಮತ್ತು ಶಾಸಕರು ಆಗಸ್ಟ್ 2ರಂದು ಡಾ.ಪರಮೇಶ್ವರ್ ಮನೆಯಲ್ಲೇ ಸಭೆ ಸೇರಿ ಈ ತೀರ್ಮಾನಕ್ಕೆ ಬರಲಿದ್ದಾರೆ. ಒಳ ಮೀಸಲಾತಿ ಗೊಂದಲ ಸರಿಪಡಿಸುವ ಚರ್ಚೆ ನೆಪದಲ್ಲಿ ರಾಜ್ಯ ರಾಜಕೀಯ ನಿರ್ಧಾರ ಕೈಗೊಳ್ಳಲಿದ್ದಾರೆ.

ಅಂದಿನ ಸಭೆಗೆ ದಲಿತ ಸಮುದಾಯಕ್ಕೆ ಸೇರಿದ ಎಡಗೈ ಮತ್ತು ಬಲಗೈ ಗುಂಪಿನ ಜನಪ್ರತಿನಿಧಿಗಳಿಗೆ ಖುದ್ದು ಡಾ.ಪರಮೇಶ್ವರ್ ಅವರೇ ಸಂದೇಶ ರವಾನೆ ಮಾಡಿದ್ದಾರೆ, ಈ ಸಭೆಗೆ ಪರಿಶಿಷ್ಟ ಪಂಗಡದ ಸಚಿವರು ಮತ್ತು ಶಾಸಕರಿಗೆ ಆಹ್ವಾನ ಇಲ್ಲ. ಕಳೆದ ಕೆಲವು ತಿಂಗಳ ಹಿಂದೆ ಇಂತಹದ್ದೇ ಠರಾವು ಹೊರಡಿಸುವುದರ ಜೊತೆಗೆ ತುಮಕೂರಿನಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದವರ ಬೃಹತ್ ಸಮಾವೇಶ ನಡೆಸಿ ಶಕ್ತಿ ಪ್ರದರ್ಶನಕ್ಕೆ ಡಾ.ಪರಮೇಶ್ವರ್ ಖಾಸಗಿ ಹೋಟೆಲ್‌ನಲ್ಲಿ ಔತಣ ಕೂಟ ಸಭೆ ಏರ್ಪಡಿಸಿದ್ದರು.

ದಲಿತ ಸಮುದಾಯಕ್ಕೆ ಸೇರಿದ ವರ್ಗಗಳು ಸಭೆ ನಡೆಸುವ ಮಾಹಿತಿ ಲಭ್ಯವಾಗುತ್ತಿದ್ದಂತೆ ಎಐಸಿಸಿ ಮಧ್ಯಪ್ರವೇಶಿಸಿ ಡಾ.ಪರಮೇಶ್ವರ್ ಅವರಿಗೆ ಸಭೆ ಮುಂದೂಡುವಂತೆ ಆದೇಶಿಸಿತ್ತು. ಅಧಿಕಾರ ಹಸ್ತಾಂತರ ವಿಷಯ ಮುನ್ನೆಲೆಗೆ ಬಂದ ಹಿನ್ನೆಲೆಯಲ್ಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಹ ತಮಗೆ ರಾಜ್ಯದಲ್ಲಿ ಹೇಗೆ ಅವಕಾಶ ತಪ್ಪಿತು ಎಂಬ ಬಗ್ಗೆ ಬಹಿರಂಗ ಹೇಳಿಕೆ ನೀಡಿದ್ದರು. ಇದರ ಬೆನ್ನಲ್ಲೇ ಡಾ.ಪರಮೇಶ್ವರ್ ಒಳ ಮೀಸಲಾತಿ ವಿಚಾರವನ್ನೂ ಮುಂದಿಟ್ಟುಕೊಂಡು ಆಡಳಿತ ಪಕ್ಷದ ದಲಿತ ಜನಪ್ರತಿನಿಧಿಗಳ ಸಭೆ ಕರೆದಿದ್ದಾರೆ. ಸಭೆಯಲ್ಲಿ ಮೂರು ನಿರ್ಣಯಗಳನ್ನು ಕೈಗೊಂಡು ವರಿಷ್ಠರಿಗೆ ಸಂದೇಶ ತಲುಪಿಸಲು ಈ ಸಮುದಾಯ ತೀರ್ಮಾನಿಸಿದೆ. ಕರ್ನಾಟಕದಲ್ಲಿ ಅಧಿಕಾರ ಹಸ್ತಾಂತರ ಸಂದರ್ಭ ಬಂದಲ್ಲಿ ಪಕ್ಷಕ್ಕೆ ಬೆನ್ನೆಲುಬಾಗಿರುವ ದಲಿತ ಸಮುದಾಯಕ್ಕೆ ಅವಕಾಶ ಮಾಡಿಕೊಡಬೇಕು.

ಹಿಂದೆ ಎರಡು–ಮೂರು ಬಾರಿ ನಮ್ಮ ಸಮುದಾಯಕ್ಕೆ ದೊರಕಬೇಕಾಗಿದ್ದ ಅವಕಾಶ ತಪ್ಪಿದೆ. ಈ ಬಾರಿ ನಮ್ಮನ್ನು ಕಡೆಗಣಿಸಬಾರದು ಎಂಬ ಸಂದೇಶ ರವಾನೆ ಮಾಡಲಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಾ.ಪರಮೇಶ್ವರ್, ಒಳ ಮೀಸಲಾತಿ ಕುರಿತು ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿ ನೀಡುವ ಮೊದಲು ಚರ್ಚೆ ನಡೆಸಿ ಅಭಿಪ್ರಾಯಗಳನ್ನು ಸರಿಪಡಿಸಿಕೊಳ್ಳಲು ಸಭೆ ಕರೆಯಲಾಗಿದೆ. ಈ ವಿಚಾರದಲ್ಲಿ ಯಾರಿಗೂ ಬೇಸರ ಆಗುವುದು ಬೇಡ, ಚರ್ಚೆ ನಂತರ ಅಭಿಪ್ರಾಯಗಳು ಗೊತ್ತಾಗಲಿವೆ. ಒಳ ಪಂಗಡಗಳ ಕುರಿತು ಚರ್ಚೆ ಮಾಡುವುದು ಸೂಕ್ತ, ಒಳಮೀಸಲಾತಿಗೆ ಸಂಬಂಧಿಸಿದಂತೆ ಶಾಸಕರು ಅಭಿಪ್ರಾಯ ವ್ಯಕ್ತಪಡಿಸಲು ಯಾವುದೇ ಅಡ್ಡಿ ಇಲ್ಲ ಎಂದರು.

ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಇಂದು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ

ಕೇಂದ್ರದ ಮಾಜಿ ಸಚಿವ ನಾರಾಯಣಸ್ವಾಮಿ ಮಾಹಿತಿ

ಬೆಂಗಳೂರು, ಜು.31– ರಾಜ್ಯದ ಸುಮಾರು 26 ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ನಾಳೆ (ಶುಕ್ರವಾರ) ಮಾದಿಗ ಸಮುದಾಯಗಳಿಂದ ಒಳ ಮೀಸಲಾತಿಗೆ ಆಗ್ರಹಿಸಿ ಹೋರಾಟ ನಡೆಯಲಿದೆ ಎಂದು ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾದಿಗರ ಸಂಘಟನೆಗಳ ಸಭೆ ನಡೆಸಿ, ಎಲ್ಲಾ ಜಿಲ್ಲೆಗಳಲ್ಲಿ ಹೋರಾಟಕ್ಕೆ ಸಿದ್ಧತೆ ನಡೆದಿದೆ. ವಿದ್ಯಾರ್ಥಿಗಳು ಸೇರಿದಂತೆ ಸಮುದಾಯದ ಜನರು ಈ ಹೋರಾಟದಲ್ಲಿ ಭಾಗವಹಿಸಬೇಕು ಎಂದಿದ್ದಾರೆ.

ಸದನ ಮುಗಿಯುವ ಒಳಗೆ ಒಳ ಮೀಸಲಾತಿ ಜಾರಿಗೊಳಿಸದೇ ಇದ್ದಲ್ಲಿ ಕಾಂಗ್ರೆಸ್ ಸರ್ಕಾರದ ಮೇಲಿನ ಅನುಮಾನ ದುಪ್ಪಟ್ಟಾಗಲಿದೆ. ಮಾದಿಗರನ್ನು ತಾತ್ಸಾರವಾಗಿ ನೋಡುವುದು ನಿಮ್ಮ ನಿರ್ಲಕ್ಷ್ಯ

■ 6ನೇ ಪುಟಕ್ಕೆ

ಮುಡಾ ಹಗರಣ

ನಿವೃತ್ತ ನ್ಯಾ. ಪಿ.ಎನ್.ದೇಸಾಯಿ ಆಯೋಗದ ವರದಿ ಸಲ್ಲಿಕೆ


ನಿವೃತ್ತ ನ್ಯಾ. ನ್ಯಾ. ಪಿ.ಎನ್.ದೇಸಾಯಿ ಅವರು ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಮುಡಾ ಸಂಬಂಧಿತ ತನಿಖಾ ವರದಿಯನ್ನು ಸಲ್ಲಿಸಿದರು.

ಬೆಂಗಳೂರು, ಜು.31– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ತನಿಖೆ ನಡೆಸಿದ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಆಯೋಗ ಗುರುವಾರ ಸರ್ಕಾರಕ್ಕೆ ವರದಿ ಸಲ್ಲಿಸಿದೆ.

ವಿಧಾನಸೌಧದ ಮುಖ್ಯಕಾರ್ಯದರ್ಶಿಗಳ ಕೊಠಡಿಯಲ್ಲಿ ಸರ್ಕಾರದ ಪರವಾಗಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವರದಿ ಸ್ವೀಕರಿಸಿದರು. ನ್ಯಾ. ಪಿ.ಎನ್.ದೇಸಾಯಿ ಏಕಸದಸ್ಯ ಆಯೋಗ ಸರ್ಕಾರಕ್ಕೆ ಆರು ಸಂಪುಟಗಳ ವರದಿ ಸಲ್ಲಿಸಿದೆ. ಮುಂದಿನ ಕ್ಯಾಬಿನೆಟ್‌ನಲ್ಲಿ ವರದಿ ಮಂಡಿಸುವ ಸಾಧ್ಯತೆಯಿದ್ದು, ವರದಿ ಆಧರಿಸಿ ಕ್ರಮಕ್ಕೆ ಮುಂದಾಗುತ್ತಾ ಸರ್ಕಾರ ಕಾದುನೋಡಬೇಕಿದೆ.

ಕೆಲ ರಾಜಕಾರಣಿಗಳು, ಅಧಿಕಾರಿಗಳು, ಬಿಲ್ಡರ್‌ಗಳಿಗೆ ಸಂಕಷ್ಟವೋ, ರಿಲೀಫ್ ಸಿಗುತ್ತೋ ಎಂಬ ಕುತೂಹಲವಿದೆ. ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಮುಡಾದಿಂದ ಬದಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಬಂದ ಕಾರಣದಿಂದ ವಿಚಾರಣಾ ಆಯೋಗ ರಚಿಸಲಾಗಿತ್ತು.

■ 6ನೇ ಪುಟಕ್ಕೆ

ಇದೇ ಮೊದಲು ಆನ್‌ಲೈನ್ ಕೌನ್ಸೆಲಿಂಗ್ ಮೂಲಕ ಗ್ರಾಪಂ ಸಿಬ್ಬಂದಿ ವರ್ಗಾವರ್ಗಿ

ಬೆಂಗಳೂರು, ಜು.31(ಕೆಎಂಶಿ)–ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಆನ್‌ಲೈನ್ ಕೌನ್ಸೆಲಿಂಗ್ ಮೂಲಕ 31 ಜಿಲ್ಲೆಗಳ ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್–1 ಮತ್ತು ಗ್ರೇಡ್–2 ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವರ್ಗಾವಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಸಂಬಂಧ ಮಾಹಿತಿ ನೀಡಿರುವ ಅವರು, 31 ಜಿಲ್ಲೆಗಳ ಒಟ್ಟು 2,697 ನೌಕರರಿಂದ ವರ್ಗಾವಣೆ ಅರ್ಜಿ ಸ್ವೀಕೃತವಾಗಿದ್ದು, ಇವುಗಳ ಪರಿಶೀಲನೆ ನಂತರ ಅರ್ಹತೆ ಹೊಂದಿದ 1,300 ನೌಕರರಿಗೆ ಆನ್‌ಲೈನ್ ಮೂಲಕವೇ ಕೌನ್ಸೆಲಿಂಗ್ ನಡೆಸಿ, ಜಿಪಂ ಸಿಇಓ ಡಿಜಿಟಲ್ ಸಹಿಯೊಂದಿಗೆ ಆದೇಶಗಳನ್ನು ಸ್ಥಳದಲ್ಲೇ ನೀಡಲಾಯಿತು ಎಂದಿದ್ದಾರೆ.

ಮೊದಲ ಹಾಗೂ ದ್ವಿತೀಯ ಸುತ್ತಿನಲ್ಲಿ ವಿಶೇಷ ಪ್ರಕರಣಗಳಾದ ಗಂಭೀರ ಅನಾರೋಗ್ಯ, ವಿಶೇಷಚೇತನರು ಹಾಗೂ ಪತಿ–ಪತ್ನಿ ಪ್ರಕರಣಗಳ ವರ್ಗಾವಣೆ ಕೌನ್ಸೆಲಿಂಗ್ ಅನ್ನು ಜುಲೈ 25ರಂದು ನಡೆಸಿ 161 ನೌಕರರಿಗೆ ಹಾಗೂ ಎರಡನೇ ಹಂತದಲ್ಲಿ ಸಾಮಾನ್ಯ ಕೋರಿಕೆ ಪ್ರಕರಣಗಳ 619 ನೌಕರರಿಗೆ ಜುಲೈ 28ರಂದು ಹಾಗೂ ಕೊನೆಯ ಹಂತದಲ್ಲಿ ಕಡ್ಡಾಯ ವರ್ಗಾವಣೆ ಕೌನ್ಸೆಲಿಂಗ್ ಅನ್ನು ಜುಲೈ 29 ಮತ್ತು 30ರಂದು ಕೈಗೊಂಡು 520 ನೌಕರರಿಗೆ ಡಿಜಿಟಲ್ ಸಹಿ ಮಾಡಿದ ವರ್ಗಾವಣೆ ಆದೇಶಗಳನ್ನು ನೀಡಲಾಯಿತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಡಳಿತದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವ ಜೊತೆಗೆ ದಕ್ಷತೆ ಹೆಚ್ಚಿಸುವಲ್ಲಿ ದಿಟ್ಟ ಹೆಜ್ಜೆ ಇರಿಸಿದೆ ಎಂದಿದ್ದಾರೆ.

ದಸರಾ ವಸ್ತುಪ್ರದರ್ಶನದಲ್ಲಿ ಬೇಲೂರು, ಹಳೇಬೀಡು ಕಲಾ ಮಾದರಿ ವಾಣಿಜ್ಯ ಬ್ಲಾಕ್, ಸಂಗೀತ ಕಾರಂಜಿ, ಡ್ರ್ಯಾಗನ್ ಕೊಳ ಆಕರ್ಷಣೆ

- ದಸರೆಗೂ ಮುನ್ನ ವಸ್ತುಪ್ರದರ್ಶನ ಸಂಪೂರ್ಣ ಸಜ್ಜುಗೊಳಿಸಲು ಭರದ ಸಿದ್ಧತೆ
- ವಸ್ತುಪ್ರದರ್ಶನ ಅಭಿವೃದ್ಧಿಗೆ 23.59 ಕೋಟಿ ರೂ. ಅನುದಾನ ಬಿಡುಗಡೆ


ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಈಗ ವಿವಿಧ ಆಕರ್ಷಕ ನಿರ್ಮಾಣಗಳ ಕಾಮಗಾರಿಗಳು ಭರದಿಂದ ಸಾಗಿವೆ.

ಮೈಸೂರು, ಜು.31(ಜಿಎ)– ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಬೇಲೂರು, ಹಳೇಬೀಡು ಮಾದರಿಯ ಎ ಬ್ಲಾಕ್ ವಾಣಿಜ್ಯ ಮಳಿಗೆ, ಸಂಗೀತ ಕಾರಂಜಿ, ಡ್ರ್ಯಾಗನ್ ಕೊಳದ ಕಾಮಗಾರಿ ಆರಂಭವಾಗಿದ್ದು, ಈ ಬಾರಿ ದಸರಾ ಮಹೋತ್ಸವ ಉದ್ಘಾಟನೆಗೂ ಮುನ್ನ ವಸ್ತುಪ್ರದರ್ಶನ ಸಂಪೂರ್ಣ ಸಜ್ಜಾಗಲಿದೆ.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಜು.19ರಂದು ನಡೆದ ಸಾಧನ ಸಮಾವೇಶದಲ್ಲಿ ಮುಖ್ಯಮಂತ್ರಿಗಳು 2,578 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗೆ ಚಾಲನೆ ನೀಡಿದ್ದು, ಅದರಲ್ಲಿ ದಸರಾ ವಸ್ತುಪ್ರದರ್ಶನ ಆವರಣದ ಎ ಬ್ಲಾಕ್, ಕಾರಂಜಿ, ಡ್ರ್ಯಾಗನ್ ಪಾಯಿಂಟ್ ಅಭಿವೃದ್ಧಿಗೆ 23.59 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಅದರಂತೆ ಈಗಾಗಲೇ ವಸ್ತುಪ್ರದರ್ಶನ ಆವರಣದಲ್ಲಿ ಕಾಮಗಾರಿಗಳು ಆರಂಭವಾಗಿದ್ದು, ದಸರಾ ವಸ್ತುಪ್ರದರ್ಶನ ಉದ್ಘಾಟನೆಯಾಗುವ ಮುನ್ನ ಸಂಪೂರ್ಣ ಕಾಮಗಾರಿ ಪೂರ್ಣಗೊಳಿಸುವ ಚಿಂತನೆ ನಡೆಸಲಾಗಿದೆ. ಇದಕ್ಕಾಗಿ ಎರಡು ಪಾಳಿಯಲ್ಲಿ ಕಾಮಗಾರಿ ಬಿರುಸಿನಿಂದ ಸಾಗಿದೆ. ಪ್ರತಿ ವರ್ಷ ದಸರಾ ಉದ್ಘಾಟನೆಯಾಗುವ ದಿನದಂದು ದಸರಾ ವಸ್ತುಪ್ರದರ್ಶನದ ಮಳಿಗೆಗಳು ಪೂರ್ಣಗೊಳ್ಳಬೇಕು ಎಂದು ಮುಖ್ಯಮಂತ್ರಿಗಳು ದಸರಾ ಉನ್ನತ ಮಟ್ಟದ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡುತ್ತಾರೆ. ಆದರೆ, ಯಾವ ವರ್ಷವೂ ಪೂರ್ಣ ಪ್ರಮಾಣದಲ್ಲಿ ಮಳಿಗೆಗಳು ಉದ್ಘಾಟನೆಯಾಗುವುದಿಲ್ಲ. 2024ರ ದಸರಾ ಮಹೋತ್ಸವದ ವೇಳೆಯಲ್ಲಿ ಕರ್ನಾಟಕ ವಸ್ತುಪ್ರದರ್ಶನದ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮುತುವರ್ಜಿ ವಹಿಸಿ ವಸ್ತುಪ್ರದರ್ಶನದಲ್ಲಿ ಸಾಕಷ್ಟು ಬದಲಾವಣೆ ತಂದು ಶೇ.95ರಷ್ಟು ಮಳಿಗೆಗಳು ಪೂರ್ಣಗೊಂಡಿತ್ತು. ಅದಕ್ಕೆ ಮುಖ್ಯಮಂತ್ರಿಗಳು

■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಸರ್ದಾರ್ಜಿ : ಬಸ್ ಸ್ಟ್ಯಾಂಡಿಗೆ ಹೋಗಕ್ಕೆ ಎಷ್ಟು ದುಡ್ಡು ತೆಗೊಳ್ತಿಯಾ?
ಆಟೋ ಡ್ರೈವರ್ : 20 ರೂಪಾಯಿ
ಸರ್ದಾರ್ಜಿ : ಎರಡು ರೂಪಾಯಿ ಕೊಡ್ತೀನಿ, ಬರಲ್ವ?
ಆಟೋ ಡ್ರೈವರ್ : ಎರಡು ರೂಪಾಯಿಗೆ ಯಾರು ಕರ್ಕೊಂಡೋಗಲ್ಲ.
ಸರ್ದಾರ್ಜಿ : ನಾನೇ ಕರ್ಕೊಂಡೋಗ್ತಿನಿ. ನೀನು ಹಿಂದೆ ಕುತ್ಕೋ!

ಮೈಸೂರು ಮಿತ್ರ
ಶುಕ್ರವಾರ, 1 ಆಗಸ್ಟ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಮನಸ್ಸಿನಲ್ಲಿ ಕೊಳಕು ತುಂಬಿಕೊಂಡು ಹೊರಗಡೆ ಚಿನ್ನದಂತೆ ಹೊಳೆಯುವ ಬದಲು ಒಳಗಡೆ ಜೇನಿನಂತೆ ಸಿಹಿ ತುಂಬಿಕೊಂಡು ಹೊರಗಡೆ ಮಣ್ಣಿನ ಮಡಿಕೆಯಂತೆ ಇದ್ದರೂ ಪರವಾಗಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಯಲೆಲ್ಲಾ ವೇದಾಂತ, ಮಾಡುವುದೆಲ್ಲಾ ರಾದ್ಧಾಂತ.

ನಿಮ್ಮ ಪತ್ರಗಳು

ನಾಯಿಗಳ ಉಪಟಳಕ್ಕೆ ಕೊನೆ ಎಂದು?



ಮಾನ್ಯರೆ,

ಮೈಸೂರಿನ ವಿಜಯನಗರದ ವಾಟರ್ ಟ್ಯಾಂಕ್ ವೃತ್ತ (ಡಾಲ್ಫಿನ್ ಬೇಕರಿ) ದಿಂದ ಸೂರ್ಯ ಬೇಕರಿವರೆಗೂ ಹೋಗುವ ಮುಖ್ಯ ರಸ್ತೆಯಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಸಿಕ್ಕವರ ಮೇಲೆ ಬೊಗಳಿ ದಾಳಿ ಮಾಡುವುದರ ಜೊತೆಗೆ ರಾತ್ರಿಯೆಲ್ಲಾ ಕರ್ಕಶವಾಗಿ ಕೂಗಿ ಎಲ್ಲರ ನಿದ್ರೆ ಹಾಳು ಮಾಡುತ್ತಿವೆ. ಬೆಳ್ಳಂಬೆಳಗ್ಗೆ ಖಾಲಿ ರಸ್ತೆಗಳಲ್ಲಿ ಈ ನಾಯಿಗಳು ಮಧ್ಯ ರಸ್ತೆಯಲ್ಲಿಯೇ ಬಿಡಾರ ಹೂಡಿ ಮುಂಜಾನೆ ಹೋಗುವ ವಾಯುವಿಹಾರಿಗಳು, ತಮ್ಮ ಸಾಕುನಾಯಿಗೆ ವಾಕ್ ಮಾಡಿಸುವವರ ಮೇಲೆ ಹಾಗೂ ರಸ್ತೆಯಲ್ಲಿ ಸಂಚರಿಸುವ ದ್ವಿಚಕ್ರ ವಾಹನಗಳ ಮೇಲೆ ದಾಳಿ ಮಾಡುತ್ತಿರುವುದು ದಿನನಿತ್ಯದ ತಲೆನೋವಾಗಿದೆ. ಮತ್ತೊಂದೆಡೆ ಈ ಸಮಸ್ಯೆಗೆ ಮೂಲ ಕಾರಣವು ಮುಖ್ಯ ರಸ್ತೆಯಲ್ಲಿನ ಹೋಟೆಲ್‌ವೊಂದರ ಸಿಬ್ಬಂದಿಗಳು ತಮ್ಮ ಅಳಿದುಳಿದ ಮಾಂಸಾಹಾರವನ್ನು ಈ ನಾಯಿಗಳಿಗೆ ಹಾಕಿ ರೂಢಿ ಮಾಡಿರುವುದರಿಂದ ಈ ನಾಯಿಗಳನ್ನು ನಿಯಂತ್ರಣ ಮಾಡುವುದೇ ಹರಸಾಹಸವಾಗಿದೆ. ಬೆಂಗಳೂರಿನ ಕೋಡಿಗೆಹಳ್ಳಿಯಲ್ಲಿ 65 ವರ್ಷದ ವೃದ್ಧರೊಬ್ಬರ ಮೇಲೆ ನಾಯಿಗಳ ಗುಂಪು ದಾಳಿ ಮಾಡಿ ಕೊನೆಗೆ ಸ್ಥಳದಲ್ಲೇ ಮೃತಪಟ್ಟಿರುವ ಘಟನೆಯನ್ನು ಉದಾಹರಣೆಯಾಗಿ ತೆಗೆದುಕೊಂಡು ಪಾಲಿಕೆ ಅಧಿಕಾರಿಗಳು ಶೀಘ್ರದಲ್ಲಿ ಈ ನಾಯಿಗಳ ದಾಂದಲೆಗೆ ಉಪಶಮನ ನೀಡಿದರೆ ಉತ್ತಮ. ಇಲ್ಲವಾದಲ್ಲಿ ಇನ್ನೆಷ್ಟು ಅಪಘಾತಗಳು ಅಥವಾ ಅಹಿತಕರ ಘಟನೆಗಳು ನಡೆಯತ್ತದೆಂಯೋ ಗೊತ್ತಿಲ್ಲ.

–ಯಶಸ್. ಆರ್, ಸಾಮಾಜಿಕ ಕಾರ್ಯಕರ್ತ, ಮೈಸೂರು.

ಕಲ್ಲಬೆಟ್ಟ ಕಾಲೋನಿಗೆ ಸಂಪರ್ಕಿಸುವ ರಸ್ತೆ ಅವ್ಯವಸ್ಥೆ



ಮಾನ್ಯರೆ,

ಹುಣಸೂರು–ಪಿರಿಯಾಪಟ್ಟಣ ಮಧ್ಯದಲ್ಲಿರುವ ಕಲ್ಲಬೆಟ್ಟ ಕಾಲೋನಿ ಗ್ರಾಮವು ಕಾಡಂಚಿನ ಪ್ರದೇಶವಾಗಿದ್ದು, ಕಳೆದ 25 ವರ್ಷಗಳಿಂದಲೂ ಈ ಗ್ರಾಮದ ರಸ್ತೆಯು ಅಭಿವೃದ್ಧಿಗೊಂಡಿಲ್ಲ. ಸುಮಾರು 2.6 ಕಿಲೋಮೀಟರ್ ಇರುವ ಈ ರಸ್ತೆಯಲ್ಲಿ ಸುಮಾರು 150ಕ್ಕೂ ಹೆಚ್ಚು ಪರಿಶಿಷ್ಟ ಜಾತಿಯ ಕುಟುಂಬಗಳು ಪ್ರತಿನಿತ್ಯ ತಮ್ಮ ಕೆಲಸ ಕಾರ್ಯಗಳಿಗೆ, ಶಾಲಾ ಕಾಲೇಜುಗಳಿಗೆ ವಿದ್ಯಾರ್ಥಿಗಳು ಹದಗೆಟ್ಟ ರಸ್ತೆಯಲ್ಲಿ ಪರದಾಡಿಕೊಂಡು ಓಡಾಡುತ್ತಿದ್ದು ಗ್ರಾಮ ಪಂಚಾಯಿತಿ ಪಿಡಿಒ ಇದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಪ್ರತಿ ಗ್ರಾಮ ಪಂಚಾಯಿತಿಗಳಿಗೆ ನರೇಗಾ ಯೋಜನೆಯಡಿ ಕೋಟ್ಯಾಂತರ ರೂ.ಗಳ ಅನುದಾನಗಳು ಹರಿದು ಬರುತ್ತಿದ್ದರು ಗ್ರಾಮದ ರಸ್ತೆಯನ್ನು ಅಭಿವೃದ್ಧಿಪಡಿಸುವಲ್ಲಿ ನಿರ್ಲಕ್ಷ್ಯ ತೋರುತ್ತಿದ್ದಾರೆ.

ರಸ್ತೆಯನ್ನು ದುರಸ್ತಿಪಡಿಸುವಂತೆ ಗ್ರಾಮಸ್ಥರು ಹಲವಾರು ಬಾರಿ ದೂರು ಸಲ್ಲಿಸಿದರು ಇದುವರೆಗೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಇದು ಕಾಡಂಚಿನ ಪ್ರದೇಶವಾದ್ದರಿಂದ ಇಲ್ಲಿ ಕಾಡುಪ್ರಾಣಿಗಳಾದ ಹುಲಿ, ಚಿರತೆಗಳ ಓಡಾಟ ಹೆಚ್ಚಿರುತ್ತದೆ. ರಸ್ತೆಯ ಇಕ್ಕೆಲಗಳಲ್ಲಿ ಗಿಡಗಂಟಿಗಳು ಬೆಳೆದಿದ್ದರೆ, ರಸ್ತೆ ಪೂರ್ತಿ ಗುಂಡಿಮಯವಾಗಿದೆ.

ಗ್ರಾಮದಲ್ಲಿ ಯಾವುದೇ ತೊಂದರೆಗಳು ಸಂಭವಿಸಿದರೂ ಕೂಡಲೇ ಪಕ್ಕದ ಚಿಲ್ಕುಂದಕ್ಕೆ ಬರಬೇಕಾದರೆ ಈ ರಸ್ತೆಯನ್ನೇ ಆಶ್ರಯಿಸಬೇಕಾಗಿದೆ. ಈ ಹದಗೆಟ್ಟ ರಸ್ತೆಯಿಂದಾಗಿ ಗ್ರಾಮಸ್ಥರು ಆತಂಕದಿಂದಲೇ ಜೀವನ ಸಾಗಿಸುವಂತಾಗಿದೆ. ಈ ಭಾಗದಲ್ಲಿ ಪರಿಶಿಷ್ಟರೇ ವಾಸ ಮಾಡುತ್ತಿರುವುದರಿಂದ ತಾಲೂಕಿನ ಜನಪ್ರತಿನಿಧಿಗಳು ಪರಿಶಿಷ್ಟರನ್ನು ಮೂಲೆಗುಂಪು ಮಾಡುತ್ತಿದ್ದಾರೆ.

ಈ ಹಿಂದೆ 15 ವರ್ಷಗಳು ಆಯ್ಕೆಯಾಗಿದ್ದ ಶಾಸಕರು ರಸ್ತೆಯನ್ನು ಅಭಿವೃದ್ಧಿ ಮಾಡಲೇ ಇಲ್ಲ. ಉಳಿದಂತೆ ಜನಪ್ರತಿನಿಧಿಗಳು ಮತ ಬೇಟೆಗಾಗಿ ಮಾತ್ರ ಈ ಗ್ರಾಮದ ಕಡೆ ತಲೆ ಹಾಕಿದ್ದು ಬಿಟ್ಟರೆ ಗ್ರಾಮದ ಅಭಿವೃದ್ಧಿ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದಾರೆ. ಕೂಡಲೇ ಸಂಬಂಧಪಟ್ಟವರು ಕೆ.ಬಿ.ಕಾಲೋನಿಯ ಈ ರಸ್ತೆಯನ್ನು ಅಭಿವೃದ್ಧಿಪಡಿಸಿಕೊಡಬೇಕು. ಇನ್ನು ಒಂದು ವಾರದ ಒಳಗಾಗಿ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳದಿದ್ದಲ್ಲಿ ಗ್ರಾಮಸ್ಥರು ರಸ್ತೆಯಲ್ಲಿಯೇ ಬಾಳೆಗಿಡಗಳನ್ನು ನೆಟ್ಟು ಪ್ರತಿಭಟನೆ ನಡೆಸಬೇಕಾಗುತ್ತದೆ.

– ಗ್ರಾಮಸ್ಥರು, ಹುಣಸೂರು ತಾ.

ಸಾರ್ವಜನಿಕರ ಆರೋಗ್ಯ ಕಾಪಾಡಿ



ಮಾನ್ಯರೆ,


ಇದು, ಮೈಸೂರಿನ ವಿಶ್ವಮಾನವ ಜೋಡಿ ರಸ್ತೆ ಮತ್ತು ನ್ಯೂ ಕಾಂತ ರಾಜ್ ಅರಸ್ ರಸ್ತೆಯ ಹಿಂದಿನ ವಿಜಯ ಬ್ಯಾಂಕ್ ಸರ್ಕಲ್ ಬಳಿ ಇರುವ 'ಮನೆ ಹೋಳಿಗೆ, ಕುರುಕ್ ತಿಂಡಿ' ಹೋಟೆಲ್ ಇರುವ ಸರ್ಕಲ್. ಈ ಸರ್ಕಲ್‌ನಲ್ಲಿ ಈಗ ನೂತನವಾಗಿ ನಿಜಲಿಂಗಪ್ಪ ವೃತ್ತದ ಕಾಮಗಾರಿ ನಡೆಯುತ್ತಿದ್ದು, ಈ ಕಾಮಗಾರಿಗಾಗಿ ಈ ಹೋಟೆಲ್ ಮುಂಭಾಗದಲ್ಲಿ ಎಂ ಸ್ಯಾಂಡ್ ಸೇರಿದಂತೆ ಜಲ್ಲಿಕಲ್ಲುಗಳನ್ನು ಹಾಕಿರುವುದರಿಂದ, ಜೋರು ಗಾಳಿ ಬೀಸಿದಾಗ ಈ ಹೋಟೆಲ್ ಮತ್ತು ದಾರಿಯಲ್ಲಿ ಓಡಾಡುವವರು ಸಹ ಧೂಳುಮಯವಾಗುತ್ತಾರೆ. ಇಲ್ಲಿ ತಿಂಡಿತಿನಿಸುಗಳನ್ನು ತಿನ್ನುವವರು ಈ ಧೂಳನ್ನು ಕುಡಿಯಬೇಕಾದ ಪರಿಸ್ಥಿತಿ ಇದೆ. ಇಲ್ಲಿನ ಕಾಮಗಾರಿ ಮುಗಿಯುವ ತನಕ ಈ ಹೋಟೆಲ್ ಬಂದ್ ಮಾಡಿ ಸಾರ್ವಜನಿಕರ ಆರೋಗ್ಯ ಕಾಪಾಡಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ಕೆಬಿಜಿಯವರ ಸ್ಮರಣೆಯಲ್ಲಿ...



1983ರಲ್ಲಿ ಸರಸ್ವತಿಪುರಂನ ತಮ್ಮ ಕಚೇರಿಯಲ್ಲಿ ಕೆ.ಬಿ.ಗಣಪತಿ.



2023ರಲ್ಲಿ ಬನ್ನಿಮಂಟಪದ ತಮ್ಮ ಕಚೇರಿಯಲ್ಲಿ ಡಾ. ಕೆ.ಬಿ.ಗಣಪತಿ.

ಕಳೆದ ಜುಲೈ 13ನೇ ತಾರೀಖಿನ ಭಾನುವಾರದಂದು ನಮ್ಮ ತಂದೆ, 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾಗಿದ್ದ **ಕೆ.ಬಿ.ಗಣಪತಿ**ಯವರು ನಿಧನ ಹೊಂದಿದರು.

ನಾನು ತಿಳಿದಂತೆ, ಅವರು ಒಂದು ವೇಳೆ ಅಶುಭ ದಿನವೆಂದು ಪರಿಗಣಿತ 13, ಶುಕ್ರವಾರವೇ ಆಗಿದ್ದರೂ ಎಲ್ಲಾ ಕಂದಾಚಾರವನ್ನು ಧಿಕ್ಕರಿಸಿ ನಡೆಯುತ್ತಿದ್ದರು.

ಈ ಸಂದರ್ಭದಲ್ಲಿ ನಮ್ಮ ತಂದೆಯವರ ಬಗ್ಗೆ ಬರೆಯುವುದು ಸಮಂಜಸ ಅಲ್ಲ ಎಂದು ನನಗೆ ಭಾಸವಾದರೂ, ಒಂದು ಪುಟ್ಟ ಪಟ್ಟಣವೊಂದರಲ್ಲಿ ಎರಡು ಸಣ್ಣ ಪತ್ರಿಕೆಗಳು– 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ'ವನ್ನು ಅತ್ಯಂತ ಯಶಸ್ವಿ ದಿನಪತ್ರಿಕೆಗಳನ್ನಾಗಿ ಮಾಡಿದಂತಹ ಅವುಗಳ ಓದುಗರಿಗಾಗಿ ಬರೆಯಲೇಬೇಕೆಂದು ಕೊನೆಗೆ ನಿರ್ಧರಿಸಿದೆ.

ಹಾಗಾಗಿ ಅವರ ಬಗ್ಗೆ ಬರೆಯದೇ ಇರುವುದು ತಪ್ಪೆಂದು ಭಾಸವಾಯಿತು. ಅದರಲ್ಲೂ, ಅವರು ಚೆನ್ನಾಗಿ ಬಾಳಿ–ಬದುಕಿದವರು. ಮಾತ್ರವಲ್ಲ, ಅವರ ಜೀವನವೂ ಅತ್ಯಂತ ಆಸಕ್ತಿದಾಯಕವಾಗಿತ್ತು.

'ಕೆಬಿಜಿ' ಎಂದೇ ಅವರು ಜನಪ್ರಿಯರಾಗಿದ್ದರು. ಕಳೆದ ಕೆಲವು ವರ್ಷಗಳವರೆಗೂ ಅಂದರೆ ನಾನೊಂದು ಮಗುವಿನ ತಂದೆ ಆಗುವವರೆಗೆ ಹಾಗೂ ಅವರು, ತಾತನಾಗುವವರೆಗೂ ಅವರ ಬಾಲ್ಯದ ದಿನಗಳ ಬಗ್ಗೆ ನನ್ನಲ್ಲಿ ಹೆಚ್ಚೇನು ಹೇಳಿಕೊಂಡಿರಲಿಲ್ಲ. ಆದರೆ, ಅವರು ಹೇಳಿದ ನಂತರ ಅವರ ವಿಚಾರಗಳಂತೂ ಅದ್ಭುತವಾದವು.

ಅವರು, ಬೆಂಗಳೂರಿನ ಅತ್ಯಂತ ಕಿರಿಯ ವಕೀಲರಲ್ಲಿ ಒಬ್ಬರಾಗಿದ್ದಂತಹ ಸಂದರ್ಭದಲ್ಲಿ ಅಲ್ಲಿ ಗ್ರಾಮೋಫೋನ್ ಮತ್ತು ನೃತ್ಯ ಸಭಾಂಗಣಗಳು ಹೆಚ್ಚಿದ್ದವು...

ಅವರು, ಪ್ರತಿಭಾವಂತನಲ್ಲದ ಓರ್ವ ಕನ್ನಡಿಗ ಹುಡುಗನಾಗಿ, ಒಂದೂ ಹಿಂದಿ ಪದ ಗೊತ್ತಿಲ್ಲದಿದ್ದರೂ, ದೂರದ ಮುಂಬಯಿಗೆ ಹೋಗಿ ನಟನಾಗುವ, ಚಿತ್ರಕಥೆ ಬರೆಯುವ ದಿಟ್ಟತನ ಮೆರೆದವರು...

ಮುಂಬೈನ ಕಾಲೇಜೊಂದರಲ್ಲಿ ಪತ್ರಿಕೋದ್ಯಮ ಅಧ್ಯಯನಕ್ಕೆ ಪುನರ್ ಸೇರ್ಪಡೆಗೊಂಡು, ತಮ್ಮ ಜೀವಿತ ಕಾಲದಲ್ಲೇ ದಂತಕಥೆಯಾಗಿದ್ದಂತಹ ಟಿಜೆಎಸ್ ಜಾರ್ಜ್ ಅವರ ಅಡಿಯಲ್ಲಿ ಕೆಲಸ ಮಾಡಲು ಆಯ್ಕೆಯಾದಂತಹವರು...

ಪುಣೆಯಲ್ಲಿ ತಮ್ಮದೇ ಆದ ಜಾಹೀರಾತು ಏಜೆನ್ಸಿ ಆರಂಭಿಸಿ, ಒಂದು ಕಾಲಕ್ಕೆ ದೇಶಾದ್ಯಂತ ಪ್ರಖ್ಯಾತವಾಗಿದ್ದ ಲೂನಾ ಮೊಪೆಡ್‌ಗೆ ಹೆಸರಿಟ್ಟ ತಂಡದ ಸದಸ್ಯರಲ್ಲಿ ಒಬ್ಬರಾಗಿದ್ದರು. ಜೊತೆಗೆ ಆ ಕಂಪನಿಯ ಪ್ರಚಾರದ ಸಾರಥ್ಯವನ್ನು ವಹಿಸಿಕೊಂಡಿದ್ದವರು...

ಓಶೋ ರಜನೀಶ್‌ರನ್ನು ಬಾಂಬೆಯ ಜುಹೂ ಬೀಚ್‌ನಿಂದ ಅಪಾರ್ಟ್‌ಮೆಂಟ್ ಒಂದಕ್ಕೆ ಸ್ಥಳಾಂತರಿಸಿ, ಅವರ ಮೊದಲ ಸಾರ್ವಜನಿಕ ಸಂಪರ್ಕ ಪ್ರತಿನಿಧಿಯಾಗಿ "ದಿ ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ" ನಿಯತಕಾಲಿಕೆಯಲ್ಲಿ ಪ್ರಚಾರವನ್ನು ಕೈಗೊಂಡವರು...

ಕೊನೆಗೆ ಅವೆಲ್ಲವನ್ನೂ ಗಂಟುಮೂಟೆ ಕಟ್ಟಿ ಒಗೆದು, ಒಂದು ಬಿಲ್ ಬುಕ್ ಪ್ರಿಂಟಿಂಗ್ ಪ್ರೆಸ್ (ಮುದ್ರಣಾಲಯ) ಅನ್ನು ನಡೆಸಲು ಆಗ ಒಂದು ಪುಟ್ಟ ಊರಾಗಿದ್ದ ಮೈಸೂರಿಗೆ ಹಿಂದಿರುಗಿದ್ದವರು...

> “ ಅದೇ ಕೆಬಿಜಿ ಸ್ಟೈಲ್. ನೀವು ಅವರೊಂದಿಗೆ ವಾದಿಸಬಹುದು, ಭಿನ್ನಾಭಿಪ್ರಾಯ ಹೊಂದಬಹುದು, ಅಪಹಾಸ್ಯ ಕೂಡ ಮಾಡಬಹುದು. ಆದರೆ, ಚರ್ಚೆ ಮತ್ತು ಸಭ್ಯತೆಯನ್ನು ಹೇಗೆ ಬೇರ್ಪಡಿಸಬೇಕೆಂದು ಅವರಿಗೆ ಚೆನ್ನಾಗಿ ತಿಳಿದಿತ್ತು. ಅವರ ಅದೇ ಸ್ಫೂರ್ತಿಯನ್ನು 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಬಿಂಬಿಸುತ್ತಾ ಬಂದಿವೆ. ನೀವು ಅವರ ವಿಚಾರಧಾರೆಯನ್ನು ಒಪ್ಪದೇ ಇದ್ದರೂ, ನಿಮ್ಮ ಧ್ವನಿ ಅವರ ಪತ್ರಿಕೆಯಲ್ಲಿ ಪ್ರತಿಧ್ವನಿಸಲು ಅವಕಾಶ ಇದ್ದೇ ಇದ್ದಿತು.

ಆನಂತರ ತಮ್ಮದೇ ಸ್ವಂತ ಪತ್ರಿಕೆಯನ್ನು ಪ್ರಾರಂಭಿಸಿದವರು...

ಹಾಗಾಗಿ ಅವರ ಜೀವನ ಪಯಣದಲ್ಲಿ ಬಹಳಷ್ಟು ಕುತೂಹಲಕಾರಿ ವಿಚಾರಗಳಿಲ್ಲದೆ ಇಲ್ಲ.

ಕೆಬಿಜಿಯವರು ಆ ಎಲ್ಲಾ ತಮ್ಮ ಬದುಕಿನ ವಿಚಾರಗಳನ್ನು ಅತ್ಯಂತ ಆಸಕ್ತಿ ದಾಯಕವಾಗಿ ನನಗೆ ಸಾಂದರ್ಭಿಕವಾಗಿ ಹೇಳಿದ್ದರು.

ಅವರು ಹೇಳಿದಂತಹ ಕಥೆಗಳು, ಚತುರೋಕ್ತಿಯ ಬಾಂಬೆಯ ಕೈಗಾರಿಕೋದ್ಯಮಿಗಳಿಂದ ಹಿಡಿದು ಓಶೋ ರಜನೀಶ್‌ರ ವಿಲಕ್ಷಣತೆಯವರೆಗೂ ಸಾಗುತ್ತಿತ್ತು. ತಮ್ಮ ಪತ್ರಕರ್ತ ವೃತ್ತಿಯ ಒಂದು ಭಾಗವಾಗಿ ರಾಜಕೀಯ ಗೂಂಡಾಗಳನ್ನು ಎದುರಿಸುವ ಸಂದರ್ಭಗಳಲ್ಲಿ ಸಂಪರ್ಕಕ್ಕೆ ಬಂದ ಆಧ್ಯಾತ್ಮಿಕ ಗುರುಗಳವರೆಗೂ ಅವುಗಳು ಹಾದು ಹೋಗುತ್ತಿದ್ದವು.

ಅಂತಹ ಕಥೆಗಳು, ಯಾವಾಗಲೂ ಅನಿರೀಕ್ಷಿತ ಹಾಗೂ ಮರೆಯಲಾಗದಂತಹವುಗಳಾಗಿದ್ದವು.

ಅವರು, ಜಾರ್ಜ್ ಫರ್ನಾಂಡೀಸ್ ಜೊತೆ ಮುಂಬೈನ ಹಡಗು ಕಟ್ಟೆಗಳಲ್ಲಿ ಪ್ರತಿಭಟಿಸುತ್ತಿದ್ದ ಸಂದರ್ಭ, ಹಾಗೆಯೇ ಮೈಸೂ ರಿನಲ್ಲಿ ಹೆಚ್.ಎಸ್.ಶಂಕರಲಿಂಗೇಗೌಡರ ಪರವಾಗಿ ಬಹಿರಂಗವಾಗೇ ಪ್ರಚಾರಕ್ಕೆ ಇಳಿದು, ಪತ್ರಿಕಾ ಧರ್ಮ ಉಲ್ಲಂಘನೆ ಮಾಡಿದುದು ಅವರು ಹೇಳುತ್ತಿದ್ದ ಕಥೆಗಳ ಭಾಗವಾಗಿರುತ್ತಿದ್ದವು.

ಒಂದಂತೂ ನಿಜ, ಕೆಬಿಜಿಯವರು ನಿಶ್ಚಿತಾಭಿಪ್ರಾಯ ಹಾಗೂ ದಿಟ್ಟತನದಿಂದಲೇ ಬದುಕಿದರು.

ಕೆಬಿಜಿ ಅವರೊಂದಿಗೆ ಕೆಲವರು ಹೊಂದಿಕೊಂಡು ಹೋಗುವ ಧೈರ್ಯ ಮಾಡಿದರು. ಮತ್ತೆ ಕೆಲವರು ಅವರೊಡನೆ ವಾಗ್ವಾದಕ್ಕಿಳಿಯುತ್ತಿದ್ದ ಸಂದರ್ಭವೂ ಇದೆ. ನಾನು ಸಹ ಅನೇಕ ವೇಳೆ ದಿಟ್ಟ ಹಾಗೂ ದೃಢ ನಿಶ್ಚಯದಿಂದಲೇ ಬದುಕಿದ ಅವರೊಂದಿಗೆ ವಾಗ್ವಾದಕ್ಕಿಳಿದಿದ್ದೂ ಇದೆ.

ಸರಳತೆ ಅವರನ್ನು ಓರ್ವ ಉತ್ತಮ ಪತ್ರಕರ್ತನನ್ನಾಗಿ ಮಾಡಿತು. ಸುದ್ದಿ ವಾಸನೆ ಗ್ರಹಿಸುವ ಕೌಶಲ, ಕರ್ತವ್ಯದ ಬಗ್ಗೆ ಉತ್ಸುಕತೆ ಮತ್ತು ಆಕರ್ಷಕ ಅಹಂ ಭಾವದ ಅಂಚಿನಲ್ಲಿರುವ ಅವರ ನಿರ್ಭಿಡತೆ ಸಹ ಅದರಲ್ಲಿ ಸೇರಿವೆ.

ಕೆಬಿಜಿಯವರಲ್ಲಿ ಒಂದು ವಿಚಿತ್ರ ಅಭ್ಯಾಸವಿತ್ತು. ಅವರೆಂದೂ ಜೇಬುಗಳಿಲ್ಲದ ಷರ್ಟ್‌ಗಳನ್ನು ಧರಿಸುತ್ತಿರಲಿಲ್ಲ. ಏಕೆಂದರೆ, ಅವರು ತಮ್ಮ ಷರ್ಟ್‌ನ ಜೇಬಿನಲ್ಲಿ ಸದಾ ಒಂದು ಸಣ್ಣ ನೋಟ್‌ಪ್ಯಾಡ್ ಹಾಗೂ ಪೆನ್ನನ್ನು ಇಟ್ಟುಕೊಳ್ಳಬೇಕಿತ್ತು. ಅವರು ನಿಧನರಾದ ದಿನವೂ ತಮ್ಮ ಚಿಕ್ಕ ನೋಟ್‌ಪ್ಯಾಡ್‌ನಲ್ಲಿ ಅನೇಕ ಟಿಪ್ಪಣಿ ಬರೆದು ತಮ್ಮ ಷರ್ಟ್ ಜೇಬಿನಲ್ಲಿ ಇಟ್ಟುಕೊಂಡಿದ್ದರು. ಅದರಲ್ಲಿ 'ವರದಿಗಾರರಿಗೆ ಸುದ್ದಿ ಅಂಶಗಳು' ಎಂದು ಬರೆದಿದ್ದರು. ಅವರು ವರದಿಗಾರಿಕೆಯನ್ನು ತಮ್ಮ ಅಂತಿಮ ದಿನದವರೆಗೂ ನಿಲ್ಲಿಸಲೇ ಇಲ್ಲ.

ಕೆಬಿಜಿಯವರು ಬೌದ್ಧಿಕ ಚರ್ಚೆಯನ್ನು ಹೆಚ್ಚು ಇಷ್ಟಪಡುತ್ತಿದ್ದರು. ಸಾಮಾನ್ಯವಾಗಿ ನಮ್ಮ ಊಟದ ಸಮಯದಲ್ಲಿ ಅನೇಕ ಸ್ವಾರಸ್ಯ ಕರ ಚರ್ಚೆಗಳಾಗುತ್ತಿದ್ದವು. ನಾನು ಅವರ ವಾದವನ್ನು ಒಪ್ಪದೇ ಅವರನ್ನು ಕಿಂಡಲ್ ಮಾಡಲು "ಯೌವನವು ಯುವಕರಲ್ಲಿ ವ್ಯರ್ಥ ವಾಗಬಹುದು, ಆದರೆ, ವಿವೇಕವು ವೃದ್ಧರಲ್ಲಿ ಖಂಡಿತವಾಗಿಯೂ ವ್ಯರ್ಥವಾಗಿದೆ" ಎಂದು ಸಾರುವುದರೊಂದಿಗೆ ಚರ್ಚೆ ಕೊನೆಗೊಳ್ಳುತ್ತಿತ್ತು.

ಅದಕ್ಕೆ ಅವರು ಹುಸಿ ನಗುತ್ತಾ, "ನಿನ್ನನ್ನು ನೀನೇ ಹೊಗಳಿಕೊಳ್ಳಬೇಡ. ನಿನ್ನ ವಯಸ್ಸಲ್ಲಿ ರಾಹುಲ್ ಗಾಂಧಿ ಮಾತ್ರ ಶಾಶ್ವತವಾಗಿ ಯುವಕನಾಗಿರಲು ಸಾಧ್ಯ" ಎಂದು ಹೇಳಿ, ನಗುತ್ತಲೇ 'ಒನ್ ಡ್ರಿಂಕ್ ಹಾಕೋಣವಾ...?' ಎಂದು ಕೇಳುತ್ತಿದ್ದರು.

ಅದೇ ಕೆಬಿಜಿ ಸ್ಟೈಲ್. ನೀವು ಅವರೊಂದಿಗೆ ವಾದಿಸಬಹುದು, ಭಿನ್ನಾಭಿಪ್ರಾಯ ಹೊಂದಬಹುದು, ಅಪಹಾಸ್ಯ ಕೂಡ ಮಾಡಬಹುದು. ಆದರೆ, ಚರ್ಚೆ ಮತ್ತು ಸಭ್ಯತೆಯನ್ನು ಹೇಗೆ ಬೇರ್ಪಡಿಸಬೇಕೆಂದು ಅವರಿಗೆ ಚೆನ್ನಾಗಿ ತಿಳಿದಿತ್ತು.

ಅವರ ಅದೇ ಸ್ಫೂರ್ತಿಯನ್ನು 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಬಿಂಬಿಸುತ್ತಾ ಬಂದಿವೆ. ನೀವು ಅವರ ವಿಚಾರಧಾರೆಯನ್ನು ಒಪ್ಪದೇ ಇದ್ದರೂ, ನಿಮ್ಮ ಧ್ವನಿ ಅವರ ಪತ್ರಿಕೆಯಲ್ಲಿ ಪ್ರತಿಧ್ವನಿಸಲು ಅವಕಾಶ ಇದ್ದೇ ಇದ್ದಿತು.

'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಮೂಲಕ ಅವರು ಅಸಂಖ್ಯಾತ ನಾಗರಿಕ ಯೋಧರಿಗೆ (ಸಾಮಾಜಿಕ ಹೋರಾಟಗಾರರಿಗೆ) ಧ್ವನಿಯಾದರು. ಅವರ ಪೈಕಿ ಅನೇಕರು ಅಂತಿಮವಾಗಿ ರಾಜಕೀಯಕ್ಕೆ ಬಂದರು. ಆದರೆ, ಅದಕ್ಕೂ ಮೊದಲು, ಅವರು ನಮ್ಮ ನಗರದ ಅಭಿವೃದ್ಧಿಗೆ ಶ್ರಮಿಸಿದವರು.

ಕೆಬಿಜಿ ಅವರು, ಸರ್ಕಾರವನ್ನು ಉತ್ತರದಾಯಕನನ್ನಾಗಿ ಮಾಡುವ ನಿಟ್ಟಿನಲ್ಲಿ ಸಾಮೂಹಿಕ ಪ್ರಜ್ಞೆಯನ್ನು ಮೂಡಿಸುವ ಸಲುವಾಗಿ ಸೇವಾ ಸಂಸ್ಥೆಗಳಾದಂತಹ ರೋಟರಿ, ಲಯನ್ಸ್ ಮತ್ತು ಮೈಸೂರು ಗ್ರಾಹಕರ ಪರಿಷತ್ತುಗಳಿಗೆ ಸಾಕಷ್ಟು ಪ್ರೋತ್ಸಾಹ ನೀಡಿದರು.

ಕಲೆ, ಸಾಹಿತ್ಯ, ಸಂಗೀತ ಹಾಗೂ ಕ್ರೀಡೆ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವೆಂದು ಪರಿಭಾವಿಸಿದ ಕೆಬಿಜಿ, ಅವುಗಳಿಗೆ ಪ್ರತ್ಯಕ್ಷ–ಪರೋಕ್ಷವಾಗಿ ಬೆಂಬಲಿಸುತ್ತಾ ಬಂದವರು. ಇವುಗಳಿಗೆ ಎರಡು ಪತ್ರಿಕೆಯಲ್ಲಿ ಸ್ಥಳ ಮೀಸಲಾಗಿರಿಸಿದ್ದರು.

ಅವರಲ್ಲಿ ಭಕ್ತಿ–ಭಾವನೆ ಇಲ್ಲದಂತೆ ಕಂಡರೂ ಅವರು ಆಳವಾದ ಆಧ್ಯಾತ್ಮಿಕತೆಯನ್ನು ಹೊಂದಿದ್ದರು. ಕೆಲವು ಸಲ ಆಧ್ಯಾತ್ಮಿಕತೆಗೆ ಹಾಸ್ಯಲೇಪನ ಕೂಡ ನೀಡುತ್ತಿದ್ದರು.

ಉದಾಹರಣೆಗೆ, ಅವರ 85ನೇ ಜನ್ಮದಿನದಂದು ನಾನು ಅವರನ್ನು ಕೇಳಿದೆ "ನಿಮಗೆ ಇಷ್ಟು ವರ್ಷವಾಯ್ತು, ನಿಮ್ಮ ಪ್ರಕಾರ ಸಂತೋಷ ಎಂದರೇನು?"

ನಾನು, ಇದಕ್ಕೆ ಅವರು ದೊಡ್ಡದಾಗಿ ಯೋಚಿಸಿ, ಬಳಿಕ ವಿಚಾರಧಾರೆ ಯೋಜಿತ ಉತ್ತರ ನೀಡುತ್ತಾರೆ ಅಂದುಕೊಂಡೆ. ಆದರೆ, ಅದಕ್ಕೆ ಚಿಟಕಿ ಹೊಡೆದಂತೆ ಅವರ ತಕ್ಷಣದ ಉತ್ತರ 'ದೈಹಿಕ ನೋವಿನಿಂದ ಮುಕ್ತಿ' ಎಂಬುದಾಗಿತ್ತು.

ಕೆಲವು ಕ್ಷಣಗಳ ಬಳಿಕ, 'ನೀವು ಬೇಕಾದ ಹಣ ಮತ್ತು ಅಂತಸ್ತನ್ನು ಹೊಂದಬಹುದು. ಆದರೆ, ನಿಮ್ಮ ದೈಹಿಕ ನೋವು ಅದು ಹಲ್ಲು ನೋವೇ ಆಗಲಿ, ನೀವು ಮಾನಸಿಕವಾಗಿಯೂ, ದೈಹಿಕವಾಗಿಯೂ ನರಳುತ್ತೀರಿ' ಎಂದು ಹೇಳಿದರು.

ನಿಮಗೆ ಈ ರೀತಿಯ ಆಧ್ಯಾತ್ಮಿಕ ಸಾಕ್ಷಾತ್ಕಾರ ಯಾವಾಗ ಆಯಿತು ಎಂದು ನಾನು ಕೇಳಿದೆ. ಅದಕ್ಕೆ ಅವರು ಒಂದು ಚೇಷ್ಟೆ ನಗುವಿನೊಂದಿಗೆ 'ನನಗೆ ಪೈಲ್ಸ್' (ಮೂಲವ್ಯಾಧಿ) ಬಂದಾಗ ಎಂದು ಹೇಳಿದರು. ಆಗ ನಮ್ಮಿಬ್ಬರಿಗೂ ನಗು ಬಂತು.

ನಾನು ಹೇಳಿದೆ, ನಿಮ್ಮೊಂದಿಗೆ ಕೆಲಸ ಮಾಡುವ ನೋವು ಹೇಗೆಂದು ಈಗ ತಿಳಿಯಿತಾ! ಅವರು ನಕ್ಕು, ಚಪ್ಪಾಳೆ ತಟ್ಟಿದರು.

ಅವರು ಅನೇಕ ಹಾಸ್ಯಮಯ ಸನ್ನಿವೇಶದಲ್ಲಿ ನಡೆದುಕೊಳ್ಳುತ್ತಿದ್ದಂತಹ ಪರಿ ಇದು. ಅವರ ಆ ಜೋರಾದ ನಗು ಮತ್ತು ಚಪ್ಪಾಳೆ ಈಗ ಮರೆಯಾಗಿದೆ.

ಅವರ ನಿಧನದ ಬಳಿಕ, ನೀನು ಹೇಗೆ ಪರಿಸ್ಥಿತಿ ನಿಭಾಯಿಸುತ್ತಿರುವೆ ಎಂದು ಜನ ನನ್ನನ್ನು ಕೇಳಿದ್ದುಂಟು. ಅವರು ಕಳೆದ 40 ವರ್ಷಗಳಿಗೂ ಅಧಿಕ ಕಾಲ ಪ್ರತಿವರ್ಷ ತಮ್ಮ ದಿನಚರಿಯ ಮೊದಲ ಪುಟದಲ್ಲಿ ಬರೆಯುತ್ತಿದ್ದ ಟಿಪ್ಪಣಿಯನ್ನು ನಾನು ಓದುತ್ತಿದ್ದೇನೆ.

ಅವು ಬೈಬಲ್ಲಿನ ಸಾಲುಗಳು;

ವೇಗವಂತರಿಗೆ ಓಟದಲ್ಲಿ ಜಯ ನಿಶ್ಚಿತವಿಲ್ಲ,
ಹಾಗೆಯೇ ಬಲಿಷ್ಠರಿಗೆ
ಯುದ್ಧದಲ್ಲಿ ಜಯ ಖಚಿತವಿಲ್ಲ,
ಅಂತೆಯೇ ಪ್ರತಿಭಾವಂತರಿಗೆ
ಸಂಪತ್ತು ಖಚಿತವಿಲ್ಲ.
ಆದರೆ, ಎಲ್ಲರಿಗೂ ಸಮಯ ಮತ್ತು ಅವಕಾಶ ಒದಗಿ ಬಂದೇ ಬರುತ್ತೆ.

ಬಳಿಕ ಅವರು ತಮ್ಮ ಕೈಯ್ಯಿಂದ ಬರೆದಿದ್ದರು; 'ಆದ್ದರಿಂದ ಗಣಪತಿ, ನಿರಾಶೆಗೊಳ್ಳಬೇಡಿ, ಏಕೆಂದರೆ ಇದೂ ಹಾದು ಹೋಗುತ್ತದೆ.

ಹಾಗೆಯೇ ನಮ್ಮ ದುಃಖವು ಕ್ರಮೇಣ ಮರೆಯಾಗುತ್ತದೆ. ಏಕೆಂದರೆ ಇದೂ ಕೂಡ ಸರಿದು ಹೋಗುತ್ತದೆ.

ನಮ್ಮ ಕುಟುಂಬ ಹಾಗೂ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ'ನ ಬಳಗದ ಪರವಾಗಿ, ಪ್ರಿಯ ಓದುಗರೇ, ನಿಮ್ಮ ಪ್ರೀತಿ, ವಿಶ್ವಾಸಕ್ಕೆ ಧನ್ಯವಾದಗಳು.

ನಿಮಗೆ ಮಾಹಿತಿ, ಮನರಂಜನೆ ಜೊತೆಗೆ ನಿಮ್ಮನ್ನು ಸದಾ ಜಾಗೃತಗೊಳಿಸುವುದನ್ನು ನಾವು ಮುಂದುವರೆಸುತ್ತೇವೆ.

ಟಿಪ್ಪಣಿ : ನಮ್ಮ ತಂದೆಯವರ ನಿಧನದ ನಂತರ, ಅವರಿಗೆ ಇತರ ಹಿರಿಯ ಪತ್ರಕರ್ತರಿಗೆ ನೀಡಿದಂತಹ ಸರ್ಕಾರಿ ಗೌರವವನ್ನು ನೀಡದಿರುವ ಬಗ್ಗೆ ಕೆಲವರು ರಾಜ್ಯ ಸರ್ಕಾರವನ್ನು ಟೀಕಿಸಿದ್ದಾರೆ.

ಪ್ರಾಮಾಣಿಕವಾಗಿ ಹೇಳ ಬೇಕೆಂದರೆ, ಅದಿಲ್ಲಿ ಅಪ್ರಸ್ತುತ.

ಓರ್ವ ಪತ್ರಕರ್ತನಿಗೆ, ಓದುಗರ ಪ್ರೀತಿಗಿಂತ ಇನ್ನಾವ ದೊಡ್ಡ ಗೌರವಬೇಕು?

ನಮ್ಮ ತಂದೆಯವರಿಗೆ ಇದು ದೊರೆತಿದೆ. ಅಷ್ಟೇ ಸಾಕು.

email :
news@mysurumithra.com

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ವಿವಿ ತನ್ನ ಸ್ವಿಮ್ಮಿಂಗ್ ಪೂಲ್ ನಿರ್ವಹಣೆ ಮಾಡದಷ್ಟು ಸಂಕಷ್ಟದಲ್ಲಿದೆಯಾ...!?

ರಸಾಯನಿಕ ಖರೀದಿಸಲೂ ಹಣವಿಲ್ಲದಂತೆ ಸ್ವಿಮ್ಮಿಂಗ್ ಪೂಲ್ ಬಂದ್ ಮಾಡಿದ ವಿವಿ ಆಡಳಿತ!



ಮೈಸೂರು ವಿಶ್ವವಿದ್ಯಾನಿಲಯದ ಈಜುಕೊಳದಲ್ಲಿ ತುಂಬಿರುವ ನೀರನ್ನು ಶುದ್ಧೀಕರಿಸದೆ ಪಾಚಿ ಕಟ್ಟಿ, ಕೆರೆ ನೀರಿನಂತಾಗಿರುವುದು.

ಮೈಸೂರು, ಜು.31(ಎಂಕೆ)– ಶತಮಾನದ ಇತಿಹಾಸ ಹೊಂದಿರುವ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯ ಆರ್ಥಿಕ ಸಂಕಷ್ಟ ಎದುರಿಸುತ್ತಿದೆ ಎಂಬುದಕ್ಕೆ ವಿವಿಯ ಸ್ವಿಮ್ಮಿಂಗ್ ಪೂಲ್ ಸಾಕ್ಷಿ...!

ಮೈಸೂರಿನ ಸರಸ್ವತಿಪುರಂನಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯದ ಈಜುಕೊಳವನ್ನು, ಕೆಮಿಕಲ್(ನೀರಿನ ಶುದ್ಧೀಕರಣಕ್ಕೆ ಬಳಸುವ ಕ್ಲೋರಿನ್) ಇಲ್ಲ ಎಂಬ ಕಾರಣಕ್ಕೆ ಕಳೆದ ನಾಲ್ಕೈದು ದಿನಗಳಿಂದ ಬಂದ್ ಮಾಡಲಾಗಿದೆ. ಆದಾಯ ತರುತ್ತಿರುವ ಸ್ವಿಮ್ಮಿಂಗ್ ಪೂಲ್ ಅನ್ನು ನಿರ್ವಹಣೆ ಮಾಡಲು ವಿವಿ ಹೆಣಗಾಡುತ್ತಿದೆ ಎಂಬುದಕ್ಕೆ ಪಾಳು ಬಿದ್ದಂತಿರುವ ಸ್ವಿಮ್ಮಿಂಗ್ ಪೂಲ್ ತಾಜಾ ಉದಾಹರಣೆಯಾಗಿದೆ.

ನಗರದ ಹಲವೆಡೆ ಹತ್ತಾರು ಖಾಸಗಿ ಸ್ವಿಮ್ಮಿಂಗ್ ಪೂಲ್‌ಗಳಿದ್ದರೂ ಪ್ರತಿನಿತ್ಯ 6 ಬ್ಯಾಚ್(ಬೆಳಗ್ಗೆ 3 ಬ್ಯಾಚ್, ಸಾಯಂಕಾಲ 3 ಬ್ಯಾಚ್)ಗಳಿಂದ 400ಕ್ಕೂ ಹೆಚ್ಚು ಈಜುಪಟುಗಳು, ಹವ್ಯಾಸಿ ಈಜುಗಾರರು ಸ್ವಿಮ್ಮಿಂಗ್ ಪೂಲ್‌ಗೆ ಬರಲಿದ್ದು, ಕಾಂಪಿಟೇಷನ್ ಬ್ಯಾಚ್‌ನಲ್ಲಿ 50ಕ್ಕೂ ಈಜುಪಟುಗಳು ತರಬೇತಿ ಪಡೆಯುತ್ತಿದ್ದಾರೆ.

ವಿವಿಯ ಸ್ವಿಮ್ಮಿಂಗ್ ಪೂಲ್‌ನಿಂದ ವಾರ್ಷಿಕವಾಗಿ 20 ಲಕ್ಷಕ್ಕೂ ಅಧಿಕ ಆದಾಯ ಬರುತ್ತಿದೆ. ಈ ಹಿಂದಿನ ವರ್ಷಗಳಲ್ಲಿ 40 ಲಕ್ಷ ರೂ. ಆದಾಯ ಬಂದಿರುವುದನ್ನು ನೋಡಿದ್ದೇವೆ. ಆದರೆ, ತಮ್ಮ ಸ್ವಾರ್ಥ ಸಾಧನೆಗಾಗಿ ನಿರ್ಲಕ್ಷ್ಯತೆಯಿಂದ ಲಾಭ ತರುವ ಸ್ವಿಮ್ಮಿಂಗ್ ಪೂಲ್ ಅನ್ನು ಹಾಳು ಮಾಡಲಾಗುತ್ತಿದೆ. ಹೇಗಾದರೂ ಮಾಡಿ ಖಾಸಗಿ ಸಂಸ್ಥೆಗೆ ವಹಿಸುವ ಹುನ್ನಾರಗಳು ನಡೆಯುತ್ತಿವೆ ಎನ್ನಲಾಗಿದೆ.

ಪಾಚಿ ಕಟ್ಟಿ, ಕೆರೆ ನೀರಿನಂತಾಗಿದೆ: ಮೈಸೂರು ವಿವಿ ಈಜುಕೊಳದಲ್ಲಿ ತುಂಬಿರುವ ನೀರನ್ನು ಶುದ್ಧೀಕರಿಸದೆ ಪಾಚಿ ಕಟ್ಟಿದ್ದು, ಇಡೀ ಸ್ವಿಮ್ಮಿಂಗ್ ಪೂಲ್ ಹಸಿರು ಬಣ್ಣಕ್ಕೆ ತಿರುಗಿದೆ. ಅಲ್ಲದೆ ನೀರಿನಿಂದ ವಾಸನೆ ಬರುತ್ತಿದ್ದು, ಅಲ್ಲಲ್ಲಿ ಕಸ ತೇಲಾಡುತ್ತಿದೆ. ಸ್ವಚ್ಛತೆಯಿಂದ ಕೂಡಿರಬೇಕಿದ್ದ ಹೈಟೆಕ್ ಸ್ವಿಮ್ಮಿಂಗ್ ಪೂಲ್, ಗ್ರಾಮೀಣ ಪ್ರದೇಶಗಳಲ್ಲಿರುವ ಗಿಡ–ಗಂಟಿ, ಪಾಚಿಯಿಂದ ತುಂಬಿರುವ ಸಣ್ಣ ಕೆರೆಯಂತೆ ಕಾಣುತ್ತಿದೆ.

ಕೆಮಿಕಲ್ ಬಳಸಲೇಬೇಕು: ನೂರಾರು ಮಂದಿ ಸ್ವಿಮ್ ಮಾಡುವ ಸ್ವಿಮ್ಮಿಂಗ್ ಪೂಲ್‌ನಲ್ಲಿ ಒಂದು ಬ್ಯಾಚ್ ಮುಗಿಯುತ್ತಿದ್ದಂತೆ ಕ್ಲೋರಿನ್ ಕೆಮಿಕಲ್‌ನಿಂದ ನೀರನ್ನು ಶುದ್ಧೀಕರಿಸಬೇಕು. ಒಂದು ದಿನ ಕೆಮಿಕಲ್ ಇಲ್ಲದಿದ್ದರೂ ನೀರನಲ್ಲಿ ಪಾಚಿ ಬೆಳೆಯಲಿದೆ. ಜೊತೆಗೆ ನೀರಿನಿಂದ ವಾಸನೆ ಬರಲಿದ್ದು, ಈಜುವವರಿಗೆ ಚರ್ಮ ರೋಗಗಳು ಬರಲಿದೆ. ಹಾಗಾಗಿ ನೀರನ್ನು ಶುದ್ಧೀಕರಿಸುವುದು ಅತ್ಯಗತ್ಯ ಎಂದು ಈಜು ತರಬೇತುದಾರರು ತಿಳಿಸಿದ್ದಾರೆ.

ನಿರ್ದೇಶಕರ ನಿರ್ಲಕ್ಷ್ಯ: 1976ರಲ್ಲಿ ಆರಂಭವಾದ ಮೈಸೂರು ವಿವಿಯಿಂದ ಸ್ವಿಮ್ಮಿಂಗ್ ಪೂಲ್, ಅಂದಿನಿಂದಲೂ ನೂರಾರು ಮಂದಿ ಸ್ವಿಮ್ಮರ್‌ಗಳನ್ನು ರೂಪಿಸಿದೆ. ಈ ಸ್ವಿಮ್ಮಿಂಗ್ ಪೂಲ್‌ನಲ್ಲಿ ಅಭ್ಯಾಸ ನಡೆಸಿ, ವಿವಿ ಮಟ್ಟದಿಂದ ಹಿಡಿದು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಹಲವರು ಸಾಧನೆ ಮಾಡಿದ್ದಾರೆ. ಆದರೆ, ಕಳೆದ ಎರಡು ವರ್ಷಗಳಿಂದ ಸ್ವಿಮ್ಮಿಂಗ್ ಪೂಲ್ ಚಿತ್ರಣವೇ ಬದಲಾಗಿದ್ದು, ನಿರ್ವಹಣೆ ಸರಿಯಾಗಿಲ್ಲದೆ ಎಲ್ಲವೂ ಇದ್ದು, ಇಲ್ಲದ್ದಂತೆ ಕಾಣುತ್ತಿದೆ. ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗ ನಿರ್ದೇಶಕರ ನಿರ್ಲಕ್ಷ್ಯತೆಯಿಂದಾಗಿ ಪ್ರತಿಷ್ಠಿತ ಮೈಸೂರು ವಿವಿ ಸ್ವಿಮ್ಮಿಂಗ್ ತನ್ನ ಗರಿಮೆಯನ್ನು ಕಳೆದುಕೊಳ್ಳುತ್ತಿದೆ ಎಂದು ಹಿರಿಯ ಈಜುಪಟುಗಳು 'ಮೈಸೂರು ಮಿತ್ರ'ನಲ್ಲಿ ವಿಷಾದ ವ್ಯಕ್ತಪಡಿಸಿದ್ದಾರೆ.

> “ಮಳೆ ಇದೆ, ಕೆಮಿಕಲ್ ಇಲ್ಲ ಎಂದು ಸ್ವಿಮಿಂಗ್ ಪೂಲ್ ಬಂದ್ ಮಾಡಿದ್ದಾರೆ. ಕೆಮಿಕಲ್ ಪೂರೈಕೆ ಮಾಡುವ ಗುತ್ತಿಗೆದಾರರೊಂದಿಗಿನ ಟೆಂಡರ್ ಮುಗಿದಿದೆ. ಮುಂಚೆಯೇ ಹೇಳಬೇಕಿತ್ತು. ಆದರೆ ಟೆಂಡರ್ ಮುಗಿಯುವವರೆಗೂ ಸುಮ್ಮನಿದ್ದು, ಇವಾಗ ಹೇಳ್ತಾ ಇದ್ದಾರೆ. ಇದರಲ್ಲಿ ವಿಭಾಗದ ನಿರ್ದೇಶಕರು, ಸಿಬ್ಬಂದಿಗಳ ಲೋಪವಿದೆ. ಅಲ್ಲದೆ ಹಳೇ ಸಿಬ್ಬಂದಿಗಳ ಅಜೆಂಡಾದಂತೆ ಸ್ವಿಮಿಂಗ್ ಪೂಲ್ ನಡೆಯುತ್ತಿದೆ. ಸದ್ಯದಲ್ಲಿಯೇ ಟೆಂಡರ್ ಕರೆಯಲಾಗುವುದು.
>
> –ಪ್ರೊ.ಎನ್.ಕೆ.ಲೋಕನಾಥ್, ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ

> “ಮೈಸೂರು ವಿವಿಯ ಸ್ವಿಮ್ಮಿಂಗ್ ಪೂಲ್ ಅನ್ನು ಖಾಸಗಿಯವರಿಗೆ ವಹಿಸಲಾಗುತ್ತಿದೆ ಎಂಬ ತಪ್ಪು ಗ್ರಹಿಕೆ ಇದೆ. ಕೆಮಿಕಲ್ ಖಾಲಿಯಾಗಿದ್ದರಿಂದ ಬಂದ್ ಮಾಡಿದ್ದು, ಮುಂದಿನ ಸೋಮವಾರದಿಂದ ಎಂದಿನಂತೆ ಬಳಕೆಗೆ ಲಭ್ಯವಿರಲಿದೆ. ಸ್ವಿಮಿಂಗ್ ಪೂಲ್‌ನಿಂದ ಆದಾಯ ಬರುತ್ತಿದೆ. ಆದರೆ, ವಿವಿಯಿಂದ ನಿರ್ವಹಣೆಗೆ ಬೇಕಾದಷ್ಟು ಹಣ ಕೊಡುತ್ತಿಲ್ಲ. ದುಡ್ಡು ಕೊಟ್ಟರೆ ತಾನೇ ಸರಿಯಾಗಿ ನಿರ್ವಹಣೆ ಮಾಡಲು ಸಾಧ್ಯ. ಅಲ್ಲದೆ ಇಲ್ಲಿ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ಸಿಬ್ಬಂದಿ ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ. ಹಾಗಾಗಿ ಸಮಸ್ಯೆಗಳು ಉಂಟಾಗುತ್ತಿವೆ. ಸದ್ಯದಲ್ಲಿಯೇ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡುತ್ತಿದ್ದೇವೆ.
>
> –ಡಾ.ಸಿ.ವೆಂಕಟೇಶ್, ನಿರ್ದೇಶಕ, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿವಿ

ನಾಳೆ ಮೈಸೂರಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ರಘುನಾಥ್‌ಗೆ ಅಭಿನಂದನೆ; ಸಮಾವೇಶ



ಎಸ್.ರಘುನಾಥ್

ಮೈಸೂರು, ಜು.31(ಜಿಎ)–ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಚುನಾವಣೆಯಲ್ಲಿ ಜಯಗಳಿಸಿದ ನೂತನ ಅಧ್ಯಕ್ಷ ಎಸ್.ರಘುನಾಥ್ ಅವರಿಗೆ ಅಭಿನಂದನೆ ಹಾಗೂ ಸಮಾವೇಶವನ್ನು ಜಿಲ್ಲಾ ಬ್ರಾಹ್ಮಣ ಮಹಾಸಭಾದ ವತಿಯಿಂದ ಆ.2ರಂದು ವಿದ್ಯಾರಣ್ಯಪುರಂನ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ಮಹಾಸಭಾದ ಉಪಾಧ್ಯಕ್ಷ ಎಚ್.ವಿ.ರಾಜೀವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 9.30ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಶಾಸಕ ಟಿ.ಎಸ್.ಶ್ರೀವತ್ಸ, ಕರ್ನಾಟಕ ಬ್ರಾಹ್ಮಣ ಮಂಡಳಿ ಅಧ್ಯಕ್ಷ ಆಸಗೋಡು ಜಯಸಿಂಹ, ಮಾಜಿ ಸಚಿವ ಎಸ್.ಎ.ರಾಮದಾಸ್, ಮಹಾಸಭಾದ ಉಪಾಧ್ಯಕ್ಷ ಆರ್.ಲಕ್ಷ್ಮೀಕಾಂತ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಇದೇ ವೇಳೆ ಶಂಕರ ಮಠದಲ್ಲಿ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ಅಭಿಯಾನದಲ್ಲಿ ಸದಸ್ಯರಾದ ಸುಮಾರು 200 ಜನ ಸದಸ್ಯರಿಗೆ ಗುರುತಿನ ಚೀಟಿ ವಿತರಿಸಿ ಸದಸ್ಯತ್ವ ಅಭಿಯಾನ ಮುಂದುವರಿಸಲಾಗುವುದು. ವಿಪ್ರ ಸಮುದಾಯ ಇದನ್ನು ಸದುಪಯೋಗಪಡಿಸಿಕೊಳ್ಳಬೇಕು. ಸದಸ್ಯರಾಗಬಯಸುವವರು ಆಧಾರ್ ಕಾರ್ಡ್ ನಕಲು ಪ್ರತಿ, 2 ಪಾಸ್‌ಪೋರ್ಟ್ ಅಳತೆ ಫೋಟೋ ಹಾಗೂ 500 ರೂ. ಪಾವತಿಸಬೇಕು. ಆಸಕ್ತರು ಹೆಚ್ಚಿನ ವಿವರಗಳಿಗೆ ಮೊ.ಸಂ.99 64524275 ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು.

ಸಮಾವೇಶದಲ್ಲಿ ಮೈಸೂರು ಜಿಲ್ಲೆಯಲ್ಲಿರುವ ಸಮುದಾಯದವರ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರಾಗುವಂತೆ ಕರೆ ನೀಡಲಾಗುವುದು. ಚುನಾವಣೆ ಸಂದರ್ಭದಲ್ಲಿ ಅಧ್ಯಕ್ಷ ನೀಡಿದ ಭರವಸೆಗಳ ಬಗ್ಗೆ ಚರ್ಚಿಸಲಾಗುತ್ತದೆ. ಸರ್ಕಾರದಿಂದ ಬ್ರಾಹ್ಮಣ ಸಮುದಾಯಕ್ಕೆ ನೀಡಬೇಕಾದ ಮೀಸಲಾತಿ ಬಗ್ಗೆ ಸಭೆ ನಡೆಸಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಡಾ.ಕೆ.ವಿ.ಲಕ್ಷ್ಮೀದೇವಿ, ಉಪಾಧ್ಯಕ್ಷರಾದ ವಿಶ್ವನಾಥಯ್ಯ, ಜೆ.ಎಚ್.ಅನಿಲ್ ಕುಮಾರ್, ಸಂಘಟನಾ ಕಾರ್ಯದರ್ಶಿ ಎಸ್.ರಂಗನಾಥ್ ಉಪಸ್ಥಿತರಿದ್ದರು.

ಈಜುಪಟುಗಳಿಂದ ಮೈಸೂರು ವಿವಿ ಈಜುಕೊಳ ಖಾಸಗೀಕರಣ ಹುನ್ನಾರ ಆರೋಪ

ಏಕಾಏಕಿ ಬಂದ್ ಮಾಡಿರುವುದನ್ನು ಖಂಡಿಸಿ ಪ್ರತಿಭಟನೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯ ಈಜುಕೊಳವನ್ನು ನಿರ್ವಹಣೆ ಮಾಡುವಂತೆ ಆಗ್ರಹಿಸಿ ಈಜುಪಟುಗಳು ಪ್ರತಿಭಟನೆ ಮಾಡಿದರು.

ಮೈಸೂರು,ಜು.31(ಎಂಟಿವೈ)– ಮೈಸೂರಿನ ಸರಸ್ವತಿಪುರಂನಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯದ ಈಜು ಕೊಳವನ್ನು ಖಾಸಗಿ ಸಂಸ್ಥೆಗೆ ವಹಿಸುವ ಹುನ್ನಾರ ನಡೆಯುತ್ತಿದೆ ಎಂದು ಆರೋಪಿಸಿ ಈಜುಪಟುಗಳು ಪ್ರತಿಭಟನೆ ಮಾಡಿದರು.

ಈಜುಕೊಳದ ಮುಂದೆ ಗುರುವಾರ ಬೆಳಗ್ಗೆ ಪ್ರತಿಭಟನೆ ಮಾಡಿದ ಈಜುಪಟುಗಳು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಈಜುಕೊಳವನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಪ್ರತಿದಿನ ನೂರಾರು ಈಜುಪಟುಗಳು ಇಲ್ಲಿ ಈಜುವ ಹವ್ಯಾಸ ಬೆಳೆಸಿಕೊಂಡಿದ್ದಾರೆ. ಆದರೆ, ಕೆಲವು ದಿನಗಳಿಂದ ಈಜುಕೊಳದ ನೀರು ಮಲೀನಗೊಂಡಿರುವ ಕಾರಣ ಬಂದ್ ಮಾಡಲಾಗಿದೆ. ಕೊಳದ ನೀರು ಶುದ್ಧಗೊಳಿಸಲು ಬಳಸುವ ರಾಸಾಯನಿಕ ಪದಾರ್ಥ ಇಲ್ಲ ಎಂಬ ಕಾರಣ ನೀಡಿ ಈಜುಕೊಳ ಬಂದ್ ಮಾಡಲಾಗಿದೆ ಎಂದು ಪ್ರತಿ ಭಟನಾಕಾರರು ದೂರಿದರು.

ಈಜುಕೊಳವನ್ನು ಖಾಸಗೀಕರಣಗೊಳಿಸುವ ಉದ್ದೇಶದಿಂದ ಸರಿಯಾಗಿ ನಿರ್ವಹಣೆ ಮಾಡದೆ ಬಂದ್ ಮಾಡಲಾಗಿದೆ. ನಿತ್ಯ ನೂರಾರು ಸಾರ್ವಜನಿಕರು ಹಾಗೂ ಯುವ ಈಜುಪಟುಗಳು ಅಭ್ಯಾಸ ನಡೆಸುತ್ತಾ ಬಂದಿದ್ದಾರೆ.

ಮೈಸೂರು ವಿವಿ ದೈಹಿಕ ಶಿಕ್ಷಣದ ವಿಭಾಗದ ಪ್ರಭಾವಿಯೊಬ್ಬರು ತಮ್ಮ ಸಂಬಂಧಿಕರಿಗೆ ಈಜುಕೊಳವನ್ನು ಗುತ್ತಿಗೆ ನೀಡುವ ಉದ್ದೇಶದಿಂದ ಈ ರೀತಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಈಜುಪಟುಗಳಾದ ಲಕ್ಷ್ಮಿ ವೆಂಕಟೇಶ್, ನಾಗೇಶ್, ಜನಾರ್ಧನ್, ಸೋಮಶೇಖರ್, ಸುನೀಲ್, ರಘು, ಮೋಹನ್, ರಾಮಚಂದ್ರೇಗೌಡ, ಶಿವಶಂಕರ್, ನಾಗರಾಜ್ ಇತರರು ಪಾಲ್ಗೊಂಡಿದ್ದರು.

ಇಂದು ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜದ ವಾರ್ಷಿಕೋತ್ಸವ ಸಮಾರಂಭ

ಮೈಸೂರು, ಜು. 31–ಮೈಸೂರಿನ ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜದ 25ನೇ ವಾರ್ಷಿಕೋತ್ಸವ ಸಮಾರಂಭವನ್ನು ಆ.1ರಂದು ಬೆಳಗ್ಗೆ 10.30ಕ್ಕೆ ಆದಿಶಕ್ತಿ ಕಾಳಮ್ಮ ಬಂದಂತಮ್ಮ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಕೆ.ಹರೀಶ್‌ಗೌಡ, ಕೆ.ವಿವೇಕಾನಂದ, ಸಿ.ಎನ್.ಮಂಜೇಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಶಿವಣ್ಣ, ಮಾಯಸಂದ್ರ, ಡಾ.ಲತಾ ರಾಜಶೇಖರ್, ಜೆ.ಗಂಗಾಧರ್, ಕೆ.ವಿ.ಶ್ರೀಧರ್, ಡಾ. ಎಂ.ಬಿ.ಮಂಜೇಗೌಡ ಮತ್ತಿತರರು ಭಾಗವಹಿಸಲಿದ್ದಾರೆ.

ಭೂ ಸಕ್ರಮೀಕರಣ ಸಮಿತಿ ನೀಡಿರುವ ಸಾಗುವಳಿ ಅರ್ಜಿ ಮರು ಪರಿಶೀಲಿಸಲು ಜಿಲ್ಲಾಧಿಕಾರಿಗೆ ಮನವಿ

ಮೈಸೂರು, ಜು.31(ಜಿಎ)–ಭೂ ಸಕ್ರಮೀಕರಣ ಸಮಿತಿ ನೀಡಿರುವ ಸಾಗುವಳಿ ಅರ್ಜಿಗಳನ್ನು ಜಿಲ್ಲಾಧಿಕಾರಿಗಳು ಮರು ಪರಿಶೀಲಿಸಿ, ಬಡ ರೈತರಿಗೆ ಸಾಗುವಳಿ ಚೀಟಿ ನೀಡಬೇಕೆಂದು ಕರ್ನಾಟಕ ಭೂ ಹಕ್ಕುದಾರರ ವೇದಿಕೆ ಹೆಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ಮಹದೇವ ನಾಯಕ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಭೂ ಸಕ್ರಮೀಕರಣ ಸಮಿತಿಯು 8–10 ತಿಂಗಳ ಹಿಂದೆ ರಚನೆಯಾಗಿ ಕಳೆದ ಡಿಸೆಂಬರ್‌ನಲ್ಲಿ 47 ರೈತರಿಗೆ ಸಾಗುವಳಿ ಚೀಟಿಯನ್ನು ಶಾಸಕ ಅನಿಲ್ ಚಿಕ್ಕಮಾದು ಅವರು ನೀಡಿದ್ದಾರೆ. ಆದರೆ ಈ ಸಮಿತಿಯವರು ನಮೂನೆ 57ರಲ್ಲಿ ಸಲ್ಲಿಕೆಯಾಗಿರುವ 11616 ಸಾವಿರಕ್ಕೂ ಅಧಿಕ ಅರ್ಜಿಗಳಲ್ಲಿ 7 ಸಾವಿರ ಅರ್ಜಿದಾರರಿಗೆ ಸಾಗುವಳಿ ಚೀಟಿ ವಿತರಿಸಲು ಭೂಮಿಯೇ ಇಲ್ಲವೆಂದು ಹೇಳಿದ್ದಾರೆ. ಇದರಿಂದ ಸಾಗುವಳಿ ಚೀಟಿ ಪಡೆಯಲು ರೈತರಿಗೆ ಕಷ್ಟವಾಗಲಿದೆ. ಆದ್ದರಿಂದ ಈ ಸಂಬಂಧ ಅರ್ಜಿಗಳನ್ನು ಜಿಲ್ಲಾಧಿಕಾರಿಗಳು ಮರು ಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ಸಮಿತಿಯು ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆಗಳ ಜಂಟಿ ಸಮೀಕ್ಷೆ ಮಾಡಿಸಿ ನೈಜ ಸ್ಥಿತಿಯನ್ನು ಅರಿತು ಅರ್ಹರನ್ನು ಗುರುತಿಸಿ (ಇದುವರೆಗೂ ಇತರೆ ಯಾವುದೇ ಭೂಮಿಯನ್ನು ಹೊಂದಿರದ) ಸಾಗುವಳಿ ಚೀಟಿ ನೀಡಬೇಕು. ಇತರೆ ಎಲ್ಲ ತಾಲೂಕುಗಳಲ್ಲಿಯೂ ಭೂ ಸಕ್ರಮೀಕರಣ ಸಮಿತಿಯನ್ನು ಸರಕಾರ ರಚಿಸುವ ಕಡೆ ಹೆಚ್ಚು ಗಮನ ಹರಿಸಬೇಕು. ಸಮಿತಿಯಿಂದ ರೈತರಿಗೆ ಅನ್ಯಾಯವಾಗಬಾರದು ಎಂದರು.

ಇತ್ತೀಚಿನ ಸುತ್ತೋಲೆ ಪ್ರಕಾರ ಅರ್ಜಿದಾರರು ಅರ್ಜಿ ಸಲ್ಲಿಸುವಾಗ 18 ವರ್ಷ ತುಂಬಿಲ್ಲದ ಹಾಗೂ ಅರ್ಜಿದಾರರು ಸ್ಥಳೀಯ ತಾಲೂಕಿನಲ್ಲೇ ವಾಸವಿರಬೇಕೆಂಬ ಅಂಶಗಳನ್ನು ಸೇರ್ಪಡೆಗೊಂಡಿರುವುದರಿಂದ, ಹಲವಾರು ರೈತರು ಕಂಗಾಲಾಗಿದ್ದಾರೆ. ರಾಜ್ಯ ಸರಕಾರ ಈ ಸುತ್ತೋಲೆಯನ್ನು ಕೈಬಿಡಬೇಕು. ಜಿಲ್ಲೆಯ ಅರ್ಹ ರೈತರಿಗೆ ಸಾಗುವಳಿ ಚೀಟಿ ನೀಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮಹದೇವಗೌಡ, ಬಿ.ಟಿ.ಉಮೇಶ್, ಸುಶೀಲ, ಟಿ.ರಾಜು ಉಪಸ್ಥಿತರಿದ್ದರು.

ಇಂದಿನಿಂದ ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ

ಮೈಸೂರು,ಜು.31– ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಮೈಸೂರು ಮತ್ತು ಮಾಳವೀಯ ಮಿಷನ್ ಟೀಚರ್ ಟ್ರೈನಿಂಗ್ ಸೆಂಟರ್, ಮಾನಸಗಂಗೋತ್ರಿ ಮೈಸೂರು ರವರ ಸಹಯೋಗದೊಂದಿಗೆ ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ಆ.1 ಮತ್ತು 2 ರಂದು ಏರ್ಪಡಿಸಲಾಗಿದೆ.


ಆ.1 ಬೆಳಗ್ಗೆ 9.30 ಗಂಟೆಗೆ ಮಾನಸ ಗಂಗೋತ್ರಿಯ ಮಾಳವೀಯ ಮಿಷನ್ ಟೀಚರ್ ಟ್ರೈನಿಂಗ್ ಸೆಂಡರ್ ನಲ್ಲಿ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಸಮಾಜ ಕಾರ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಜ್ಯೋತಿ ಹೆಚ್.ಪಿ. ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಪುರತತ್ವ ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರು ಹಾಗೂ ಕಾವಾ ಕಾಲೇಜಿನ ಡೀನ್ ದೇವರಾಜು ಎ. ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಆ.2 ರಂದು ಸಂಜೆ 4.45 ಗಂಟೆಗೆ ಸಮಾರೋಪ ಸಮಾರಂಭವನ್ನು ಹಮ್ಮಿಕೊಂಡಿದ್ದು, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು(ಕಾವಾ)ನ ಬೋಧಕ ವರ್ಗದವರು ಭಾಗವಹಿಸಲಿದ್ದಾರೆ.

ಚಾಮುಂಡೇಶ್ವರಿ ಸೇರಿ ರಾಜ್ಯದ ಪುರಾಣ ಪ್ರಸಿದ್ಧ ದೇವಾಲಯಗಳಿಗೆ

ಕೇಂದ್ರದ ವಿವಿಧ ಯೋಜನೆಗಳಡಿ ನೂರಾರು ಕೋಟಿ ಬಿಡುಗಡೆ

ಲೋಕಸಭೆಯಲ್ಲಿ ಮಾಹಿತಿ ನೀಡಿದ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೆಖಾವತ್



ನವದೆಹಲಿ,ಜು.31–ಚಾಮುಂಡಿಬೆಟ್ಟ ಸೇರಿದಂತೆ ರಾಜ್ಯದ ಹಲವು ಪುರಾಣ ಪ್ರಸಿದ್ಧ ದೇವಾಲಯಗಳಿಗೆ ಕೇಂದ್ರ ಸರ್ಕಾರದಿಂದ ನೂರಾರು ಕೋಟಿ ರೂ. ಅನುದಾನ ಬಿಡುಗಡೆ ಮಾಡಿರುವ ಮಾಹಿತಿಯನ್ನು ಕೇಂದ್ರ ಪ್ರವಾಸೋದ್ಯಮ ಇಲಾಖೆಯ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಲೋಕಸಭೆಯಲ್ಲಿ ನೀಡಿದ್ದಾರೆ.

ಉತ್ತರಕನ್ನಡ ಕ್ಷೇತ್ರದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸುತ್ತಾ, ದೇವಾಲಯ ಮತ್ತು ಪ್ರವಾಸೀ ಕೇಂದ್ರಗಳು, ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ. ಆದಾಗ್ಯೂ, ದೇವಾಲಯದ ಮೂಲಭೂತ ಮತ್ತು ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ್‌ನಡಿ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ.

ಕೇಂದ್ರ ಪ್ರವಾಸೋದ್ಯಮ ಇಲಾಖೆಯು, ಸ್ವದೇಶ ದರ್ಶನ, ಸ್ವದೇಶ ದರ್ಶನ್ 2.0 ಮತ್ತು ಸಿಬಿಡಿಡಿ ಪ್ರಸಾದ್ ಯೋಜನೆಯಡಿ, ಕರ್ನಾಟಕದ ಹಲವು ದೇವಾಲಯ/ಪ್ರವಾಸೀ ತಾಣಗಳಿಗೆ ಅನುದಾನ ಬಿಡುಗಡೆ ಮಾಡಿದೆ ಎಂದು ಸಚಿವ ಗಜೇಂದ್ರ ಸಿಂಗ್ ಹೇಳಿದ್ದಾರೆ. ವಿಶೇಷ ಬಂಡವಾಳ ಹೂಡಿಕೆ ಯೋಜನೆಯಡಿ, ರಾಜ್ಯ ಸರ್ಕಾರದಿಂದ ವಿಶೇಷ ಯೋಜನಾ ವರದಿ ಬಂದ ನಂತರ, ಅದನ್ನು ಇಲಾಖೆಯ ಅಧಿಕಾರಿಗಳು ಪರಿಶೀಲಿಸುತ್ತಾರೆ. ರಾಜ್ಯ ಸರ್ಕಾರದ ಡಿಪಿಆರ್‌ನಲ್ಲಿ ಸಲ್ಲಿಸಲಾಗಿರುವ ಅನುದಾನ ಕೋರಿಕೆಯ ಮೊತ್ತವನ್ನು ಪರಿಶೀಲಿಸಿ, ಇಲಾಖೆ ನಿಯಮಾವಳಿಯನು ಸಾರ ಹಣವನ್ನು ಬಿಡುಗಡೆ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ.



ಅನುದಾನ ವಿವರ: ಮೈಸೂರು ನಗರದ ತಾಯಿ ಚಾಮುಂಡೇಶ್ವರಿ ದೇವಾಲಯಕ್ಕೆ ಆರ್ಥಿಕ ವರ್ಷ 2023–24ರಲ್ಲಿ ಪ್ರಸಾದಂ ಸ್ಕೀಂ ಅಡಿಯಲ್ಲಿ, ಯಾತ್ರಾರ್ಥಿಗಳ ಸೌಲಭ್ಯಕ್ಕಾಗಿ 45.38 ಕೋಟಿ ರೂ., ಸ್ವದೇಶ್ ದರ್ಶನ್ 2.0 ಯೋಜನೆಯಡಿ ಮೈಸೂರು ನಗರದಲ್ಲಿ ಟಾಂಗಾ ಸವಾರಿ ಪಾರಂಪರಿಕ ಝೋನ್ ನಿರ್ಮಿಸಲು, 2.71 ಕೋಟಿ, ಸ್ವದೇಶ್ ದರ್ಶನ್ 2.0 ಯೋಜನೆಯಡಿ ಮೈಸೂರಿನಲ್ಲಿ ಪರಿಸರ ವಲಯ ನಿರ್ಮಿಸಲು 18.48 ಕೋಟಿ ಅನುದಾನ ಬಿಡುಗಡೆಯಾಗಿದೆ.

ಬೆಳಗಾವಿ ಜಿಲ್ಲೆಯ ಸವದತ್ತಿ ರೇಣುಕಾ ಯಲ್ಲಮ್ಮ ದೇವಾಲಯಕ್ಕೆ ಪ್ರಸಾದಂ ಯೋಜನೆಯಡಿ ಕ್ಷೇತ್ರಾಭಿವೃದ್ಧಿಗಾಗಿ 18.37 ಕೋಟಿ, ಮೂಲಸೌಕರ್ಯ ಅಭಿವೃದ್ಧಿಗಾಗಿ ಬೀದರ್ ಜಿಲ್ಲೆಯ ಪಾಪನಾಶಿ ದೇವಾಲಯಕ್ಕೆ ಪ್ರಸಾದಂ ಯೋಜನೆಯಡಿ 22.25 ಕೋಟಿ, ಸ್ವದೇಶ್ ದರ್ಶನ್ 2.0 ಯೋಜನೆಯಡಿ ಪ್ರವಾಸಿಗರ ಸೌಲಭ್ಯಕ್ಕಾಗಿ ವಿಜಯನಗರ ಜಿಲ್ಲೆ ಹಂಪಿಗೆ 25.63 ಕೋಟಿ, ವಿಶೇಷ ಬಂಡವಾಳ ಹೂಡಿಕೆ ಯೋಜನೆಯಡಿ ಬೆಂಗಳೂರಿನ ತಾತಗುಣಿ ರೋರಿಕ್ ದೇವಿಕಾರಾಣಿ ಎಸ್ಟೇಟ್‌ನಲ್ಲಿ ಸಾಂಸ್ಕೃತಿಕ ಹಬ್ ನಿರ್ಮಿಸಲು 99.17 ಕೋಟಿ, ವಿಶೇಷ ಬಂಡವಾಳ ಹೂಡಿಕೆ ಯೋಜನೆಯಡಿ ಬೆಳಗಾವಿ ಜಿಲ್ಲೆಯ ಸವದತ್ತಿ ರೇಣುಕಾ ಯಲ್ಲಮ್ಮ ದೇವಾಲಯದ ಅಭಿವೃದ್ಧಿಗಾಗಿ 100 ಕೋಟಿ ಅನುದಾನ ಬಿಡುಗಡೆಯಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಮಾನವ ಕಳ್ಳ ಸಾಗಾಣೆ ನಿರ್ಮೂಲನೆಗೆ ಕೈ ಜೋಡಿಸಿ

ಸಾರ್ವಜನಿಕರಿಗೆ ಹಿರಿಯ ನ್ಯಾಯಾಧೀಶ ಸುಧೀರ್ ಕರೆ



ಕಾರ್ಯಕ್ರಮವನ್ನು ಗಣ್ಯರು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಕೆ.ಆರ್.ಪೇಟೆ, ಜು.31– ಮಾನವ ಕಳ್ಳ ಸಾಗಾಣೆ ಸಾಮಾಜಿಕ ಪಿಡುಗಾಗಿದ್ದು, ಅದನ್ನು ನಿರ್ಮೂಲನೆ ಮಾಡಲು ಸಾರ್ವಜನಿಕರು ಕೈಜೋಡಿಸಬೇಕು ಎಂದು ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯದ ಹಿರಿಯ ನ್ಯಾಯಾಧೀಶ ಸುಧೀರ್ ಕರೆ ನೀಡಿದರು.

ತಾಲೂಕಿನ ಸಾರಂಗಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಾನವ ಕಳ್ಳ ಸಾಗಾಣೆ ದಿನ ಹಾಗೂ ಮಾದಕ ದ್ರವ್ಯ ವಿರೋಧಿ ದಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಾನವ ಕಳ್ಳ ಸಾಗಾಣಿಕೆ ಕದಂಬ ಬಾಹುಗಳು ವಿಶ್ವಾದ್ಯಂತ ವ್ಯಾಪಿಸಿದ್ದು ಮಕ್ಕಳು, ಮಹಿಳೆಯರು, ಪುರುಷರು, ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ವಯಸ್ಸಿನವರನ್ನು ಅಪಹರಿಸಿ ತಮ್ಮ ಸ್ವೇಚ್ಛಾಚಾರ, ಸಮಾಜಘಾತುಕ ಕೃತ್ಯ ಹಾಗೂ ಭಿಕ್ಷಾಟನೆ ಮುಂತಾದ ಕಾನೂನು ಬಾಹಿರ ಕೆಲಸಗಳಿಗೆ ಬಳಸಿಕೊಳ್ಳುವ ಜಾಲ ಸದ್ದಿಲ್ಲದೇ ಕೆಲಸ ಮಾಡುತ್ತಿದೆ. ಆದ್ದರಿಂದ ಶಾಲಾ ಮಕ್ಕಳು, ಮಹಿಳೆಯರು ಹಾಗೂ ಯುವಜನತೆ ಜಾಗೃತರಾಗಿ ಮಾನವ ಕಳ್ಳ ಸಾಗಾಣೆ ನಿರ್ಮೂಲನೆ ಮಾಡಿ ಆರೋಗ್ಯಯುತ, ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.

ಅಪರ ಸಿವಿಲ್ ನ್ಯಾಯಾಧೀಶ ದೇವರಾಜು ಮಾತನಾಡಿ, ಮಾನವ ಕಳ್ಳ ಸಾಗಾಣಿಕೆ ಸೇರಿದಂತೆ ಮಾದಕ ವಸ್ತುಗಳ ಸೇವನೆ ಮಾನವನ ನೆಮ್ಮದಿ ಹಾಳು ಮಾಡುತ್ತಿದೆ. ಮಾದಕ ವಸ್ತುಗಳ ಸೇವನೆ ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಜೊತೆಗೆ ಮಾದಕ ದ್ರವ್ಯದ ಮತ್ತಿನಿಂದ ಕಾನೂನು ಬಾಹಿರ ಕೃತ್ಯಗಳನ್ನು ನಡೆಸುವ ಸಾಧ್ಯತೆ ಹೆಚ್ಚಾಗಿರುವುದರಿಂದ ಮಾನವರಾದ ನಾವು ಮಾನವ ಕಳ್ಳ ಸಾಗಾಣಿಕೆಯ ತಡೆ ಸೇರಿದಂತೆ ಮಾದಕ ವಸ್ತುಗಳ ಬಳಕೆ ವಿರೋಧಿಸುವ ದಿಕ್ಕಿನಲ್ಲಿ ಎಲ್ಲರೂ ಒಂದಾಗಿ ಕೆಲಸ ಮಾಡಬೇಕಿದೆ ಎಂದರು.

ಅಪರ ಸಿವಿಲ್ ನ್ಯಾಯಾಧೀಶೆ ಕೆ.ವಿ.ಅರ್ಪಿತಾ ಮಾತನಾಡಿ, ಶಾಲಾ ಮಕ್ಕಳು ಅಪರಿಚಿತರು ನೀಡುವ ಯಾವುದೇ ಸಿಹಿ ಪದಾರ್ಥ, ವಸ್ತುಗಳನ್ನು ಪಡೆದುಕೊಳ್ಳಬಾರದು. ಸಿಹಿ ತಿಂಡಿಯಲ್ಲಿ ಮತ್ತು ಬರುವ ವಸ್ತು ಬೆರೆಸಿ ಅಪಹರಣ ಮಾಡುತ್ತಾರೆ. ಸಮಾಜದಲ್ಲಿ ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸುವ ಅಪರಿಚಿತ ವ್ಯಕ್ತಿಗಳು ಕಂಡು ಬಂದರೆ ಕೂಡಲೇ ತಮ್ಮ ಪೋಷಕರಿಗೆ ಇಲ್ಲವೇ ತಮ್ಮ ಶಿಕ್ಷಕರಿಗೆ ತಿಳಿಸುವ ಮೂಲಕ ಸಮಾಜಘಾತುಕ ಶಕ್ತಿಗಳನ್ನು ಬಗ್ಗು ಪಡೆಯುವ ನಿಟ್ಟಿನಲ್ಲಿ ಸಹಕಾರ ನೀಡಬೇಕು ಎಂದರು.

ಸರ್ಕಲ್ ಇನ್ಸ್‌ಪೆಕ್ಟರ್ ಸುಮಾರಾಣಿ ಮಾತನಾಡಿದರು. ಬಿಇಓ ವೈ.ಕೆ.ತಿಮ್ಮೇಗೌಡ ಅಧ್ಯಕ್ಷತೆ ವಹಿಸಿದ್ದರು. ವಕೀಲರ ಸಂಘದ ಕಾರ್ಯದರ್ಶಿ ಮಂಜೇಗೌಡ, ಜಂಟಿ ಕಾರ್ಯದರ್ಶಿ ದೊಡ್ಡಯ್ಯ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿದ್ಯಾವತಿ, ಅಂಗನವಾಡಿ ಮೇಲ್ವಿಚಾರಕಿ ಶಾಂತವ್ವ ಎಸ್.ಹಾವಣ್ಣನವರ್, ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಂಶುಪಾಲೆ ಲಲಿತ, ನ್ಯಾಯಾಲಯದ ಸಹಾಯಕ ಸರ್ಕಾರಿ ಅಭಿಯೋಜಕಿ ವೀಣಾಶ್ರೀ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸತೀಶ್, ಧರ್ಮೇಂದ್ರ, ಉಪಪ್ರಾಂಶುಪಾಲ ಡಾ.ರಾಮನಾಯಕ್, ಕೆ.ಆರ್.ನೀಲಕಂಠ ಮತ್ತಿತರರಿದ್ದರು.

ಹೈನುಗಾರಿಕೆಯಿಂದ ರೈತರ ಆರ್ಥಿಕ ಬೆಳವಣಿಗೆ

ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್



ಸರ್ವ ಸದಸ್ಯರ ಸಭೆಯನ್ನು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಉದ್ಘಾಟಿಸಿದರು.

ಚಿನಕುರಳಿ, ಜು.31– ರೈತರ ಆರ್ಥಿಕ ಬೆಳವಣಿಗೆಗೆ ಹೈನುಗಾರಿಕೆ ಸಹಕಾರಿಯಾಗಿದೆ ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ತಿಳಿಸಿದರು.

ಇಲ್ಲಿಗೆ ಸಮೀಪದ ಕಾಳೇಗೌಡನಕೊಪ್ಪಲು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದಲ್ಲಿ ಹೈನುಗಾರಿಕೆ ಸಾವಿರಾರು ಕುಟುಂಬಗಳ ಬದುಕಿಗೆ ಆರ್ಥಿಕ ಸ್ವಾವಲಂಬಿಯಾಗಿದೆ. ಹೈನುಗಾರಿಕೆಯಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದರು.

ಮನ್‌ಮುಲ್ ಒಕ್ಕೂಟ ಹಾಲು ಉತ್ಪಾದಕರಿಗೆ ಸಾಕಷ್ಟು ಸೌಲಭ್ಯ ಒದಗಿಸುತ್ತಿದೆ. ಅವುಗಳ ಬಗ್ಗೆ ಪ್ರತಿಯೊಬ್ಬರೂ ಅರಿತು ಸೌಲಭ್ಯದ ಸದ್ಬಳಕೆ ಮಾಡಿಕೊಳ್ಳಬೇಕು. ಕಾರ್ಯದರ್ಶಿಗಳು ಸಹ ರೈತರಿಗೆ ಅರಿವು ಮೂಡಿಸಬೇಕು ಎಂದರು.

ಮನ್‌ಮುಲ್ ನಿರ್ದೇಶಕನಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಿದ್ದೀರಾ. ನನ್ನ ಅವಧಿಯಲ್ಲಿ ಒಕ್ಕೂಟದಿಂದ ರೈತರಿಗೆ ದೊರೆಯುವ ರಬ್ಬರ್ ಮ್ಯಾಟ್, ಮೇವು ಕತ್ತರಿಸುವ ಯಂತ್ರ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ದೊರಕಿಸಿಕೊಡುವ ಶ್ರಮಿಸುತ್ತೇನೆ ಎಂದರು.

ರೈತರು ಕಡ್ಡಾಯವಾಗಿ ರಾಸುಗಳಿಗೆ ವಿಮೆ ಮಾಡಿಸಬೇಕು. ವಿಮೆ ಮಾಡಿಸದೆ ನಿರ್ಲಕ್ಷ್ಯ ಮಾಡಿ ಒಂದು ವೇಳೆ ರಾಸುಗಳು ಅಕಾಲಿಕ ಮರಣ ಹೊಂದಿದರೆ ರೈತರಿಗೆ ಪರಿಹಾರದ ಹಣ ದೊರೆಯಲ್ಲ. ಹಾಗಾಗಿ ಕಡ್ಡಾಯವಾಗಿ ರಾಸುಗಳಿಗೆ ವಿಮೆ ಮಾಡಿಸಬೇಕು ಎಂದರು.

ಇದೇ ವೇಳೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು. ಮಾರ್ಗ ವಿಸ್ತರಣಾಧಿಕಾರಿ ಜಿ.ನಾಗೇಂದ್ರ ಕುಮಾರ್, ಡೇರಿ ಅಧ್ಯಕ್ಷೆ ಸಾವಿತ್ರಮ್ಮ, ಉಪಾಧ್ಯಕ್ಷೆ ಪಾರ್ವತಮ್ಮ, ನಿರ್ದೇಶಕರಾದ ಲತಾಮಣಿ, ಕೆ.ಡಿ.ಶಾಂಭವಿ, ಚಂದ್ರಮ್ಮ, ಭಾಗ್ಯಮ್ಮ, ಸಾವಿತ್ರಮ್ಮ, ವನಜಾಕ್ಷಿ, ಪುಷ್ಪ, ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಂ.ಶಿವಕುಮಾರ್, ಗ್ರಾಪಂ ಸದಸ್ಯರಾದ ಶ್ರೀನಿವಾಸ್, ವಸಂತೇಗೌಡ, ಮಾಜಿ ಸದಸ್ಯ ಜೆ.ರವಿ, ಗ್ರಾಪಂ ಮಾಜಿ ಅಧ್ಯಕ್ಷ ಪಾಪಣ್ಣ, ಕೆ.ಸಿ.ಮಹದೇವಪ್ಪ, ಡೇರಿ ಕಾರ್ಯದರ್ಶಿ ಪಿ.ಮೀನಾಕ್ಷಿ, ಸಿಬ್ಬಂದಿಗಳಾದ ಹೇಮಾವತಿ, ಲತಾ ಸೇರಿದಂತೆ ಹಲವರಿದ್ದರು.

ಸದಸ್ಯರ ಸ್ಥಾನಗಳಿಗೆ ಅರ್ಜಿ ಆಹ್ವಾನ

ಮಂಡ್ಯ, ಜು.31– ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರದಲ್ಲಿ ಖಾಲಿ ಇರುವ ನಾಗರಿಕ ಸೇವಾ ವಲಯ ಹಾಗೂ ನಾಗರಿಕ ಸೇವಾ ಸಮಾಜದ ಸದಸ್ಯರ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಆಸಕ್ತ ಅಭ್ಯರ್ಥಿಗಳು ಆ.11ರ ಸಂಜೆ 5.30 ರವರೆಗೆ ಖುದ್ದಾಗಿ ಜಿಲ್ಲಾಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಸುವುದು. ಕೊನೆ ದಿನಾಂಕದ ನಂತರ ಬರುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಸರ್ಕಾರದಿಂದ ರೈತರ ಶೋಷಣೆ: ಸಚ್ಚಿದಾನಂದ ಟೀಕೆ



ಮಂಡ್ಯ, ಜು.31– ರಾಜ್ಯದಲ್ಲಿ ಕೃಷಿ ಚಟುವಟಿಕೆ ಪ್ರಾರಂಭವಾಗಿ ಹಲವು ದಿನಗಳೇ ಕಳೆದಿವೆ. ಆದರೂ ರೈತರಿಗೆ ಸಮರ್ಪಕ ರಸ ಗೊಬ್ಬರ ವಿತರಿಸಲು ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಸಾಧ್ಯವಾ ಗುತ್ತಿಲ್ಲ. ಬದಲಿಗೆ ಕೇಂದ್ರ ಸರ್ಕಾರದ ವಿರುದ್ಧ ಸುಖಾ ಸುಮ್ಮನೆ ಆರೋಪ ಮಾಡಿಕೊಂಡು ಕಾಲ ಕಳೆಯುತ್ತಿದೆ ಎಂದು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವ ಮುಖಂಡ ಇಂಡುವಾಳು ಸಚ್ಚಿದಾನಂದ ಟೀಕಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಅಧಿಕಾರಕ್ಕೆ ಬಂದಾಗಿನಿಂದಲೂ ರೈತ ವಿರೋಧಿ ಧೋರಣೆ ಅನುಸರಿಸುತ್ತಿರುವ ಕಾಂಗ್ರೆಸ್ ಸರ್ಕಾರ ಇದೀಗ ಮತ್ತೊಮ್ಮೆ ರೈತರನ್ನು ಶೋಷಣೆ ಮಾಡುವ ಕೆಲಸಕ್ಕೆ ಮುಂದಾಗಿದೆ. ರೈತರ ಮಕ್ಕಳಿಗೆ ನೀಡುತ್ತಿದ್ದ ಪ್ರೋತ್ಸಾಹಧನ ಸ್ಥಗಿತಗೊಳಿಸಿದೆ. ಕೃಷಿ ಸಮ್ಮಾನ್ ಯೋಜನೆ ನಿಲ್ಲಿಸಿದೆ. ಕೃಷಿ ಪಂಪ್‌ಸೆಟ್‌ಗೆ ಕಡಿಮೆ ವೆಚ್ಚದಲ್ಲಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳುತ್ತಿದ್ದನ್ನು ನಿಲ್ಲಿಸಿ ಲಕ್ಷಾಂತರ ರೂ.ಗಳನ್ನು ರೈತರೇ ಕೊಡುವಂತೆ ಮಾಡಿರುವುದೇ ರಾಜ್ಯ ಸರ್ಕಾರದ ದೊಡ್ಡ ಸಾಧನೆ ಎಂದು ವ್ಯಂಗ್ಯವಾಡಿದ್ದಾರೆ.

ಕೇಂದ್ರ ಸರ್ಕಾರದಿಂದ ಪೂರೈಕೆ ಮಾಡಿದ್ದ ರಸಗೊಬ್ಬರವನ್ನು ರಾಜ್ಯ ಸರ್ಕಾರ ಕಾಳಸಂತೆಯಲ್ಲಿ ಮಾರಾಟ ಮಾಡಿಕೊಂಡಿದೆ. ಆ ಮೂಲಕ ರೈತರಿಗೆ ಅನ್ಯಾಯ ಮಾಡಿದೆ. ಈ ವರ್ಷ ಕೆಆರ್‌ಎಸ್ ಡ್ಯಾಂ ಭರ್ತಿಯಾಗಿದ್ದು, ರೈತರು ನೆಮ್ಮದಿ ಯಿಂದ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು. ಆದರೀಗ ರಸಗೊಬ್ಬರ ಪೂರೈಕೆ ಮಾಡಲಾಗದ ಪರಿಣಾಮ ಅನ್ನದಾತರು ಆತಂಕದಲ್ಲಿದ್ದಾರೆ. ಇಷ್ಟಾದರೂ ಸಾಧನಾ ಸಮಾವೇಶ ಮಾಡಿರುವುದು ಕಾಂಗ್ರೆಸ್ ಸರ್ಕಾರದ ದುರಂತ. ಮುಂದಿನ ದಿನದಲ್ಲಿ ಇದಕ್ಕೆ ತಕ್ಕ ಪಾಠ ಕಲಿಯಬೇಕಾಗುತ್ತದೆ. ಕೂಡಲೇ ರಸಗೊಬ್ಬರ ಪೂರೈಕೆ ಮಾಡದಿದ್ದರೆ ಬೀದಿಗಿಳಿದು ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಎಂಬಿಬಿಎಸ್, ಬಿಇ ಕೋರ್ಸ್ ಶುಲ್ಕ ಇಳಿಸಲು ಆಗ್ರಹ



ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು.

ಶ್ರೀರಂಗಪಟ್ಟಣ, ಜು.31– ವೈದ್ಯಕೀಯ, ದಂತ ವೈದ್ಯಕೀಯ, ಇಂಜಿನಿಯರಿಂಗ್ ಕೋರ್ಸ್‌ಗಳ ಶುಲ್ಕ ಬಡ ವಿದ್ಯಾರ್ಥಿಗಳಿಗೆ ಹೊರೆಯಾಗಿದ್ದು, ಸರ್ಕಾರ ಶುಲ್ಕ ಇಳಿಸಬೇಕು ಎಂದು ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ ಆಗ್ರಹಿಸಿದರು.

ತಾಲೂಕಿನ ಪಾಲಹಳ್ಳಿಯಲ್ಲಿ ಮೆರಿಟ್ ಆಧಾರದ ಮೇಲೆ ವೈದ್ಯಕೀಯ ಶಿಕ್ಷಣ ಕೋರ್ಸ್‌ಗೆ ಸರ್ಕಾರಿ ಸೀಟ್ ಪಡೆದಿರುವ ಯತೀಂದ್ರ, ಮುಕುಂದ ಮತ್ತು ದಿಶಾ.ಎನ್ ಅವರಿಗೆ ಎನ್.ಶಂಕರೇಗೌಡ ಚಾರಿಟಬಲ್ ಟ್ರಸ್ಟ್ ವತಿಯಿಂದ ಲ್ಯಾಪ್‌ಟಾಪ್ ವಿತರಿಸಿ, ಅಭಿನಂದಿಸಿ ಅವರು ಮಾತನಾಡಿದರು.

ಆರ್ಥಿಕವಾಗಿ ಹಿಂದುಳಿದ ಕುಟುಂಬದ ವಿದ್ಯಾರ್ಥಿಗಳು ಮೆರಿಟ್ ಆಧಾರದ ಮೇಲೆ ಸರ್ಕಾರಿ ಕೋಟಾದಲ್ಲಿ ಎಂಬಿಬಿಸ್, ಇಂಜಿನಿಯರಿಂಗ್ ಇತರ ತಾಂತ್ರಿಕ ಶಿಕ್ಷಣ ಕೋರ್ಸ್‌ಗಳಿಗೆ ಸೀಟು ಪಡೆದರೂ ಸದ್ಯ ಇರುವ ಶುಲ್ಕ ಭರಿಸಲು ಕಷ್ಟವಾಗಿದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಶಂಕರೇಗೌಡ ಮಾತನಾಡಿದರು. ಈ ವೇಳೆ ಪೈಮುಕುಂದ, ಪಿಎಸಿಎಸ್ ಮಾಜಿ ಅಧ್ಯಕ್ಷ ನಾಗರಾಜು, ಗ್ರಾಪಂ ಸದಸ್ಯರಾದ ಪ್ರಕಾಶ್, ರೇಖಾ, ಗಾಯತ್ರಿ, ಲೋಕೇಶ್, ಮಂಜುಳಾ, ಮಾಜಿ ಸದಸ್ಯ ಗಿರೀಶ್, ಮುಖಂಡರಾದ ಪಿ.ಹೆಚ್. ಚಂದ್ರಶೇಖರ್, ಸುಖೇಶ್, ಶೇಖರ್, ಯಜಮಾನ್ ಶ್ರೀಧರ್, ಪೈಉಮೇಶ್, ಸಂಜೀವಣ್ಣ, ಪ್ರಗತಿಪರ ರೈತ ರಮೇಶ್ ಇದ್ದರು.

ವಿದ್ಯಾರ್ಥಿ ಸಂಘ ಉದ್ಘಾಟನೆ



ಮಂಡ್ಯದ ಗೀತಾ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿ ಸಂಘದ ಉದ್ಘಾಟನೆ, ಉಚಿತ ಸಮವಸ್ತ್ರ ಹಾಗೂ ನೋಟ್‌ಬುಕ್ ವಿತರಣೆ ಕಾರ್ಯಕ್ರಮ ನಡೆಯಿತು. ಈ ವೇಳೆ ಮಂಡ್ಯ ವಿವಿ ಕುಲಪತಿ ಡಾ.ಎಂ.ವೈ.ಶಿವರಾಂ, ಸಂಸ್ಥೆ ಅಧ್ಯಕ್ಷ ಶ್ರೀಕಂಠಯ್ಯ, ಗೌರವ ಕಾರ್ಯದರ್ಶಿ ಕೆ.ಎಸ್.ಬಸವರಾಜು, ಆಡಳಿತಾಧಿಕಾರಿ ಕೆ.ಎಸ್.ಮಹಾದೇವೇಗೌಡ, ಬ್ಯಾಂಕ್ ಆಫ್ ಇಂಡಿಯಾ ಮ್ಯಾನೇಜರ್ ನೇಹಾ ಚೌಧರಿ, ನಗರಸಭಾ ಸದಸ್ಯೆ ಮೀನಾಕ್ಷಿ, ಶಿಕ್ಷಕ ವಸಂತ್ ಕುಮಾರ್, ಸಹ ಶಿಕ್ಷಕರಾದ ಕಲ್ಲಪ್ಪ, ಸರಿತಾ, ಕುಮಾರ್, ದೇವರಾಜು, ರುದ್ರೇಶ್ ಉಪಸ್ಥಿತರಿದ್ದರು.

ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಜು.31– ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ 2025–26ನೇ ಸಾಲಿಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪ.ಜಾ / ಪ.ವರ್ಗದ ಸಾಮಾನ್ಯ ಪದವಿ ಕೋರ್ಸ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು https://shp.karnataka.gov.in/bcwd ನಲ್ಲಿ ಆ.14ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗೆ ಮೊ: 8050770004, 8050770005 ಸಂಪರ್ಕಿಸಬಹುದಾಗಿದೆ.

ಅರ್ಜಿ ಆಹ್ವಾನ

ಮಂಡ್ಯ, ಜು.31– ವಿಕಲಚೇತನರ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಜಿಲ್ಲೆಯ ನಗರಸಭೆ ವ್ಯಾಪ್ತಿ ವಿಕಲಚೇತನರ ಕೆಲಸ ಮಾಡಲು ಖಾಲಿ ಇರುವ ನಗರ ಪುನರ್ವಸತಿ ಕಾರ್ಯಕರ್ತರ ಹುದ್ದೆಗೆ ಗೌರವಧನ ಆಧಾರದ ಮೇಲೆ ನಗರಸಭೆ ವ್ಯಾಪ್ತಿ ವಾಸಿಸುತ್ತಿರುವ ಅರ್ಹ ವಿಕಲಚೇತನರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ತಾಪಂ ಎಂ.ಆರ್.ಡಬ್ಲ್ಯೂ ಹೆಚ್.ಎಸ್.ಮಲ್ಲೇಶ್ ಅವರಿಂದ ಅರ್ಜಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಆ.16 ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9480075940 / 08232–239234 ಅನ್ನು ಸಂಪರ್ಕಿಸಬಹುದು.

ಮೂರನೇ ಪುಟದಿಂದ

ದೇಸಾಯಿ ಆಯೋಗದ ವರದಿ ಸಲ್ಲಿಕೆ

2024 ಜುಲೈನಲ್ಲಿ ನ್ಯಾ.ಪಿ.ಎನ್.ದೇಸಾಯಿ ಏಕಸದಸ್ಯ ಆಯೋಗ ರಚಿಸಿದ್ದ ಸರ್ಕಾರ, 2006ರಿಂದ 2024ರ ಜುಲೈ 15ರವರೆಗೂ ನಡೆದಿರುವ ಭೂಸ್ವಾಧೀನ, ಬಡಾವಣೆಗಳ ನಿರ್ಮಾಣ, ನಿವೇಶನ ಹಂಚಿಕೆ, ಪರಿಹಾರ ವಿತರಣೆ ಮತ್ತು ಬದಲಿ ನಿವೇಶನಗಳ ಹಂಚಿಕೆ ಕುರಿತ ಆರೋಪಗಳ ಕುರಿತು ವಿಚಾರಣೆಗೆ ಸೂಚಿಸಿತ್ತು ಹೆಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ (ಎರಡು ಅವಧಿ), ಡಿ.ವಿ.ಸದಾನಂದ ಗೌಡ, ಜಗದೀಶ ಶೆಟ್ಟರ್, ಸಿದ್ದರಾಮಯ್ಯ (ಎರಡು ಅವಧಿ) ಮತ್ತು ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಪ್ರಾಧಿಕಾರದಲ್ಲಿ ನಡೆದಿರಬಹುದಾದ ಅವ್ಯವಹಾರಗಳ ಕುರಿತು ವಿಚಾರಣೆ ನಡೆಸುವಂತೆ ಆದೇಶದಲ್ಲಿ ಉಲ್ಲೇಖಿಸಲಾಗಿತ್ತು. ವರ್ಷದ ಬಳಿಕ ಸರ್ಕಾರಕ್ಕೆ ವರದಿ ಸಲ್ಲಿಸಿರುವ ನ್ಯಾ.ದೇಸಾಯಿ ನೇತೃತ್ವದ ಆಯೋಗ ಹಲವು ಶಿಫಾರಸ್ಸುಗಳ ಮಾಡಿದೆ ಎನ್ನಲಾಗಿದೆ

ಕಾರಂಜಿ, ಡ್ರ್ಯಾಗನ್ ಕೊಳ ಆಕರ್ಷಣೆ



ಮೆಚ್ಚುಗೆ ವ್ಯಕ್ತಪಡಿಸಿದ್ದರು. ಕಳೆದ ಬಾರಿಯ ವಸ್ತು ಪ್ರದರ್ಶನದಲ್ಲಿ ಬ್ರಾಂಡ್ ಮೈಸೂರು ಪರಿಕಲ್ಪನೆ ಅಡಿ ವಸ್ತು ಪ್ರದರ್ಶನದ ಆವರಣದಲ್ಲಿ ಕೋಟಿ ರೂ. ವೆಚ್ಚದಲ್ಲಿ ಮೈಸೂರಿನ ಹಳೆಯ ಮರದ ಅರಮನೆ ನಿರ್ಮಾಣ ಮಾಡಿ ಅದರೊಳಗೆ ಮೈಸೂರು ವಿಳ್ಯೆದೆಲೆ, ಅಡಿಕೆ, ಮೈಸೂರು ರೇಷ್ಮೆ ಸೀರೆ, ಮೈಸೂರ್ ಸ್ಯಾಂಡಲ್ ಸೋಪ್, ಮಲ್ಲಿಗೆ ಹಾಗೂ ಶ್ರೀಗಂಧದ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಿದ್ದು, ಹಾಗೂ ಆವರಣದಲ್ಲಿ ವಿಶೇಷವಾಗಿ ಅಳವಡಿಸಿದ್ದ ಜಗಮಗಿಸುವ ದೀಪಾಲಂಕಾರವು ಎಲ್ಲರ ಗಮನ ಸೆಳೆದು ಪ್ರವಾಸಿಗರನ್ನು ಕೈಬೀಸಿ ಕರೆದಿತ್ತು.

ವಸ್ತು ಪ್ರದರ್ಶನದಲ್ಲಿ ಸಾಕಷ್ಟು ಬದಲಾವಣೆ ಮಾಡುವ ಚಿಂತನೆಯಿಂದ ಅಯೂಬ್ ಖಾನ್ ಬೇಲೂರು, ಹಳೇಬೀಡಿನ ಪಾರಂಪರಿಕ ಶೈಲಿಯ ಎ ಬ್ಲಾಕ್‌ನ ವಾಣಿಜ್ಯ ಮಳಿಗೆ, ವಿಶೇಷ ಕಾರಂಜಿ, ಡ್ರ್ಯಾಗನ್ ಪಾಯಿಂಟ್‌ಗಳ ನಿರ್ಧರಿಸಿ ಖಾಸಗಿ ಸಂಸ್ಥೆಯೊಂದಿಗೆ ಚರ್ಚಿಸಿ, ತ್ರಿಡಿ ಚಿತ್ರ ನಿರ್ಮಿಸಿದರು. ಮುಖ್ಯಮಂತ್ರಿಗಳಿಗೆ ತೋರಿಸಿ ನಂತರ ಅನುದಾನಕ್ಕೆ ಬೇಡಿಕೆ ಇಟ್ಟಿದರು. ಅದರಂತೆ ಮುಖ್ಯಮಂತ್ರಿಗಳು ಮೆಚ್ಚುಗೆ ವ್ಯಕ್ತಪಡಿಸಿ ಅನುದಾನ ಬಿಡುಗಡೆ ಮಾಡಿದ್ದಾರೆ.

ಗಾಜಿನ ಬಲವರ್ಧಿತ ಕಾಂಕ್ರೀಟ್ ಬಳಕೆ: ಎ ಬ್ಲಾಕ್‌ನ ವಾಣಿಜ್ಯ ಮಳಿಗೆಗಳ ಕಾಮಗಾರಿ ಆರಂಭವಾಗಿದ್ದು, ಬೇಲೂರು ಹಳೇಬೀಡಿನಲ್ಲಿರುವ ಶಿಲ್ಪಕಲೆ ಹೊಂದಿರುವ ರೀತಿಯಲ್ಲಿ ಕಂಬಗಳನ್ನು ಗಾಜಿನ ಬಲವರ್ಧಿತ ಕಾಂಕ್ರೀಟ್ ಬಳಸಿ ಮಾಡಲಾಗುತ್ತಿದ್ದು, ಈಗಾಗಲೇ 150ಕ್ಕೂ ಹೆಚ್ಚು ಕಂಬಗಳ ಮೋಲ್ಡ್‌ಗಳನ್ನು ಮಾಡಿಕೊಂಡಿದ್ದು, ಅಳವಡಿಸುವ ಕಾರ್ಯ ಆರಂಭಿಸಿದ್ದಾರೆ.

ಪಾರಂಪರಿಕ ಶೈಲಿಯ ಕ್ಯಾಂಟಿನ್ : ಎ ಬ್ಲಾಕ್‌ನ ಮಧ್ಯ ಭಾಗದಲ್ಲಿ ಪಾರಂಪರಿಕ ಶೈಲಿಯಲ್ಲಿ ಕ್ಯಾಂಟಿನ್ ನಿರ್ಮಾಣ ಕಾರ್ಯವು ಭರದಿಂದ ಸಾಗಿದ್ದು, ಪೂರ್ಣ ಕಬ್ಬಿಣವನ್ನು ಬಳಸಿ ಮಾಡಲಾಗುತ್ತಿದ್ದು, ಮೇಲ್ಭಾಗದಲ್ಲಿ ಗಾಜಿನ ಬಲವರ್ಧಿತ ಕಾಂಕ್ರೀಟ್ ಬಳಸಿಕೊಂಡು ಗೋಪುರ ನಿರ್ಮಾಣ ಮಾಡಲಿದ್ದಾರೆ. ಇದರ ಮುಂಭಾಗ ಪ್ರವಾಸಿಗರು ಕುಳಿತು ಉಪಹಾರ ಸೇವಿಸಲು ವಿಶೇಷ ಆಸನದ ವ್ಯವಸ್ಥೆ ಮಾಡಲಾಗುತ್ತಿದ್ದು, ಜೊತೆಗೆ ಮನರಂಜನೆ ಉದ್ದೇಶದಿಂದ ಸಾಂಸ್ಕೃತಿಕ ಮಂಟಪ ನಿರ್ಮಿಸುತ್ತಿದ್ದಾರೆ.

> ದಸರಾ ಉದ್ಘಾಟನೆಗೂ ಮುಂಚಿತವಾಗಿ ಎ ಬ್ಲಾಕ್ ವಾಣಿಜ್ಯ ಮಳಿಗೆ, ಸಂಗೀತ ಕಾರಂಜಿ, ಡ್ರ್ಯಾಗನ್ ಕೊಳದ ಕಾಮಗಾರಿ ಪೂರ್ಣಗೊಳಿಸುವ ಗುರಿಯನ್ನು ಪ್ರಾಧಿಕಾರ ಹೊಂದಿದೆ.
>
> –ಅಯೂಬ್ ಖಾನ್, ಅಧ್ಯಕ್ಷ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ

ಸಂಗೀತ ಕಾರಂಜಿ, ಡ್ರ್ಯಾಗನ್ ಕೊಳ: ವಸ್ತುಪ್ರದರ್ಶನ ಮಧ್ಯ ಭಾಗದಲ್ಲಿ ವಿಶೇಷವಾಗಿ ಸಂಗೀತ ಕಾರಂಜಿ ಕಾಮಗಾರಿ ಆರಂಭವಾಗಿದ್ದು, ಕಾಂಕ್ರೀಟ್ ಅಳವಡಿಸಿ ಕಬ್ಬಿಣದ ಸರಳುಗಳನ್ನು ಅಳವಡಿಸಿಕೊಳ್ಳಲಾಗುತ್ತದೆ. ಮತ್ತೊಂದೆಡೆ ಹಿಂಭಾಗದಲ್ಲಿ ಡ್ರ್ಯಾಗನ್ ಕೊಳ ನಿರ್ಮಾಣಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಈ ಬಾರಿ ದಸರಾ ಮಹೋತ್ಸವದಲ್ಲಿ ಸಂಗೀತ ಕಾರಂಜಿ ಮತ್ತು ಡ್ರ್ಯಾಗನ್ ಕೊಳ ಪ್ರವಾಸಿಗರ ಪ್ರಮುಖ ಆಕರ್ಷಣೆಯಾಗಲಿದೆ.

ಎರಡು ಪಾಳಿಯಲ್ಲಿ ಕೆಲಸ : ವಸ್ತು ಪ್ರದರ್ಶನದ ಕೆಲಸ ಭರದಿಂದ ಸಾಗುತ್ತಿದ್ದು, ದಸರಾ ಉದ್ಘಾಟನೆ ವೇಳೆಗೆ ಕಾಮಗಾರಿ ಪೂರ್ಣಗೊಳಿಸಿ ಪ್ರವಾಸಿಗರಿಗೆ ಮುಕ್ತಗೊಳಿಸುವ ಉದ್ದೇಶದಿಂದ 100ಕ್ಕೂ ಹೆಚ್ಚು ಕಾರ್ಮಿಕರು ಎರಡು ಪಾಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕದ 8 ಕೋಟಿ ಜನರ ಆಸ್ತಿ ಪಾಸ್ತಿ, ಹಕ್ಕುಗಳ ರಕ್ಷಣೆ 8 ಲಕ್ಷ ಸರ್ಕಾರಿ ನೌಕರರ ಮೇಲಿದೆ

ಸಾರ್ವಜನಿಕರ ಅಹವಾಲು ಸ್ವೀಕಾರ ಸಭೆಯಲ್ಲಿ ಉಪ ಲೋಕಾಯುಕ್ತ ನ್ಯಾ. ಫಣೀಂದ್ರ ಅಭಿಮತ

- ಲಂಚ ಪಡೆಯುವುದು, ಕೊಡುವುದು ಅಪರಾಧ
- ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣ ಮಾಡಬೇಕು
- 3 ದಿನದ ಪ್ರವಾಸದಲ್ಲಿ 258 ಪ್ರಕರಣ ಇತ್ಯರ್ಥ



ಮೈಸೂರು ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಗುರುವಾರ ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಸಾರ್ವಜನಿಕರ ದೂರು ವಿಚಾರಣೆ ಹಾಗೂ ವಿಲೇವಾರಿ ಸಂಬಂಧ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಅಧಿಕಾರಿ ಸಭೆಯಲ್ಲಿ ಮಾತನಾಡಿದರು.

ಮೈಸೂರು, ಜು.31(ಬಿಎಲ್‌ಯು)– ಕರ್ನಾಟಕದ 8 ಕೋಟಿ ಜನರ ಆಸ್ತಿ ಪಾಸ್ತಿ, ಹಕ್ಕು ರಕ್ಷಣೆ, ಆರೋಗ್ಯ ಸಂರಕ್ಷಣೆ ಸೇರಿದಂತೆ ಇತರೆ ಪ್ರಮುಖ ಜವಾಬ್ದಾರಿಯನ್ನು 8 ಲಕ್ಷ ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರು ನಿರ್ವಹಿಸಬೇಕಿದ್ದು, ಈ ಬಗ್ಗೆ ಬದ್ಧತೆ ತೋರಬೇಕು ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ತಾಕೀತು ಮಾಡಿದರು.

ಮೈಸೂರಿನ ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಇಂದು ಸಾರ್ವಜನಿಕರ ದೂರು ವಿಚಾರಣೆ ಹಾಗೂ ವಿಲೇವಾರಿ ಸಂಬಂಧ ಜಿಲ್ಲಾ ಮಟ್ಟದ ಅಧಿಕಾರಿ ಗಳೊಂದಿಗೆ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರದ ಪ್ರತಿ ನಿಧಿಯಾಗಿ ಕಾರ್ಯನಿರ್ವಹಿಸುವ ಅವ ಕಾಶವನ್ನು ದೇವರೆ ನಿಮಗೆ ಕೊಟ್ಟಿದ್ದಾನೆ. ಹಾಗಾಗಿ ತಮ್ಮ ಕಾರ್ಯವನ್ನು ಸರ್ಕಾರಿ ನೌಕರರು ಸಮರ್ಥ ಮತ್ತು ಪ್ರಾಮಾಣಿಕವಾಗಿ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣಕ್ಕೆ ಸಾರ್ವಜನಿಕರ ಸಹಕಾರ ಅತ್ಯಗತ್ಯ. ಲಂಚ ಕೊಟ್ಟರೆ ನಾಳೆಯೇ ನಮ್ಮ ಕೆಲಸ ಮಾಡಿಕೊಡುತ್ತಾರೆ ಎಂಬ ಮನೋಭಾವ ಸಾರ್ವಜನಿಕರಲ್ಲಿ ಇರಬಾರದು. ಕೆಲಸ ಆಗಬೇಕಾದರೆ ಲಂಚ ಕೊಡಬೇಕು ಎಂಬ ಮನೋಭಾವ ಜನರಲ್ಲಿ ಇರಬಾರದು. ಲಂಚ ಕೊಡುವವರು ಇರುವವರೆಗೂ ಅದನ್ನು ಪಡೆಯುವವರು ಇರುತ್ತಾರೆ ಎಂದು ಅಭಿಪ್ರಾಯಪಟ್ಟರು.

ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರು ಕಾನೂನು ವ್ಯಾಪ್ತಿಯಲ್ಲೆ ಕೆಲಸ ಮಾಡಬೇಕು. ನಿಯಮಾನುಸಾರ ಕರ್ತವ್ಯ ನಿರ್ವಹಿಸಬೇಕು. ಕರ್ತವ್ಯ ನಿರ್ವಹಣೆಯಲ್ಲಿ ಯಾವುದೇ ಕಾರ್ಯ ದುರುದ್ದೇಶದಿಂದ ಕೂಡಿರಬಾರದು. ಸುಲಭವಾಗಿ ಜನರ ಕೆಲಸಗಳನ್ನು ಮಾಡಬೇಕು. ಅದು ಬಿಟ್ಟು ಅಲೆಸಬಾರದು ಎಂದು ನ್ಯಾಯಮೂರ್ತಿ ಫಣೀಂದ್ರ ಸಲಹೆ ನೀಡಿದರು.

ಲೋಕಾಯುಕ್ತಕ್ಕೆ ಸಲ್ಲಿಕೆಯಾಗಿದ್ದ ಬಹಳಷ್ಟು ದೂರುಗಳನ್ನು ಪರಿಹಾರ ಮಾಡಲಾಗಿದೆ. ಕೆಲವು ದೂರುಗಳು ಕಾನೂನು ವ್ಯಾಪ್ತಿಯಲ್ಲಿ ಪರಿಹಾರ ಮಾಡಲು ಸಾಧ್ಯವಾಗಿರುವುದಿಲ್ಲ. ಅದನ್ನು ಪರಿಶೀಲನೆ ಮಾಡಿ ಅಧಿಕಾರಿಗಳಿಂದ ಮಾಹಿತಿ ಪಡೆದು ಇಲ್ಲೇ ಅದನ್ನು ಪರಿಹರಿಸಲು ಇಂದು ನಾನು ಮೈಸೂರಿಗೆ ಬಂದಿದ್ದೇನೆ ಎಂದು ತಿಳಿಸಿದರು.

ಮೂರು ದಿನದ ನನ್ನ ಪ್ರವಾಸದಲ್ಲಿ ಮೈಸೂರು ಜಿಲ್ಲೆಯ 258 ಪ್ರಕರಣ ಗಳನ್ನು ಇತ್ಯರ್ಥ ಮಾಡುವ ಗುರಿ ಹೊಂದಿದ್ದೇನೆ. ಈ ಮೂಲಕ ನಮ್ಮ ಕಾರ್ಯದಲ್ಲಿ ಪ್ರಗತಿ ಬಗ್ಗೆ ಜನರಲ್ಲಿ ಭರವಸೆ ಮೂಡಿಸುತ್ತೇವೆ ಎಂದು ನ್ಯಾಯಮೂರ್ತಿ ಫಣೀಂದ್ರ ತಿಳಿಸಿದರು. ಲೋಕಾಯುಕ್ತ ಜಂಟಿ ನಿಬಂಧಕ(ವಿಚಾರಣೆ) ವಿ.ಎನ್.ವಿಮಲ, ಕಾರ್ಯದರ್ಶಿ ಕಿರಣ್ ಪಾಟೀಲ್, ಮೈಸೂರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅಮರನಾಥ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್‌ಕುಮಾರ್, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ಹಾಜರಿದ್ದರು.

15 ದಿನದವರೆಗೆ ಮಾತ್ರ ನನ್ನ ಹವಾ ಇರುತ್ತದೆ!

ಸಾರ್ವಜನಿಕರ ಅಹವಾಲು ಸ್ವೀಕರಿಸಲು ನಾನು ಮೈಸೂರಿಗೆ ಭೇಟಿ ನೀಡಿ ನಿರ್ಗಮಿಸಿದ 15 ದಿನದವರೆಗೂ ಮಾತ್ರ ಹವಾ ಇರುತ್ತದೆ. ತರುವಾಯ ಸರ್ಕಾರಿ ಅಧಿಕಾರಿಗಳು ಎಂದಿನಂತೆ ವರ್ತಿಸಲಿದ್ದು, ಜನರ ಸಮಸ್ಯೆಗೆ ಸ್ಪಂದಿಸುವುದಿಲ್ಲ ಎಂದು ನ್ಯಾಯಮೂರ್ತಿ ಫಣೀಂದ್ರ, ಬೇಸರದಿಂದ ನುಡಿದರು. ಮೈಸೂರಿಗೆ ನಾನು ಭೇಟಿ ನೀಡುವ ಒಂದು ವಾರಕ್ಕೂ ಮುನ್ನ ಹವಾ ಇರುತ್ತದೆ. ಭೇಟಿ ಬಳಿಕವೂ ನೀಡಿ ನಿರ್ಗಮಿಸಿದ 15 ದಿನದವರೆಗೆ ಹವಾ ಇರುತ್ತದೆ. ತರುವಾಯ ಅಧಿಕಾರಿಗಳು ಎಂದಿನಂತೆ ತಮ್ಮ ನಡವಳಿಕೆ ಪ್ರದರ್ಶಿಸುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರಿ ಕೆಲಸ ದೇವರ ಕೆಲಸ ಎಂದು ಪರಿಗಣಿಸಿ ಜನರ ಸಮಸ್ಯೆ ಪರಿಹಾರ ಮಾಡಬೇಕು. ಈ ಕಾರ್ಯ ನಿರ್ವಹಣೆ ಮಾಡಲು ಸರ್ಕಾರ ತಮ್ಮನ್ನು ನೇಮಕ ಮಾಡಿದೆ ಎಂಬುದನ್ನು ಮರೆಯಬೇಡಿ ಎಂದು ನ್ಯಾ. ಫಣೀಂದ್ರ ಎಚ್ಚರಿಸಿದರು.

ಸರ್ಕಾರಿ ಕಚೇರಿಗಳಲ್ಲಿ ತಮ್ಮ ಕೆಲಸ ಮಾಡಿಸಿಕೊಳ್ಳಲು ಜನರಿಗೆ ತಬರನ ಕಥೆಯಾಗಬಾರದು. ನಿವೃತ್ತರಾದ ನಂತರ ತಮಗೂ ತಬರನ ಕಥೆಯಾಗುತ್ತದೆ ಎಂಬುದನ್ನು ಮರೆಯಬಾರದು ಎಂದು ಅವರು ಸರ್ಕಾರಿ ನೌಕರರಿಗೆ ಮನವರಿಕೆ ಮಾಡಿಕೊಟ್ಟರು. ಅದೇನೆ ಆಗಲಿ ರಾಜ್ಯದ ಉಳಿದ ಜಿಲ್ಲೆಗಳಿಗೆ ಹೋಲಿಕೆ ಮಾಡಿದರೆ ಮೈಸೂರಿನಲ್ಲಿ ಸ್ವಲ್ಪ ಸುಧಾರಣೆಯಾಗಿದೆ. ಇದು ಮತ್ತಷ್ಟು ಹೆಚ್ಚಾಗಬೇಕು ಎಂದು ಸಲಹೆ ನೀಡಿದರು.

ಸರ್ಕಾರಿ ಭೂಮಿ ಕಬಳಿಸಿದರೂ ಅಧಿಕಾರಿಗಳ ಮೌನ, ಕೆಲವರಿಗೆ ತಬರನ ಕಥೆ

ಸರ್ಕಾರದ 4 ಎಕರೆ ಭೂಮಿಯನ್ನು ಖಾಸಗಿಯವರು ಕಬಳಿಸುತ್ತಿದ್ದರೂ ಮೌನ ವಹಿಸಿರುವ ಸರ್ಕಾರಿ ಅಧಿಕಾರಿಗಳನ್ನು ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ತೀವ್ರ ತರಾಟೆಗೆ ತೆಗೆದುಕೊಂಡರು.

ಮೈಸೂರಿನ ಹುಣಸೂರು ತಾಲೂಕು ಚಿಲ್ಕುಂದ ಗ್ರಾಮದಲ್ಲಿ 4 ಎಕರೆ 28 ಗುಂಟೆ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ. ಈ ಬಗ್ಗೆ ನಾನು ಹೋರಾಟ ಮಾಡಿದ ಫಲವಾಗಿ ಒಂದು ಬಾರಿ ಒತ್ತುವರಿ ತೆರವು ಮಾಡಿದರು. ಆದರೆ ಎರಡನೇ ಬಾರಿ ಒತ್ತುವರಿಯಾದಾಗ ಸರ್ಕಾರದ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೆ ಮೌನ ವಹಿಸಿದ್ದಾರೆ ಎಂದು ಅದೇ ಗ್ರಾಮದ ಗ್ರಾಮಸ್ಥ ಸಿ.ಎಸ್.ನಾಗರಾಜ್ ಆರೋಪಿಸಿದರು.

ಈ ವೇಳೆ ತಾಲೂಕು ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡ ನ್ಯಾಯಮೂರ್ತಿ ಫಣೀಂದ್ರ, ಸರ್ಕಾರಿ ಭೂಮಿ ಸಂರಕ್ಷಿಸುವ ನಿಮ್ಮ ಕೆಲಸವನ್ನು ಜನರು ಮಾಡುತ್ತಿದ್ದಾರೆ. ಈಗ ಈ ವಿಚಾರ ನನ್ನ ಗಮನಕ್ಕೆ ಬಂದಿದೆ. ಒಂದು ಇಂಚು ಸರ್ಕಾರಿ ಭೂಮಿ ಬೇರೆಯವರ ಪಾಲಾಗಲು ನಾನು ಬಿಡುವುದಿಲ್ಲ. ಈ ಸಂಬಂಧ ಕ್ರಮ ಕೈಗೊಂಡು ನನಗೆ ಸಮಗ್ರ ವರದಿ ನೀಡಬೇಕು ಎಂದು ಸೂಚನೆ ನೀಡಿ, ಮುಂದಿನ ವಿಚಾರಣೆಯನ್ನು ಸೆಪ್ಟಂಬರ್ 25ಕ್ಕೆ ಮುಂದೂಡಿದರು.

ಮೈಸೂರಿನ ಹುಣಸೂರು ತಾಲೂಕು ದೊಡ್ಡಹುಣಸೂರಿನಲ್ಲಿ ಇಟ್ಟಿಗೆ ಕಾರ್ಖಾನೆಗೆ ವಿದ್ಯುತ್ ಸಂಪರ್ಕ ನೀಡಲು ಗ್ರಾಮ ಲೆಕ್ಕಿಗ ನಕಲಿ ಎನ್‌ಒಸಿ ನೀಡಿದ್ದಾರೆ ಎಂದು ಸಾಮಾಜಿಕ ಹೋರಾಟಗಾರ ಮಹೇಶ್ ಆರೋಪಿಸಿದರು. ಈ ಸಂಬಂಧ ಲೋಕಾಯುಕ್ತ ಪೊಲೀಸರು ತನಿಖೆ ನಡೆಸಿ ವರದಿ ನೀಡಬೇಕು ಎಂದು ನ್ಯಾ. ಫಣೀಂದ್ರ ತಾಕೀತು ಮಾಡಿದರು. ಸಾರ್ವಜನಿಕರು ಅಹವಾಲು ಸಲ್ಲಿಸಿದ ಬಹುತೇಕ ಪ್ರಕರಣಗಳಲ್ಲಿ ನ್ಯಾ. ಫಣೀಂದ್ರ ಅವರು ಕಾಲ ಮಿತಿಯಲ್ಲಿ ಸಮಸ್ಯೆ ಪರಿಹಾರ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ

ನಾಗಮೋಹನ್‌ದಾಸ್ ವರದಿಯಲ್ಲಿ ಗೊಂದಲ ಸೃಷ್ಟಿಸಲಾಗುತ್ತಿದೆ. ಮಾದಿಗ ಹೋರಾಟದ ಬಿಸಿ ಕಡಿಮೆ ಮಾಡಲು ಹೇಳಿಕೆಗಳನ್ನು ಕೊಡಲಾಗುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಹೋರಾಟಕ್ಕೆ ಡಾ.ಹೆಚ್.ಸಿ.ಮಹದೇವಪ್ಪ, ಕೆ.ಹೆಚ್.ಮುನಿಯಪ್ಪ ಮೊದಲಾದವರು ಅವಶ್ಯಕತೆ ಇಲ್ಲ. ಹೋರಾಟಕ್ಕೆ ಸಹಕರಿಸದಿರಿ ಎಂದು ಅವರು ಹೇಳಿಕೆ ಕೊಡುತ್ತಿದ್ದಾರೆ. ಒಳಮೀಸಲಾತಿ ಗೊಂದಲಕ್ಕೆ ತಾವೇ ಕಾರಣ ಎಂದು ಕಾಂಗ್ರೆಸ್ಸಿನವರು ಒಪ್ಪಿಕೊಂಡಿಲ್ಲ. ಒಳಮೀಸಲಾತಿ ಸಮಸ್ಯೆ ಪರಿಹಾರಕ್ಕೆ ಮುಂದಾಗಿಲ್ಲ ಎಂದು ಟೀಕಿಸಿದ್ದಾರೆ.

ನಾಳೆ ನಡೆಯುವ ಹೋರಾಟದಲ್ಲಿ ಎಲ್ಲಾ ಮಾದಿಗ ಬಂಧುಗಳು ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಬೇಕು. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ಹೋರಾಟದಲ್ಲಿ ಮಾದಿಗ ಸಮುದಾಯದ ಎಲ್ಲಾ ಉಪಜಾತಿಯವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಇದು ಸಮುದಾಯದ ಶಕ್ತಿ ಪ್ರದರ್ಶನದಂತಿರಲಿ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದು ಕೋರಿದ್ದಾರೆ.

ಮೈಸೂರಲ್ಲಿ ಶೀಘ್ರ ಫುಟ್‌ಪಾತ್, ರಸ್ತೆಬದಿ ವ್ಯಾಪಾರ ತೆರವು



ಶೇಖ್ ತನ್ವೀರ್ ಆಸಿಫ್

ಮೈಸೂರು, ಜು.31(ಪಿಎಂ)– ಮೈಸೂರು ನಗರದಲ್ಲಿ ಫುಟ್‌ಪಾತ್ ಹಾಗೂ ರಸ್ತೆ ಅತಿಕ್ರಮಿಸಿ ನಡೆಸುತ್ತಿರುವ ವ್ಯಾಪಾರ ವಹಿವಾಟನ್ನು 1 ಅಥವಾ 2 ವಾರಗಳಲ್ಲಿ ನಗರ ಪೊಲೀಸರ ಸಹಕಾರದೊಂದಿಗೆ ಮೈಸೂರು ಮಹಾನಗರ ಪಾಲಿಕೆ ತೆರವು ಗೊಳಿಸಲಿದೆ ಎಂದು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ತಿಳಿಸಿದರು.

ಕಳೆದ ಗುರುವಾರ ಸಾರಿಗೆ ಬಸ್ ಹರಿದು ಸ್ಕೂಟರ್ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ನಡೆಯಿತು. ಘಟನೆಗೆ ರಸ್ತೆಬದಿ, ಫುಟ್‌ಪಾತ್ ಆಕ್ರಮಿಸಿ ತಳ್ಳುಗಾಡಿಗಳಲ್ಲಿ ಮಾಡುತ್ತಿರುವ ವ್ಯಾಪಾರವೇ ಕಾರಣವೆಂಬ ಆರೋಪ ಕೇಳಿ ಬಂದಿತ್ತು. ನಗರದ ಸುಮಾರು ಕಡೆಗಳಲ್ಲಿ ರಸ್ತೆಬದಿ, ವೃತ್ತಗಳಲ್ಲಿ ಸಂಚಾರಕ್ಕೆ ಅಪಾಯ ಉಂಟಾಗುವ ರೀತಿಯಲ್ಲಿ ವ್ಯಾಪಾರ ನಡೆಯು ತ್ತಿದೆ. ಈ ವ್ಯಾಪಾರಸ್ಥರನ್ನು, ಇಂತಹ ಸ್ಥಳದಿಂದ ತೆರವು ಮಾಡಿ ಪರ್ಯಾಯ ವ್ಯವಸ್ಥೆ ಕಲ್ಪಿಸುತ್ತೀರಾ ಎಂಬುದಕ್ಕೆ ಅವರು ಪ್ರಕ್ರಿಯಿಸಿದರು. ಅಪಘಾತ ನಡೆದ ವಿವೇಕಾನಂದ ವೃತ್ತದಲ್ಲಿ ಫುಟ್‌ಪಾತ್ ಹಾಗೂ ರಸ್ತೆ ಅತಿಕ್ರಮಣವನ್ನು ವ್ಯಾಪಾರಿಗಳಿಂದ ತೆರವುಗೊಳಿಸಲಾಗಿದೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಹಾಗಾಗಿ ಯಾವುದೇ ಮುಲಾ ಜಿಲ್ಲದೇ ನಗರದ ವಿವಿಧೆಡೆ ಸಂಚಾರಕ್ಕೆ ಅಪಾಯಕಾರಿಯಾಗಿರುವ ಫುಟ್‌ಪಾತ್, ರಸ್ತೆ ಹಾಗೂ ವೃತ್ತಗಳಲ್ಲಿ ನಡೆಯುವ ವಿವಿಧ ರೀತಿಯ ವ್ಯಾಪಾರ ವಹಿವಾಟುಗಳನ್ನು ತೆರವು ಮಾಡಿಸಲಾಗುವುದು. ನಗರ ಪೊಲೀಸರ ಸಹಕಾರದೊಂದಿಗೆ ತೆರವು ಕಾರ್ಯಾಚರಣೆ ನಡೆಸಲಾಗುವುದು ಎಂದು ಹೇಳಿದರು.

ಮಹಿಳೆಯರಲ್ಲಿ ಆರಂಭಿಕ ಹಂತದಲ್ಲೇ ಕ್ಯಾನ್ಸರ್ ಪತ್ತೆಗೆ ಅಪೋಲೊ ಕ್ಯಾನ್ಸರ್ ಸೆಂಟರ್‌ನಲ್ಲಿ ಎಂಡ್–ಓ–ಚೆಕ್ ವ್ಯವಸ್ಥೆ



ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕನ್ಸಲ್ಟೆಂಟ್ ಮೆಡಿಕಲ್ ಆಂಕೊಲಾಜಿಸ್ಟ್ ಡಾ.ನವೀನ್ ಜಯರಾಂ ಮಾತನಾಡಿದರು.

ಮೈಸೂರು, ಜು.31(ಜಿಎ)– ಮಹಿಳೆಯರಲ್ಲಿ ಆರಂಭಿಕವಾಗಿ ಕ್ಯಾನ್ಸರ್ ಪತ್ತೆ ಹಚ್ಚಿ ತಡೆಗಟ್ಟಲು ಅಪೋಲೊ ಕ್ಯಾನ್ಸರ್ ಸೆಂಟರ್ಸ್ (ಎಸಿಸಿ)ನಲ್ಲಿ ಎಂಡ್–ಓ–ಚೆಕ್ ಅನ್ನು ಪ್ರಾರಂಭಿಸಲಾಗಿದೆ ಎಂದು ಆಸ್ಪತ್ರೆಯ ಕನ್ಸಲ್ಟೆಂಟ್ ಸರ್ಜಿಕಲ್ ಆಂಕೊಲಾಜಿಸ್ಟ್ ಡಾ.ವೈ.ರಮ್ಯಾ ತಿಳಿಸಿದರು.


ಆಸ್ಪತ್ರೆ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದು 45 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಮಹಿಳೆಯರನ್ನು ಗುರಿಯಾಗಿಟ್ಟುಕೊಂಡು ಸಮಗ್ರವಾಗಿ ಆರಂಭಿಕವಾಗಿಯೇ ಕ್ಯಾನ್ಸರ್ ಪತ್ತೆ ಹಚ್ಚಲಾಗುವುದು. ಸ್ತ್ರೀರೋಗ ಕ್ಯಾನ್ಸರ್‌ಗಳಾದ ಎಂಡೊಮೆಟ್ರಿಯಲ್ ಮತ್ತು ಅಂಡಾಶಯವನ್ನು ಆರಂಭಿಕ ಹಂತದಲ್ಲಿ ಪತ್ತೆ ಹಚ್ಚಲು ಎಂಡ್–ಓ–ಚೆಕ್ ಅನ್ನು ವಿನ್ಯಾಸಗೊಳಿಸಲಾಗಿದೆ ಎಂದರು.

ನಿಶ್ಶಬ್ಧ ಕೊಲೆಗಾರ ಎಂದು ಕರೆಯಲ್ಪಡುವ ಅಂಡಾಶಯದ ಕ್ಯಾನ್ಸರ್ 55ರಿಂದ 64 ವರ್ಷ ವಯಸ್ಸಿನ ಮಹಿಳೆಯರ ಮೇಲೆ ಪರಿಣಾಮ ಬೀರುತ್ತದೆ. ಸರಾಸರಿ ರೋಗನಿರ್ಣಯವು 63 ವರ್ಷ ವಯಸ್ಸಿನಲ್ಲಿ ಸಂಭವಿಸುತ್ತದೆ. ಆರಂಭದಲ್ಲಿ ಪತ್ತೆಯಾದಾಗ, ಐದು ವರ್ಷಗಳ ಕಾಲ ಬದುಕುಳಿಯುವಿಕೆಯ ಪ್ರಮಾಣ ಕೇವಲ ಶೇ.10ರಷ್ಟು ಇರುತ್ತದೆ ಎಂದರು.

> ಅಂಡಾಶಯದ ಕ್ಯಾನ್ಸರ್ ಹಾಗೂ ಎಂಡೊಮೆಟ್ರಿಯಲ್ ಕ್ಯಾನ್ಸರ್ ಅನ್ನು ಆರಂಭಿಕ ಹಂತದಲ್ಲಿಯೇ ಗುಣಪಡಿಸಬಹುದು. ಅಲ್ಲದೇ, ಆರಂಭಿಕ ಹಂತದಲ್ಲಿ ಚಿಕಿತ್ಸೆಯು ಸರಳವಾಗಿರುತ್ತದೆ. ಅಂಡಾಶಯ, ಗರ್ಭಾಶಯದ ಕ್ಯಾನ್ಸರ್‌ಗಳನ್ನು ಪತ್ತೆಹಚ್ಚಲು ಯಾವುದೇ ಶಿಫಾರಸು ಮಾಡಲಾದ ಸ್ಕ್ರೀನಿಂಗ್ ವಿಧಾನಗಳಿಲ್ಲ. 50 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರಿಗೆ ವರ್ಷಕ್ಕೊಮ್ಮೆ ಸರಳ ಕಿಬ್ಬೊಟ್ಟೆಯ ಮತ್ತು ಟ್ರಾನ್ಸ್ವಾಜಿನಲ್ ಸ್ಕ್ಯಾನ್‌ಗಳ ಮೂಲಕ ಈ ಎರಡು ಕ್ಯಾನ್ಸರ್‌ಗಳನ್ನು ಮೊದಲೇ ಪತ್ತೆಹಚ್ಚಲು ಅಪೋಲೊ ಎಂಡ್ ಒ ಚೆಕ್ ಆರಂಭಿಸಲಾಗಿದೆ. –ಡಾ.ವೈ.ರಮ್ಯಾ

ಆಸ್ಪತ್ರೆಯ ಸ್ತ್ರೀರೋಗ ಶಾಸ್ತ್ರದ ಹಿರಿಯ ಸಲಹೆಗಾರ್ತಿ ಡಾ.ಎಲ್.ವಿ.ವನಿತಾ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಕನ್ಸಲ್ಟೆಂಟ್ ಮೆಡಿಕಲ್ ಆಂಕೊಲಾಜಿಸ್ಟ್ ಡಾ.ನವೀನ್ ಜಯರಾಂ, ಡಾ.ರಂಜಿತ ಉಪಸ್ಥಿತರಿದ್ದರು.

ಇಂದು ವಿಶೇಷ ಸ್ವಾತಿ ಪೂಜೆ



ಮೈಸೂರು,ಜು.31–ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಆ.1ರ ಶುಕ್ರವಾರ ಸ್ವಾತಿ ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾ ಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಮುಖ್ಯಸ್ಥ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ಮಾಹಿತಿಗೆ ಮೊಬೈಲ್ 9342188323, 7598832271 ಸಂಪರ್ಕಿಸಬಹುದು.

ಆರೋಗ್ಯ ತಪಾಸಣೆ ಶಿಬಿರ ಉದ್ಘಾಟನೆ...



ಮೈಸೂರು ತಾಲೂಕು ಡಿಎಂಜಿ ಹಳ್ಳಿ ಗ್ರಾಮ ಪಂಚಾಯಿತಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ, ಬೀರಿಹುಂಡಿ ಸಹಯೋಗದೊಂದಿಗೆ ಏರ್ಪಡಿಸಿದ್ದ ವಿಶೇಷಚೇತನರ ಆರೋಗ್ಯ ತಪಾಸಣೆ ಕಾರ್ಯಕ್ರಮವನ್ನು ಮೈಸೂರು ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಉದ್ಘಾಟಿಸಿದರು. ಈ ವೇಳೆ ಗ್ರಾಪಂ ಅಧ್ಯಕ್ಷೆ ವನಿತಾ ಮಂಜು, ಪಿಡಿಓ ರುಕ್ಮಾಂಗದ, ನೋಡಲ್ ಅಧಿಕಾರಿ ಲಿಂಗರಾಜು, ಉಪಾಧ್ಯಕ್ಷೆ ಮಂಗಳಮ್ಮ, ಸುಜಾತ, ಟಿ.ಕೃಷ್ಣಪ್ಪ, ಶಂಕರ್, ನಂದರಾಜ, ಭಗವಂತ ಪ್ರಭು, ಶಿವಕುಮಾರ್, ಚಿಕ್ಕಮ್ಮ, ಪ್ರಸನ್ನ, ರಾಜಣ್ಣ, ಶಿವಕುಮಾರ್, ಕೆ.ಪುಟ್ಟಸ್ವಾಮಿ, ವಿರೂಪಾಕ್ಷ, ವೈದ್ಯಾಧಿಕಾರಿ ಪವಿತ್ರ, ದಿವ್ಯಶ್ರೀ, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಬೀಳ್ಕೊಡುಗೆ...



ಭಾರತೀಯ ಜೀವ ವಿಮಾ ನಿಗಮದ ಶಾರದಾದೇವಿನಗರ ಶಾಖೆಯ ಉದ್ಯೋಗಿ ನಾಗಮ್ಮ 34 ವರ್ಷಗಳ ಸೇವೆ ಸಲ್ಲಿಸಿ, ಗುರುವಾರ ಸೇವೆಯಿಂದ ನಿವೃತ್ತಿ ಹೊಂದಿದರು. ಅವರನ್ನು ಎಲ್.ಐ.ಸಿ. ನಿವೃತ್ತರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಪುಟ್ಟಸ್ವಾಮಿ, ಸಹ ಕಾರ್ಯದರ್ಶಿ ಶಂಕರಪ್ಪ, ಬೂಕನಕೆರೆ ವಿಜೇಂದ್ರ ಸನ್ಮಾನಿಸಿ, ಬೀಳ್ಕೊಟ್ಟರು.

ಪ್ರಜಾಪ್ರಭುತ್ವದಲ್ಲಿ ನಾಗರಿಕ ಸಮಾಜ ನಿರಂತರವಾಗಿ ವಿರೋಧ ಪಕ್ಷದಂತೆ ಕೆಲಸ ಮಾಡಬೇಕು

● ಬಹುಭಾಷಾ ನಟ ಪ್ರಕಾಶ್ ರಾಜ್ ಅಭಿಮತ ● ಹಿರಿಯ ಪತ್ರಕರ್ತ ಡಾ.ಎಸ್.ನಾಗಣ್ಣರಿಗೆ ಲಂಕೇಶ್ ಮಾಧ್ಯಮ ಪ್ರಶಸ್ತಿ ಪ್ರದಾನ


ಮೈಸೂರಿನ ಶ್ರೀ ಹೊಸಮಠದ ಶ್ರೀ ನಟರಾಜ ಸಭಾ ಭವನದಲ್ಲಿ ಗುರುವಾರ ಹಿರಿಯ ಪತ್ರಕರ್ತ ಡಾ.ಎಸ್.ನಾಗಣ್ಣ ಅವರಿಗೆ 'ಲಂಕೇಶ್ ಮಾಧ್ಯಮ ಪ್ರಶಸ್ತಿ'ಯನ್ನು ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ಪ್ರದಾನ ಮಾಡಿದರು. ಬಹುಭಾಷ ನಟ ಪ್ರಕಾಶ್ ರಾಜ್ ಸೇರಿದಂತೆ ಇನ್ನಿತರ ಗಣರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಜು.31(ಪಿಎಂ)– ಪ್ರಜಾಪ್ರಭುತ್ವದಲ್ಲಿ ರಾಜಕಾರಣ ಮಾಡಬೇಕಿರುವುದು ರಾಜಕಾರಣಿಗಳಲ್ಲ, ಅವರು ಪ್ರತಿನಿಧಿಗಳಾಗಿ ಕೆಲಸ ಮಾಡಬೇಕಷ್ಟೇ. ನಿಜಕ್ಕೂ ರಾಜಕಾರಣ ಮಾಡಬೇಕಿರುವುದು ನಾಗರಿಕ ಸಮಾಜ ಎಂದು ಬಹುಭಾಷ ನಟ ಪ್ರಕಾಶ್ ರಾಜ್ ಅಭಿಪ್ರಾಯಪಟ್ಟರು.

ಮೈಸೂರಿನ ಶ್ರೀ ಹೊಸಮಠದ ಶ್ರೀ ನಟರಾಜ ಸಭಾ ಭವನದಲ್ಲಿ ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲೂಕು ಸಿರಿಗೇರಿಯ ಅನ್ನಪೂರ್ಣ ಪ್ರಕಾಶನದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ 'ಲಂಕೇಶ್ ಮಾಧ್ಯಮ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಪಿ.ಲಂಕೇಶ್ ಕುರಿತು ಅವರು ಮಾತನಾಡಿದರು.

ಪ್ರತಿಯೊಬ್ಬ ನಾಗರಿಕ, ಮಾಧ್ಯಮ, ಸಾಹಿತಿಗಳು ರಾಜಕಾರಣ ಮಾಡಬೇಕೇ ಹೊರತು ರಾಜಕಾರಣಿಗಳಲ್ಲ. ಪ್ರಜೆಗಳು ನಿರಂತರವಾದ ವಿರೋಧ ಪಕ್ಷವಾಗಿರಬೇಕೆಂದು ಮೇಸ್ಟ್ರು (ಪಿ.ಲಂಕೇಶ್) ನನಗೆ ಹೇಳುತ್ತಿದ್ದರು ಎಂದರು.

4 ದಶಕಗಳ ಹಿಂದೆ ಮೇಸ್ಟ್ರು ಲಂಕೇಶ್ ಪತ್ರಿಕೆ ಆರಂಭಿಸಿ ಜಾಣ ಜಾಣೆಯರ ವೇದಿಕೆ ಕಲ್ಪಿಸದೇ ಇದ್ದರೆ ಇಂದು ಭಾನು ಮುಷ್ತಾಕ್ ಅವರ 'ಎದೆಯ ಹಣತೆ' ಬುಕರ್ ಪ್ರಶಸ್ತಿ ಪಡೆಯುವಂತೆ ಆಗುತ್ತಿರಲಿಲ್ಲ. ತಾನಿದ್ದ ಕಾಲಕ್ಕೆ ಸೀಮಿತವಾಗಿ ಮೇಸ್ಟ್ರು ಕಾರ್ಯಗಳನ್ನು ಮಾಡಲಿಲ್ಲ. ಮುಂದಿನ ತಲೆಮಾರಿನ ಬಗ್ಗೆ ದೃಷ್ಟಿ ಹೊಂದಿದ್ದರು. ಸಮಾಜದಲ್ಲಿ ವೈಜ್ಞಾನಿಕ ಆಲೋಚನೆ ಬೆಳೆಸಬೇಕೆಂಬ ಉದ್ದೇಶದಲ್ಲಿ ಪತ್ರಿಕೆ ತರುತ್ತಿದ್ದರು. ನಿರ್ಭಿಡೆಯಿಂದ ಮೇಸ್ಟ್ರು ಬರೆಯುತ್ತಿದ್ದರು. ಆ ಮೂಲಕ ಅವರು ವಿರೋಧ ಪಕ್ಷದ ರೀತಿ ಕೆಲಸ ಮಾಡಿದರು ಎಂದು ತಿಳಿಸಿದರು.

ಮೇಸ್ಟ್ರು ನಿರಂತರವಾಗಿ ಜನಪರ, ಸಮಾನತೆಯ ಬಗ್ಗೆ ಯೋಚನೆ ಮಾಡುತ್ತಿದ್ದರು. ತಮ್ಮ ಪತ್ರಿಕೆಯ ಮೂಲಕ ನಿರಂತರವಾಗಿ ಮನಸ್ಸಿನ ಕೃಷಿ ಮಾಡಿದರು. ಅವರ ಗ್ರಹಿಕೆ, ತೀಕ್ಷ್ಣತೆ ಅದ್ಭುತವಾಗಿತ್ತು. ನಮ್ಮ ಬದುಕು ಹಸನಾಗಲು ನಾವು ಕೆಲಸ ಮಾಡಬೇಕೆಂದು ಹೇಳುತ್ತಿದ್ದರು. ಇದು ನನ್ನಂತಹ ಎಷ್ಟೋ ಜನರಿಗೆ ಸ್ಫೂರ್ತಿಯಾಗಿದೆ. ನಿಂತ ನೆಲದ ಮಣ್ಣಿಗೆ ಕಿವಿಗೊಟ್ಟು ಕೇಳಿಸಿಕೊಳ್ಳಬೇಕು. ದೀನರು, ದಲಿತರು, ಬಡವರು, ರೈತರು ಸ್ಪಂದಿಸಬೇಕು ಎಂಬುದು ಅವರ ನಿಲುವಾಗಿತ್ತು. ಅವರಿಂದ ಕಲಿತ ಕಾರಣಕ್ಕೆ ನಮ್ಮಂತವರು ನಿಂತ ಮಾತನಾಡುತ್ತಿದ್ದೇವೆ ಎಂದು ಹೇಳಿದರು.

ಮಹಾಪ್ರಭುಗಳ ಇಡಿಯವರು ಕರೆದಿದ್ದರು!: ಕ್ಷಮೆ ಇರಲಿ ಈ ಕಾರ್ಯಕ್ರಮ ನೆನ್ನೆ ನಡೆಯಬೇಕಿತ್ತು. ಆದರೆ ನನ್ನನ್ನು ಮಾವನ ಮನೆಯವರು ಕರೆಸಿಕೊಂಡಿದ್ದರು. ಮಾವನ ಮನೆಯವರು ಅಂದ್ರೆ ನಮ್ಮ ಮಹಾಪ್ರಭುಗಳ ಇಡಿಯವರು ಎಂದು ಪ್ರಕಾಶ್ ರಾಜ್ ವ್ಯಂಗ್ಯವಾಡಿದರು.

ಮೇಸ್ಟ್ರು ಹೆಸರಿನ ಈ ಕಾರ್ಯಕ್ರಮಕ್ಕೆ ನಾನು ಇರಬೇಕು. ಒಂದು ದಿನ ಮುಂದಕ್ಕೆ ಹಾಕಲು ಆಗುತ್ತಾ ಎಂದು ಆಯೋಜಕರಲ್ಲಿ ಮನವಿ ಮಾಡಿದ್ದೆ. ಆಗುತ್ತೆ ಅಂದ್ರು ಅದಕ್ಕಾಗಿ ಅಲ್ಲಿ ಹೋಗಿ ಬಂದೆ. ಇಲ್ಲದಿದ್ದರೆ ಅವರಿಗೆ ಇನ್ನೊಂದು ದಿನ ಬರುತ್ತೇನೆ ಎಂದು ಹೇಳುತ್ತಿದ್ದೆ ಎಂದು ತಿಳಿಸಿದರು.

ಇಡಿಯವರು ನನ್ನ ಕುಟುಂಬ ಸದಸ್ಯರ ಬಗ್ಗೆ ಕೇಳುತ್ತಿದ್ದರು. ಆಗ ಡೀ ಟೈಮ್ ವೇಸ್ಟ್ ಮಾಡಬೇಡಿ. ಕಮ್ ಟು ದ ಪಾಯಿಂಟ್ ಎಂದೆ. ನಿಮಗೆ ಈ ಕೋಪ ಎಲ್ಲಿಂದ ಬಂತು ಅಂದ್ರು ನಾನು ನಮ್ಮ ಮೇಸ್ಟ್ರು ಅವರಿಂದ ಎಂದೆ. ಅದಕ್ಕವರು ವಾಟ್ (ಏನು) ಅಂದ್ರು, ಆಗ ನಾನು ನಿಮಗೆ ಅರ್ಥವಾಗಲ್ಲ ಬಿಡಿ ಎಂದೆ. ನನ್ನ ಕೋಪ, ಆತಂಕ ಇರುಹುದು ಎಲ್ಲದಕ್ಕೂ ಮೂಲ ಕಾರಣ ಅವರೇ (ಮೇಸ್ಟ್ರು–ಲಂಕೇಶ್). ಜೊತೆಗೆ ಪೂರ್ಣಚಂದ್ರ ತೇಜಸ್ವಿ ಅಂತಹವರು. ಲಂಕೇಶ್ ಅವರ ಕುರಿತು ಮಾತನಾಡುವಷ್ಟು ನುರಿತ ನಾನಲ್ಲ. ಪೂರ್ಣಚಂದ್ರ ತೇಜಸ್ವಿ ಮತ್ತು ಲಂಕೇಶ್ ಅವರ ನಡುವಿನ ಪತ್ರ ವ್ಯವಹಾರ ಕುರಿತು ಹೊರತಂದಿರುವ ಪುಸ್ತಕ ತಂದಿದ್ದೇನೆ ಎಂದು ಪುಸ್ತಕದ ಕೆಲ ಅಂಶಗಳನ್ನು ವಾಚಿಸಿದರು.

ಇದಕ್ಕೂ ಮುನ್ನ ತುಮಕೂರಿನ 'ಪ್ರಜಾಪ್ರಗತಿ' ದಿನಪತ್ರಿಕೆ ಸಂಪಾದಕ ಡಾ.ಎಸ್.ನಾಗಣ್ಣ ಅವರಿಗೆ ಲಂಕೇಶ್ ಮಾಧ್ಯಮ ಪ್ರಶಸ್ತಿಯನ್ನು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಪ್ರದಾನ ಮಾಡಿದರು. ನಿರ್ದೇಶಕಿ ಕವಿತಾ ಲಂಕೇಶ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಲೇಖಕ–ಪ್ರಕಾಶಕ ಸಿರಿಗೇರಿ ಯರಿಸ್ವಾಮಿ ಮತ್ತಿತರರು ಹಾಜರಿದ್ದರು.

ಮಾಧ್ಯಮದ ಲೋಕದ ಒಂದು ಮಾದರಿ ಪಿ.ಲಂಕೇಶ್

ರಾಮಕೃಷ್ಣ ಹೆಗಡೆ ಸೇರಿದಂತೆ ಹಿರಿಯ ನಾಯಕರು ಸಂಪರ್ಕದಲ್ಲಿ ಇದ್ದರೂ ಪಿ.ಲಂಕೇಶ್ ಅವರು ಎಂದೂ ವಿಧಾನಸೌಧವನ್ನು ತಮ್ಮ ಸ್ವಾರ್ಥಕ್ಕೆ ಬಳಸಲಿಲ್ಲ. ಲಂಕೇಶ್ ಮಾಧ್ಯಮದ ಲೋಕದ ಒಂದು ಮಾದರಿ ವ್ಯಕ್ತಿತ್ವ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದು ಶ್ಲಾಘನೀಯ. ನನ್ನನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವ ಸ್ಥಾನದಿಂದ ಅರಣ್ಯ ಸಚಿವನ್ನಾಗಿ ಮಾಡಿದ್ದ ಸಂದರ್ಭದಲ್ಲಿ 'ಕನ್ನಡದಿಂದ ಕಾಡಿಗೆ' ಎಂದು ನನ್ನ ಕುರಿತು ಲೇಖನ ಬರೆದಿದ್ದರು.
-ಎ.ಹೆಚ್.ವಿಶ್ವನಾಥ್, ಎಂಎಲ್‌ಸಿ

ಡ್ರಗ್ಸ್ ತಯಾರಿಕಾ ಫ್ಯಾಕ್ಟ್ರಿ ಪತ್ತೆ ಬಳಿಕ ಪೊಲೀಸರ ವ್ಯಾಪಕ ಕಾರ್ಯಾಚರಣೆ; ವಿವಿಧೆಡೆ ಗಾಂಜಾ ಇನ್ನಿತರ ಪದಾರ್ಥ ಪತ್ತೆ


ನಜರ್‌ಬಾದ್ ಠಾಣೆ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ಪೊಲೀಸರು ಕಾರ್ಯಾಚರಣೆ ನಡೆಸಿದರು.

ಮೈಸೂರು, ಜು.31– ಮೈಸೂರು ರಿಂಗ್ ರಸ್ತೆಯಲ್ಲಿ ಡ್ರಗ್ಸ್ ತಯಾರಿಕೆ ಘಟಕ ಪತ್ತೆಯಾದ ಹಿನ್ನೆಲೆಯಲ್ಲಿ ನಗರದೆಲ್ಲೆಡೆ ಪೊಲೀಸರು ವ್ಯಾಪಕ ಕಾರ್ಯಾಚರಣೆ ಮುಂದುವರೆಸಿದ್ದು, ನಜರ್‌ಬಾದ್ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಡಿಸಿಪಿಗಳಾದ ಆರ್.ಎನ್.ಬಿಂಧುಮಣಿ ಹಾಗೂ ಸುಂದರ್‌ರಾಜ್, ಎಸಿಪಿ ಸ್ನೇಹರಾಜ್, ನಜರ್‌ಬಾದ್ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ ಹಾಗೂ ಸಿಬ್ಬಂದಿ, ಗುರುವಾರ ರಾತ್ರಿ ವಾಹನ ತಪಾಸಣೆ ಜೊತೆಗೆ ರಾಘವೇಂದ್ರನಗರದ ಇಡಬ್ಲ್ಯೂಎಸ್ ಕ್ವಾಟ್ರರ್ಸ್ ಪ್ರದೇಶದ ಹಲವು ಮನೆಗಳಲ್ಲಿ ಪರಿಶೀಲನೆ ನಡೆಸಿದ್ದಾರೆ.

ಮನೆಯೊಂದರಲ್ಲಿ ಸ್ವಲ್ಪ ಪ್ರಮಾಣದ ಗಾಂಜಾ, ಹತ್ತಾರು ಬಾಕ್ಸ್‌ಗಳಲ್ಲಿ ಪಂಕ್ಚರ್‌ಗೆ ಬಳಸುವ ಸಲ್ಯೂಷನ್(ರಾಸಾಯನಿಕ ವಲ್ಕನೈಸಿಂಗ್ ದ್ರವ) ಪತ್ತೆಯಾಗಿದೆ. ಅಲ್ಲದೆ ಒಂದಿಬ್ಬರು ಮಾತ್ರ ವಾಸಿಸಬಹುದಾದ ಮನೆಯಲ್ಲಿ ನಾಲ್ಕೈದು ಮೊಬೈಲ್, ಏಳೆಂಟು ಆಧಾರ್, ಪಾನ್ ಹಾಗೂ ಎಟಿಎಂ ಕಾರ್ಡ್‌ಗಳು ಪತ್ತೆಯಾಗಿವೆ ಎಂದು ತಿಳಿದು ಬಂದಿದೆ. ಶ್ವಾನದಳದ ಮೂಲಕ ಮಾದಕ ವಸ್ತುಗಳ ಅಡಗು ತಾಣಗಳನ್ನು ಪತ್ತೆ ಹಚ್ಚುವ ಕಾರ್ಯವನ್ನು ಮುಂದುವರೆಸಲಾಗಿದೆ.

ಕಾರ್ಯಾಚರಣೆ ವೇಳೆ ಗಾಂಜಾ, ಸಲ್ಯೂಷನ್ ಇನ್ನಿತರ ಮಾದಕ ವಸ್ತು ಸೇವನೆ ಮಾಡಿದ್ದ ಹಲವರನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಲಾಗಿದೆ. ಚಿಕ್ಕವಯಸ್ಸಿನ ಹುಡುಗರು ಹೆಚ್ಚಾಗಿ ಮಾದಕ ವಸ್ತುಗಳಿಗೆ ಬಲಿಯಾಗಿದ್ದಾರೆ ಎಂದು ಸಾರ್ವಜನಿಕರು ದೂರಿದ್ದು, ಈ ನಿಟ್ಟಿನಲ್ಲಿ ಮೆಡಿಕಲ್ ಶಾಪ್‌ಗಳು, ಪಂಕ್ಚರ್ ಶಾಪ್‌ಗಳು, ಆಟೋ ಮೊಬೈಲ್ಸ್ ಮಳಿಗೆಗಳು, ಟೀ ಅಂಗಡಿ, ಬಾರ್ ಅಂಡ್ ರೆಸ್ಟೋರೆಂಟ್, ವೈನ್ಸ್ ಶಾಪ್ ಹೀಗೆ ಎಲ್ಲೆಡೆ ಜಾಲಾಡುತ್ತಿದ್ದಾರೆ. ಜೊತೆಗೆ ಗಾಂಜಾ ಸಂಗ್ರಹಿಸಬಹುದಾದ ಅನುಮಾನಾಸ್ಪದ ಸ್ಥಳಗಳಲ್ಲಿ ಇಂಚಿಂಚೂ ಶೋಧಿಸುತ್ತಿದ್ದಾರೆ.

> ನಗರದ ವಿವಿಧೆಡೆ ಗುರುವಾರ ನಡೆಸಿದ ಕಾರ್ಯಾಚರಣೆಯಲ್ಲಿ ಮಾದಕ ವಸ್ತು ಸೇವನೆ ಮಾಡಿದ್ದ 25 ಮಂದಿ ವಿರುದ್ಧ ಪ್ರಕರಣ ದಾಖಲಿಸಿ, 157 ಮಂದಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ ಗಾಂಜಾ ಸಂಗ್ರಹಿಸಿದ್ದ ಆರೋಪದಡಿ ಮೂರು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಹಳೇ ಆರೋಪಿಗಳ 6 ಮನೆಗಳ ಪರಿಶೀಲನೆ ನಡೆಸಿ, 975 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಸುಮಾರು 75 ಬೈಕ್‌ಗಳ ಮೂಲಕ ವ್ಯಾಪಕ ಕಾರ್ಯಾಚರಣೆ ನಡೆಸಲಾಗಿದ್ದು, ಪಾರ್ಕ್, ಟೀ ಅಂಗಡಿ ಹಾಗೂ ಪೆಡ್ಲರ್‌ಗಳಿರುವ ಪ್ರದೇಶದಲ್ಲಿ ಹೆಚ್ಚಿನ ನಿಗಾ ವಹಿಸಲಾಗಿದೆ.
> -ಸೀಮಾ ಲಾಟ್ಕರ್, ನಗರ ಪೊಲೀಸ್ ಆಯುಕ್ತೆ

ನಿವೃತ್ತ ಡಿವೈಎಸ್ಪಿ ಎ.ಕರೀಂ ರಾವ್‌ತರ್‌ಗೆ ಆತ್ಮೀಯ ಬೀಳ್ಕೊಡುಗೆ



ಸೇವೆಯಿಂದ ನಿವೃತ್ತರಾದ ಡಿವೈಎಸ್‌ಪಿ ಎ.ಕರೀಂ ರಾವ್‌ತರ್ ಅವರಿಗೆ ಮೈಸೂರು ಗ್ರಾಮಾಂತರ ಉಪವಿಭಾಗದ ವತಿಯಿಂದ ಬಿಳ್ಕೊಡುಗೆ ನೀಡಲಾಯಿತು.

ಮೈಸೂರು, ಜು.31(ಎಂಕೆ)– ಸೇವೆಯಿಂದ ನಿವೃತ್ತರಾದ ಡಿವೈಎಸ್‌ಪಿ ಎ.ಕರೀಂ ರಾವ್‌ತರ್ ಅವರಿಗೆ ಮೈಸೂರು ಗ್ರಾಮಾಂತರ ಉಪವಿಭಾಗದ ವತಿಯಿಂದ ಆತ್ಮೀಯ ಬೀಳ್ಕೊಡುಗೆ ನೀಡಲಾಯಿತು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸಿಸಿಬಿ ಎಸಿಪಿ ಮಹಮ್ಮದ್ ಶರೀಫ್ ರಾವುತ್, ಮೈಸೂರು ದಕ್ಷಿಣ ಪೊಲೀಸ್ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ ಇನ್ಸ್‌ಪೆಕ್ಟರ್‌ಗಳಾದ ಶೇಖರ್, ಎ.ಎಸ್.ಶಶಿಕುಮಾರ್, ಎಸ್.ಶಿವಪ್ರಕಾಶ್ ಸೇರಿದಂತೆ ಸಹೋದ್ಯೋಗಿಗಳು, ಇಲಾಖೆ ಸಿಬ್ಬಂದಿ, ಅಭಿಮಾನಿಗಳು ಅಭಿನಂದಿಸಿ ಆತ್ಮೀಯ ಬೀಳ್ಕೊಡುಗೆ ನೀಡಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಕರೀಂ ರಾವ್‌ತರ್, ಪೊಲೀಸ್ ವೃತ್ತಿಯನ್ನು ಮಡಿಕೇರಿಯಿಂದ ಆರಂಭಿಸಿ, ಮೈಸೂರು ಹಾಗೂ ಬೆಂಗಳೂರಿನಲ್ಲಿ ಇಲಾಖೆಯ ಎಲ್ಲಾ ವಿಭಾಗಗಳಲ್ಲಿಯೂ ಕರ್ತವ್ಯ ನಿರ್ವಹಿಸಿದ್ದೇನೆ ಎಂದರು.

ಅದರಲ್ಲೂ ಮೈಸೂರು ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸಲು ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟ, ಮೈಸೂರಿನ ಜನತೆ ಸಹಕಾರದಿಂದ ನನ್ನ ವೃತ್ತಿಯನ್ನು ತೃಪ್ತಿಕರವಾಗಿ ನಡೆಸಿದ್ದೇನೆ. ನಮ್ಮ ಕುಟುಂಬದ ಬಹುತೇಕ ಎಲ್ಲರೂ ಖಾಕಿ ಬಟ್ಟೆ ತೊಟ್ಟು ಸಾರ್ವಜನಿಕರ ಸೇವೆ ಮಾಡಿದ್ದೇವೆ. ಸಾಧ್ಯವಾದರೆ ಮುಂದೆಯೂ ಎಲ್ಲರ ಜೊತೆಗೆ ಇರುತ್ತೇನೆ ಎಂದು ಸ್ಮರಿಸಿದರು.

ಕೊಡಗು ಮಾಡೆಲ್ ಶಾಲೆಯಲ್ಲಿ ಕೆಬಿಜಿಯವರಿಗೆ ನುಡಿ ನಮನ


ಶ್ರೀ ಕಾವೇರಿ ಕೊಡವ ಅಸೋಸಿಯೇಷನ್, ಪೂರ್ವ ಮತ್ತು ಕೊಡಗು ಮಾಡೆಲ್ ಶಾಲೆಯ ವತಿಯಿಂದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರಿಗೆ ನುಡಿ ನಮನ ಸಲ್ಲಿಸಲಾಯಿತು.

ಮೈಸೂರು, ಜು. 31– ಮೈಸೂರಿನ ಶ್ರೀ ಕಾವೇರಿ ಕೊಡವ ಅಸೋಸಿಯೇಷನ್, ಪೂರ್ವ ಮತ್ತು ಕೊಡಗು ಮಾಡೆಲ್ ಶಾಲೆಯ ವತಿಯಿಂದ ಶಾಲೆಯ ಚೀತಮ್ಮ ಸಭಾಂಗಣದಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ದಿವಂಗತ ಕೆ.ಬಿ.ಗಣಪತಿ ಅವರಿಗೆ ನುಡಿ ನಮನ ಸಲ್ಲಿಸಲಾಯಿತು.

ಈ ವೇಳೆ ಶಾಲೆ ಅಧ್ಯಕ್ಷ ಕೆ.ಎಂ. ಬೆಳ್ಳಿಯಪ್ಪ ಮಾತನಾಡಿ, ಕೆಬಿಜಿಯವರ ವ್ಯಕ್ತಿ ಪರಿಚಯ ಹಾಗೂ ವೃತ್ತಿ ಜೀವನದಲ್ಲಿ ಅವರ ಸಾಧನೆ, ಪತ್ರಿಕಾ ರಂಗದಲ್ಲಿ ಅವರು ಮೂಡಿಸಿದ ಛಾಪು, ದಕ್ಷಿಣ ಕರ್ನಾಟಕದಲ್ಲಿ ಮನೆ ಮಾತಾಗಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳು ಜನಜನಿತವಾಗಿರುವುದನ್ನು ವಿವರಿಸಿದರು.

ಕೆಬಿಜಿಯವರ ಜನಪ್ರಿಯ ಅಂಕಣ 'ಭೂಮಂತ್ರ' ಮತ್ತು 'ಅಬ್ರಕಡಬ್ರ' ಪ್ರಖ್ಯಾತಿಯಾಗಿದ್ದವು. ನಮ್ಮ ಸಂಘ ಮತ್ತು ಕೊಡಗು ಮಾಡೆಲ್ ಶಾಲೆಗೆ ಆಧಾರಸ್ತಂಭ, ಮಾರ್ಗದರ್ಶಕ, ಪೋಷಕ, ಹಿತೈಷಿ ಹಾಗೂ ದಾನಿಗಳಾಗಿ ಎರಡೂ ಸಂಸ್ಥೆಗಳ ಏಳಿಗೆಗೆ ಆರಂಭದಿಂದಲೂ ತಮ್ಮ ಅಮೂಲ್ಯ ಸಮಯವನ್ನು ಮೀಸಲಿಟ್ಟು, ಶಾಲೆಯ ಅಭಿವೃದ್ಧಿಗೆ ಆರ್ಥಿಕವಾಗಿ, ರಾಜಕೀಯವಾಗಿ ಶ್ರಮಿಸಿದರು. ಇವರ ಈ ಸೇವೆಯನ್ನು ಮನಗಂಡು ಅವರ ಆತ್ಮಕ್ಕೆ ಶಾಂತಿಯನ್ನು ಮತ್ತು ಅವರ ಕುಟುಂಬಸ್ಥರಿಗೆ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಆ ಭಗವಂತನು ದಯಪಾಲಿಸಲಿ ಎಂದು ಪ್ರಾರ್ಥಿಸಿದರು. ಇದೇ ವೇಳೆ ಎರಡು ನಿಮಿಷ ಮೌನ ಆಚರಿಸಲಾಯಿತು. ನಂತರ ಕೆಬಿಜಿಯವರ ಭಾವಚಿತ್ರಕ್ಕೆ ಪುಷ್ಪಾಂಜಲಿಯನ್ನು ಸಲ್ಲಿಸಲಾಯಿತು.

ಸಂಘದ ಹಿರಿಯ ಸದಸ್ಯ ಕಾಕಮಾಡ ಸುಬ್ಬಯ್ಯ, ಸಂಘದ ಮಾಜಿ ಅಧ್ಯಕ್ಷ ಪಿ.ಎಸ್. ದೇವಯ್ಯ, ಸಂಘದ ಮಾಜಿ ಕಾರ್ಯದರ್ಶಿ ಎ.ಪಿ.ಮೊಟಯ್ಯ, ಶಾಲೆಯ ಸಹ ಶಿಕ್ಷಕಿ ಹಂಸಮತಿ, ಸಂಘದ ಮಾಜಿ ಖಜಾಂಚಿ ಸಿ.ಎಂ.ಚಂಗಪ್ಪ, ಸಂಘದ ಖಜಾಂಚಿ ಪಿ.ಟಿ.ಚರಮಣ, ಶಾಲೆಯ ಮುಖ್ಯ ಶಿಕ್ಷಕಿ ಮೇರಿ ಅನಿತಾ, ಶಾಲೆಯ ಆಡಳಿತಾಧಿಕಾರಿ ಶ್ರೀಮತಿ ಕಾವೇರಿ ದೇವಯ್ಯ, ಕೊಡಗು ಮಾದರಿ ಶಾಲೆಯ ಶಿಕ್ಷಣ ಸಮಿತಿ ಮಾಜಿ ಅಧ್ಯಕ್ಷೆ ಶ್ರೀಮತಿ ಸಿ.ಕೆ.ಸೀತಮ್ಮ ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

'ಎಫ್–35' ಯುದ್ಧ ವಿಮಾನ ಪತನ: ಪೈಲಟ್ ಪ್ರಾಣಾಪಾಯದಿಂದ ಪಾರು



ವಾಷಿಂಗ್ಟನ್: ಕ್ಯಾಲಿಫೋರ್ನಿಯಾದ ಲೆಮೋರೆದ ಬಳಿ 'ಎಫ್–35' ಯುದ್ಧ ವಿಮಾನ ಪತನಗೊಂಡಿದೆ ಎಂದು ಅಮೆರಿಕ ನೌಕಾಪಡೆ ತಿಳಿಸಿದೆ. ಪೈಲಟ್ ಯಶಸ್ವಿಯಾಗಿ ಜಿಗಿದಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಪಘಾತ ಕುರಿತು ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಿಲ್ಲ. ಘಟನೆ ಸಂಬಂಧ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಯುದ್ಧ ವಿಮಾನ ಹೊತ್ತಿ ಉರಿಯುತ್ತಿರುವ ವಿಡಿಯೊ ಮತ್ತು ಫೋಟೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. 'ಎಫ್–35' ಯುದ್ಧ ವಿಮಾನಗಳು ರಹಸ್ಯವಾಗಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಹೊಂದಿದ್ದು, ವಿಶ್ವದಲ್ಲಿಯೇ ಅತ್ಯಂತ ಮಾರಕ ಎಂದೇ ಹೆಸರಾಗಿವೆ. ಇದೇ ವರ್ಷ ಫೆಬ್ರುವರಿಯಲ್ಲಿ ಅಮೆರಿಕ ಪ್ರವಾಸ ಕೈಗೊಂಡಿದ್ದ ಮೋದಿ ಅವರು ಟ್ರಂಪ್‌ರೊಂದಿಗೆ ಮಾತುಕತೆ ನಡೆಸಿದ್ದು, 'ಎಫ್–35' ಯುದ್ಧ ವಿಮಾನಗಳ ಪೂರೈಕೆ ಸೇರಿದಂತೆ ಪ್ರಮುಖ ಶಸ್ತ್ರಾಸ್ತ್ರಗಳ ಖರೀದಿ ಹಾಗೂ ಜಂಟಿಯಾಗಿ ತಯಾರಿಸುವ ಕುರಿತು ಚರ್ಚಿಸಿದ್ದರು. 'ಎಫ್–35' ಯುದ್ಧ ವಿಮಾನಗಳನ್ನು ಭಾರತಕ್ಕೆ ಪೂರೈಸಲು ನೆರವಾಗುವಂತೆ ಪರಿಶೀಲಿಸುವುದಾಗಿಯೂ ಡೊನಾಲ್ಡ್ ಟ್ರಂಪ್ ಹೇಳಿದ್ದರು.

ನೀಟ್ ಪಾಸಾದ ತಾಯಿ, ಮಗಳು; ಸರ್ಕಾರಿ ಕಾಲೇಜಲ್ಲಿ ಮೆಡಿಕಲ್ ಸೀಟು



ಚೆನ್ನೈ: ಅಪರೂಪದ ಪ್ರಕರಣದಲ್ಲಿ ಫಿಸಿಯೊಥೆರಪಿಸ್ಟ್ ಆಗಿರುವ 49 ವರ್ಷದ ಮಹಿಳೆ ಮತ್ತು ಅವರ ಪುತ್ರಿ ವೈದ್ಯಕೀಯ ಕೋರ್ಸ್ ದಾಖಲಾತಿಗೆ ಅಗತ್ಯವಿರುವ ನೀಟ್ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ. ತಾವಿರುವ ಜಿಲ್ಲೆಯಲ್ಲೇ ಇರುವ ಸರ್ಕಾರಿ ಕಾಲೇಜಿನಲ್ಲಿ ಸೀಟು ಪಡೆಯುವಲ್ಲಿ ಮಹಿಳೆ ಯಶಸ್ವಿಯಾಗಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿ ಮಗಳೂ ತನ್ನ ಪಯಣ ಆರಂಭಿಸಿದ್ದಾರೆ. ತಾನು ಶಾಲೆಯಲ್ಲಿ ಕಲಿಯುವ ಸಂದರ್ಭದಲ್ಲಿದ್ದ ಪಠ್ಯಕ್ಕೂ ಈಗಿನ ಪಠ್ಯಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಈಗಿನದು ಬಹಳ ಕಷ್ಟದ ಪಠ್ಯ. ಆದರೆ ನನ್ನ ಮಗಳ ತಯಾರಿ ನನಗೂ ಪ್ರೇರಣೆಯಾಯಿತು. ಹೀಗಾಗಿ ನೀಟ್ ಪರೀಕ್ಷೆ ಎದುರಿಸಲು ನಿರ್ಧರಿಸಿದೆ. ಆಕೆಯದ್ದೇ ಪುಸ್ತಕ ಪಡೆದು ಪರೀಕ್ಷೆಗೆ ಸಿದ್ಧತೆ ಆರಂಭಿಸಿದೆ ಎಂದು ಅಮುತವಲ್ಲಿ ಮಣಿವಣ್ಣನ್ ಹೇಳಿದ್ದಾರೆ. ಇವರ ಮಗಳಾದ ಎಂ.ಸಂಯುಕ್ತಾ ಬಾಹ್ಯ ತರಬೇತಿ ಪಡೆದಿದ್ದರು. ಅಲ್ಲಿನ ನೋಟ್ಸ್‌ಗಳೂ ತನಗೆ ನೆರವಾದವು ಎಂದಿದ್ದಾರೆ. ಅಮ್ಮ ದಾಖಲಾದ ಕಾಲೇಜಿನಲ್ಲೇ ನಾನು ಸೇರುವುದಿಲ್ಲ. ಹೊರರಾಜ್ಯದಲ್ಲಿ ಕೋರ್ಸ್ ಮಾಡಬೇಕೆಂದಿದ್ದೇನೆ. ತಾಯಿ ಪರಿಶಿಷ್ಟ ಜಾತಿ ಮೀಸಲಾತಿಯಡಿ ಸೀಟು ಪಡೆದಿದ್ದಾರೆ. ನನ್ನ ಪತಿ ನಮಗೆ ಸದಾ ಬೆಂಬಲವಾಗಿದ್ದಾರೆ. ನೀಟ್ ಬರೆಯಲು ಇಬ್ಬರಿಗೂ ಅವರದ್ದೇ ಒತ್ತಾಸೆ ಎಂದು ಮುತುವಲ್ಲಿ ತಮ್ಮ ಪತಿ ಕುರಿತು ಮಾತನಾಡಿದ್ದಾರೆ.

ಚೀನಾದಲ್ಲಿ ಭೀಕರ ಪ್ರವಾಹ ಅಂಗಡಿಯಿಂದ ಕೊಚ್ಚಿಹೋದ 20 ಕೆ.ಜಿ. ಚಿನ್ನ



ವುಕಿಕೌಂಟಿ: ಚೀನಾದ ಶಾಂಕ್ಸಿ ಪ್ರಾಂತ್ಯದಲ್ಲಿರುವ ವುಕಿ ಕೌಂಟಿಯಲ್ಲಿ ಪ್ರವಾಹ ಉಂಟಾಗಿ ಚಿನ್ನದ ಅಂಗಡಿಯಿಂದ ಸುಮಾರು 20 ಕಿಲೋಗ್ರಾಂಗಳಷ್ಟು ಚಿನ್ನ, ಬೆಳ್ಳಿ ಆಭರಣಗಳು ಕೊಚ್ಚಿ ಹೋಗಿದ್ದು, ಜನರು ಚಿನ್ನ ಹುಡುಕುವ ಕೆಲಸ ಮಾಡಿದ್ದು, ವಿಡಿಯೋ ವೈರಲ್ ಆಗಿದೆ. ಜುಲೈ 25ರ ಬೆಳಿಗ್ಗೆ ಸಂಭವಿಸಿದ ಈ ಘಟನೆಯಿಂದ, ಅಂಗಡಿ ಸಿಬ್ಬಂದಿ, ನಿವಾಸಿಗಳು ಕಾಣೆಯಾದ ಬೆಲೆಬಾಳುವ ವಸ್ತುಗಳನ್ನು ಹುಡುಕುವ ಸ್ಥಿತಿ ನಿರ್ಮಾಣವಾಯಿತು. ಅಂಗಡಿ ಮಾಲೀಕರ ಪ್ರಕಾರ, ಸಿಬ್ಬಂದಿ ರಾತ್ರಿಯಿಡೀ ಕಾವಲು ಕಾಯುತ್ತಿದ್ದರು. ಆಭರಣಗಳನ್ನು ತಿಜೋರಿಗೆ ಸ್ಥಳಾಂತರಿಸಲಿಲ್ಲ. ಆ ದಿನ ಬೆಳಿಗ್ಗೆ ಪ್ರವಾಹದ ಎಚ್ಚರಿಕೆಗಳನ್ನು ನೀಡಿದಾಗ, ಎಲ್ಲಾ ದಾಸ್ತಾನುಗಳು ಇನ್ನೂ ಪ್ರದರ್ಶನದಲ್ಲಿದ್ದವು. ನಿಮಿಷಗಳಲ್ಲಿ, ನೀರು ಮುಂಭಾಗದ ಪ್ರವೇಶದ್ವಾರದ ಮೂಲಕ ಉಕ್ಕಿ ಒಂದು ಮೀಟರ್‌ಗಿಂತಲೂ ಹೆಚ್ಚು ಏರಿತು. ಪ್ರಬಲವಾದ ಪ್ರವಾಹವು ಅಂಗಡಿ ಮೂಲಕ ಬಂದು ಆಭರಣಗಳಿಂದ ತುಂಬಿದ ಪ್ರದರ್ಶನ ಕ್ಯಾಬಿನೆಟ್‌ಗಳು, ಟ್ರೇಗಳನ್ನು ಕೊಚ್ಚಿಹಾಕಿತು ಎಂದು ಹೇಳಿದ್ದಾರೆ.

ವೈದ್ಯೆಗೆ ಲೈಂಗಿಕ ದೌರ್ಜನ್ಯ: ಮಲಯಾಳಂ ರ‍್ಯಾಪರ್ ಹಿರಂದಾಸ್ ವಿರುದ್ಧ ಕೇಸ್



ತಿರುವನಂತಪುರ: ಯುವ ವೈದ್ಯೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ 'ವೇದನ್' ಎಂದೇ ಹೆಸರಾದ ಮಲಯಾಳಂ ರ‍್ಯಾಪರ್ ಹಿರಂದಾಸ್ ಮುರಳಿ ವಿರುದ್ಧ ಬುಧವಾರ ರಾತ್ರಿ ತ್ರಿಕ್ಕಾಕರ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್ 376ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸ ಲಾಗಿದೆ. 2021ರ ಆಗಸ್ಟ್‌ನಿಂದ 2023ರ ಮಾರ್ಚ್ ವರೆಗೆ ಮದುವೆ ಆಗುವುದಾಗಿ ಸುಳ್ಳು ಭರವಸೆ ನೀಡಿ ಹಿರಂದಾಸ್ ಮುರಳಿ ನನ್ನೊಂದಿಗೆ ಲೈಂಗಿಕ ಸಂಬಂಧ ಹೊಂದಿದ್ದರು ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿರುವುದಾಗಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ. ಸಂತ್ರಸ್ತೆ ಹಲವಾರು ಬಾರಿ ದೂರು ನೀಡಿದ ಬಳಿಕವಷ್ಟೇ ಹಿರಂದಾಸ್ ಮುರಳಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಇದೇ ವರ್ಷ ಏಪ್ರಿಲ್‌ನಲ್ಲಿ ಡ್ರಗ್ಸ್ ಪ್ರಕರಣದಲ್ಲಿ ಮುರಳಿಯನ್ನು ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ಇದಾದ ಕೆಲವೇ ದಿನಗಳಲ್ಲಿ ಚಿರತೆ ಹಲ್ಲುಗಳನ್ನು ಹೊಂದಿದ ಆರೋಪದಡಿ ಆತನನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದರು.

ಇಮ್ರಾನ್ ಖಾನ್‌ರ 166 ಬೆಂಬಲಿಗರಿಗೆ 10 ವರ್ಷ ಜೈಲು



ಲಾಹೋರ್: ಗುಪ್ತಚರ ಇಲಾಖೆ ಕಟ್ಟಡ ಹಾಗೂ ಪಂಜಾಬ್ ಪ್ರಾಂತ್ಯದಲ್ಲಿ ಸೇನಾ ಮೂಲ ಸೌಕರ್ಯಗಳ ಮೇಲೆ 2023ರಲ್ಲಿ ನಡೆದ ದಾಳಿಗೆ ಸಂಬಂಧಿಸಿದಂತೆ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಪಕ್ಷದ 166 ಮಂದಿಗೆ ಫೈಸಲಾಬಾದ್ ಭಯೋತ್ಪಾದನೆ ತಡೆ ನ್ಯಾಯಾಲಯವು (ಎಟಿಸಿ) ಗುರುವಾರ ತಲಾ 10 ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಜೈಲಿನಲ್ಲಿರುವ ಇಮ್ರಾನ್ ಖಾನ್ ಅವರ ಬಿಡುಗಡೆಗೆ ಒತ್ತಾಯಿಸಿ ಪಿಟಿಐ ಪಕ್ಷವು ದೇಶದಾದ್ಯಂತ ಆಗಸ್ಟ್ 5ರಿಂದ 'ಫ್ರೀ ಇಮ್ರಾನ್ ಖಾನ್ ಅಭಿಯಾನ' ಆರಂಭಿಸಲು ಸಜ್ಜಾಗಿದೆ. ಇದೇ ಹೊತ್ತಿನಲ್ಲಿ, ಪಿಟಿಐ ಸದಸ್ಯರನ್ನು ಶಿಕ್ಷೆಗೆ ಗುರಿಪಡಿಸಲಾಗಿದೆ. ನ್ಯಾಷನಲ್ ಅಸೆಂಬ್ಲಿ ಮತ್ತು ಸೆನೆಟ್‌ನಲ್ಲಿ ವಿರೋಧ ಪಕ್ಷದ ನಾಯಕರಾಗಿರುವವರು, ಹಲವು ಶಾಸಕರೂ ಶಿಕ್ಷೆಗೆ ಗುರಿಯಾಗಿದ್ದಾರೆ.

ಐಎಸ್‌ಐ ಕಚೇರಿ ಮೇಲಿನ ದಾಳಿಯ ಆರೋಪ ಎದುರಿಸುತ್ತಿದ್ದ 185 ಜನರ ಪೈಕಿ 108 ಮಂದಿ ದೋಷಿ ಎಂದು ಘೋಷಿಸಿರುವ ನ್ಯಾಯಾಲಯ, ಉಳಿದ 77 ಮಂದಿಯನ್ನು ಖುಲಾಸೆಗೊಳಿಸಿದೆ. ಹಾಗೆಯೇ, ಫೈಸಲಾಬಾದ್ ಪೊಲೀಸ್ ಠಾಣೆ ಮೇಲಿನ ದಾಳಿಗೆ ಸಂಬಂಧಿಸಿದಂತೆ 58 ಮಂದಿಗೆ ತಲಾ 10 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ.

ಮಳೆಯ ಬಿರುಸು ಕಡಿಮೆಯಾದರೂ ನಿಲ್ಲದ ಅವಾಂತರ

ಮಡಿಕೇರಿ–ಮಂಗಳೂರು ಹೆದ್ದಾರಿ ತಡೆಗೋಡೆಯಲ್ಲಿ ಭಾರಿ ಬಿರುಕು

● ಹೆದ್ದಾರಿಗೆ ಗಂಡಾಂತರ ಆತಂಕ ● ಹತ್ತಿರದಲ್ಲಿದ್ದ 5 ಕುಟುಂಬಗಳು ಸ್ಥಳಾಂತರ ● ಸ್ಥಳಕ್ಕೆ ಜಿಲ್ಲಾಧಿಕಾರಿ ಸೇರಿ ಅಧಿಕಾರಿಗಳ ಭೇಟಿ ● ಸುರಕ್ಷತೆಗೆ ಆದ್ಯತೆ ನೀಡಲು ನಿರ್ಧಾರ

ಮಡಿಕೇರಿ,ಜು.31– ಜಿಲ್ಲೆಯಲ್ಲಿ ಮಳೆಯ ಬಿರುಸು ಕಡಿಮೆಯಾಗಿರುವ ನಡುವೆಯೇ ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿ 275ರಲ್ಲಿ ನಿರ್ಮಿಸಲಾಗಿರುವ ಬೃಹತ್ ಕಾಂಕ್ರೀಟ್ ತಡೆಗೋಡೆಯಲ್ಲಿ ಭಾರಿ ಬಿರುಕು ಮೂಡಿದ್ದು ಆತಂಕ ಸೃಷ್ಟಿಸಿದೆ.

ಜನರಲ್ ತಿಮ್ಮಯ್ಯ ವೃತ್ತದ ಮೂಲಕ ಮಂಗಳೂರು ಕಡೆಗೆ ತೆರಳುವ ಹೆದ್ದಾರಿಯ 1 ಕಿ.ಮೀ ಕೆಳ ಭಾಗದಲ್ಲಿ ಈ ಆತಂಕ ತಲೆದೋರಿದ್ದು ಹೆದ್ದಾರಿಗೆ ಗಂಡಾಂತರ ಎದುರಾಗಿದೆ. ತಡೆಗೋಡೆ ಇರುವ ಪ್ರದೇಶದ ಕೆಳಭಾಗದಲ್ಲಿ 5 ಕುಟುಂಬಗಳು ವಾಸಿಸುತ್ತಿದ್ದು, ಮುಂಜಾಗ್ರತಾ ಕ್ರಮವಾಗಿ ಸಂತ್ರಸ್ತರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

30 ಮೀಟರ್ ಬಿರುಕು: 2018ರ ಆಗಸ್ಟ್ ತಿಂಗಳಲ್ಲಿ ಸುರಿದ ಭಾರಿ ಮಳೆಯಿಂದಾಗಿ ರಾಜಾಸೀಟು ಬೆಟ್ಟದ ಕೆಳಭಾಗದಲ್ಲಿ ಹಾದು ಹೋಗಿರುವ ಮಡಿಕೇರಿ–ಮಾಣಿ ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಭಾರಿ ಭೂ ಕುಸಿತ ಸಂಭವಿಸಿ ರಾಷ್ಟ್ರೀಯ ಹೆದ್ದಾರಿ ಸಂಪರ್ಕ ಕಡಿತಗೊಂಡಿತ್ತು. ಆ ಬಳಿಕ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂಲಕ 2021 ರಲ್ಲಿ ಕಾಮಗಾರಿ ಆರಂಭಿಸಿ 2022ರಲ್ಲಿ ತಡೆಗೋಡೆ ಕೆಲಸ ಪೂರ್ಣಗೊಳಿಸಲಾಗಿತ್ತು. ಒಟ್ಟು 3 ಕೋಟಿ ರೂ. ವೆಚ್ಚದಲ್ಲಿ 3 ಹಂತದ 80 ಅಡಿಗೂ ಎತ್ತರದ ಬೃಹತ್ ಕಾಂಕ್ರೀಟ್ ತಡೆಗೋಡೆ ನಿರ್ಮಿಸುವ ಮೂಲಕ ರಾಷ್ಟ್ರೀಯ ಹೆದ್ದಾರಿ ಕುಸಿಯದಂತೆ ತಡೆಯಲಾಗಿತ್ತು.

> **ಕಾಂಕ್ರೀಟ್ ತಡೆಗೋಡೆ ನಿರ್ಮಿಸಿ ಕೇವಲ 3 ವರ್ಷ ಕಳೆದಿದೆ. ಒಟ್ಟು 10 ವರ್ಷಗಳ ಕಾಲ ಗುತ್ತಿಗೆ ಪಡೆದ ಸಂಸ್ಥೆಯೇ ಇದರ ನಿರ್ವಹಣೆ ಮಾಡುತ್ತದೆ. ತಡೆಗೋಡೆ ಬಿರುಕು ಬಿಟ್ಟಿರುವ ಬಗ್ಗೆ ಹೈವೇ ಪ್ರಾಧಿಕಾರದ ಉನ್ನತ ಅಧಿಕಾರಿಗಳಿಗೆ ಈಗಾಗಲೇ ಮಾಹಿತಿ ನೀಡಲಾಗಿದೆ. ಹೈವೇ ಅಥಾರಿಟಿಯ ತಂತ್ರಜ್ಞರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ್ದು, ಶನಿವಾರದಿಂದಲೇ ತಡೆಗೋಡೆ ದುರಸ್ತಿ ಕಾರ್ಯ ನಡೆಸಲಾಗುತ್ತದೆ.**
> – ಗಿರೀಶ್, ಎಇಇ ಹೈವೇ ಅಥಾರಿಟಿ, ಮಡಿಕೇರಿ

ಇದೀಗ ಈ ಬೃಹತ್ ಕಾಂಕ್ರೀಟ್ ತಡೆಗೋಡೆಯಲ್ಲಿ ಒಟ್ಟು 30 ಮೀಟರ್ ಉದ್ದದ ಬಿರುಕುಗಳು ಮೂಡಿವೆ. ಮೊದಲನೆ ಹಂತದಲ್ಲಿ ಕಾಂಕ್ರೀಟ್ ತಡೆಗೋಡೆಗಳ ನಡುವೆ ಪರಸ್ಪರ ಕನಿಷ್ಠ 2 ಇಂಚು ಬಿರುಕು ಕಂಡು ಬಂದಿದ್ದು ಅದರ ಮೇಲಿನ ಕಾಂಕ್ರೀಟ್ ಹೊದಿಕೆ ಭೂಮಿಯಿಂದ ಅರ್ಧ ಅಡಿ ಎತ್ತರಕ್ಕೆ ಚಾಚಿಕೊಂಡಿದೆ. ಇದರ ಮೇಲ್ಭಾಗದಲ್ಲಿರುವ ಕಾಂಕ್ರೀಟ್ ತಡೆಗೋಡೆಯಲ್ಲಿ 30 ಮೀಟರ್ ಉದ್ದಕ್ಕೂ ಬಿರುಕುಗಳು ಕಾಣಿಸಿಕೊಂಡಿರುವುದು ಆತಂಕ ಸೃಷ್ಟಿಸಲು ಕಾರಣವಾಗಿದೆ. ಈ ತಡೆಗೋಡೆ ಮೇಲಿನ ರಾಷ್ಟ್ರೀಯ ಹೆದ್ದಾರಿಯ ಭಾರವನ್ನು ಮಾತ್ರವಲ್ಲದೇ ರಾಜಾಸೀಟಿನಲ್ಲಿರುವ ವೀವ್ ಪಾಯಿಂಟ್ ಬೆಟ್ಟದ ಭಾರವನ್ನು ಹೊತ್ತುಕೊಂಡಿವೆ.



ಬಿರುಕು ಬಿಟ್ಟಿರುವ ತಡೆಗೋಡೆಯನ್ನು ಜಿಲ್ಲಾಧಿಕಾರಿ, ಅಧಿಕಾರಿಗಳು ಪರಿಶೀಲಿಸುತ್ತಿರುವುದು.

ಕುಟುಂಬಗಳ ಸ್ಥಳಾಂತರ: ಬೃಹತ್ ಕಾಂಕ್ರೀಟ್ ತಡೆಗೋಡೆ ನಿರ್ಮಾಣವಾಗಿರುವ ಪ್ರದೇಶ ಮಂಗಳಾದೇವಿ ನಗರಕ್ಕೆ ಸೇರಿದ್ದು, ಇಲ್ಲಿ ಒಟ್ಟು 5 ಕುಟುಂಬಗಳ ಒಟ್ಟು 20 ಮಂದಿ ನೆಲೆಸಿದ್ದಾರೆ. ಕಾಂಕ್ರೀಟ್ ತಡೆಗೋಡೆಯಲ್ಲಿ ಬಿರುಕು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮುಂಜಾಗ್ರತಾಕ್ರಮವಾಗಿ ಅಲ್ಲಿರುವ ಎಲ್ಲಾ ಕುಟುಂಬಗಳ ಸ್ಥಳಾಂತರಕ್ಕೆ ಜಿಲ್ಲಾಡಳಿತ ಕ್ರಮ ಕೈಗೊಂಡಿದೆ. ಈಗಾಗಲೇ 3 ಕುಟುಂಬಗಳು ರೆಡ್ ಕ್ರಾಸ್ ಸಂಸ್ಥೆಯ ಕಾಳಜಿ ಕೇಂದ್ರಕ್ಕೆ ಸ್ಥಳಾಂತರವಾಗಿದ್ದು, ಇನ್ನುಳಿದ 2 ಕುಟುಂಬಗಳು ಸಂಬಂಧಿಕರ ಮನೆಗಳಿಗೆ ತೆರಳಿದ್ದಾರೆ.

> **ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾದ ವಿಜ್ಞಾನಿಗಳಿಗೂ ಈ ಕುರಿತು ಮಾಹಿತಿ ನೀಡಿ ತಡೆಗೋಡೆ ಬಿರುಕು ಬಿಡಲು ಕಾರಣವಾದ ಅಂಶಗಳ ಅಧ್ಯಯನ ನಡೆಸಲು ಮನವಿ ಮಾಡಲಾಗುತ್ತದೆ. ಹೆದ್ದಾರಿ ಪಕ್ಕದಲ್ಲಿರುವ ತಡೆಗೋಡೆಗೆ ಹಾನಿಯಾಗಿಲ್ಲ. ಕೆಳಭಾಗದಲ್ಲಿರುವ ಸಪೋರ್ಟಿಂಗ್ ತಡೆಗೋಡೆಗಳಲ್ಲಿ ಬಿರುಕು ಕಾಣಿಸಿಕೊಂಡಿದೆ. ಮಳೆಗಾಲದಲ್ಲಿ ಇಂತಹ ಸೂಕ್ಷ್ಮ ಕಡೆಗಳ ಬಗ್ಗೆ ನಿರಂತರ ಗಮನ ಹರಿಸಲಾಗುತ್ತದೆ. ಹೈವೇ ಪ್ರಾಧಿಕಾರ, ಲೋಕೋಪಯೋಗಿ ಮತ್ತು ಇನ್ನಿತರ ಇಲಾಖೆಗಳ ಜೊತೆಯಲ್ಲಿ ಚರ್ಚಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಭಾರಿ ವಾಹನ ಸಂಚಾರದ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.**
> – ವೆಂಕಟ್‌ರಾಜಾ, ಕೊಡಗು ಜಿಲ್ಲಾಧಿಕಾರಿ

ಕಳೆದ ಎರಡು ದಿನಗಳ ಹಿಂದೆ ಕಾಂಕ್ರೀಟ್ ತಡೆಗೋಡೆಯಲ್ಲಿ ನೀರು ಹರಿಯುವಿಕೆಗೆ ಅಳವಡಿಸಿದ್ದ ಪೈಪ್ ರಂಧ್ರಗಳ ಮೂಲಕ ನೀರು ಹರಿಯುತ್ತಿತ್ತು. ಇದೀಗ ಈ ನೀರು ಹರಿಯುವುದು ನಿಂತಿದ್ದು, ಭೂಮಿ ಸಹಿತ ಕಾಂಕ್ರೀಟ್ ತಡೆಗೋಡೆ ಬಿರುಕು ಬಿಡಲು ಕಾರಣವಾಗಿದೆ ಎಂದು ಅಲ್ಲಿನ ನಿವಾಸಿಗಳು ಮಾಹಿತಿ ನೀಡಿದರು.

ಅಧಿಕಾರಿಗಳ ಭೇಟಿ–ಪರಿಶೀಲನೆ: ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಮಡಿಕೇರಿ ತಹಶೀಲ್ದಾರ್ ಕಿರಣ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮಡಿಕೇರಿ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತ ಗಿರೀಶ್, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ಇಬ್ರಾಹಿಂ ಮತ್ತು ಕಂದಾಯ, ಪೊಲೀಸ್ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಾಂಕ್ರೀಟ್ ತಡೆಗೋಡೆ ನಿರ್ಮಾಣ, ಬಳಸಲಾದ ತಂತ್ರಜ್ಞಾನ, ನಿರ್ವಹಣೆ ಕಾಲಾವಧಿ, ಬಿರುಕು ಬಿಡಲು ಕಾರಣ, ಅಂತರ್‌ಜಲದ ಒತ್ತಡ, ತಡೆಗೋಡೆಯ ಬಲವರ್ಧನೆ ಮತ್ತಿತರ ವಿಚಾರಗಳ ಕುರಿತು ಜಿಲ್ಲಾಧಿಕಾರಿ ವೆಂಕಟ್‌ರಾಜಾ ಅವರು ಸಂಬಂಧಿಸಿದ ಅಧಿಕಾರಿಗಳಿಂದ ಮಾಹಿತಿ ಪಡೆದರು. ತಡೆಗೋಡೆ ಕೆಳ ಭಾಗದಲ್ಲಿ ನೆಲೆಸಿರುವ ಕುಟುಂಬಗಳನ್ನು ತಕ್ಷಣವೇ ಸ್ಥಳಾಂತರಿಸಿ ಆಶ್ರಯ ಒದಗಿಸುವಂತೆ ತಹಶೀಲ್ದಾರ್‌ಗೆ ಸೂಚನೆ ನೀಡಿದರು.

ಸುರಕ್ಷತೆಗೆ ಮೊದಲ ಆದ್ಯತೆ: ಕಾಂಕ್ರೀಟ್ ತಡೆಗೋಡೆಯಲ್ಲಿ ಬಿರುಕು ಕಾಣಿಸಿಕೊಳ್ಳಲು ಮೇಲ್ನೋಟಕ್ಕೆ ಅಂತರ್‌ಜಲದ ಒತ್ತಡ ಕಾರಣವಾಗಿರುವುದು ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ ಎಂದು ಜಿಲ್ಲಾಧಿಕಾರಿ ವೆಂಕಟ್‌ರಾಜಾ ಮಾಹಿತಿ ನೀಡಿದರು. ಈ ಹಿನ್ನೆಲೆಯಲ್ಲಿ ತಡೆಗೋಡೆ ಕೆಳ ಭಾಗದಲ್ಲಿ ವಾಸವಿದ್ದ ಕುಟುಂಬಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ. ಮಳೆಗಾಲದಲ್ಲಿ ಸಾರ್ವಜನಿಕರ ಸುರಕ್ಷತೆಗೆ ಮೊದಲ ಆದ್ಯತೆ ನೀಡಲಾಗುತ್ತದೆ. ತಡೆಗೋಡೆ ಬಿರುಕು ಕುರಿತು ಹೈವೇ ಪ್ರಾಧಿಕಾರದ ತಂತ್ರಜ್ಞರಿಗೂ ಮಾಹಿತಿ ನೀಡಲಾಗಿದೆ. ಅಧಿಕಾರಿಗಳ ತಂಡ ಕೂಡ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಬಿರುಕು ದುರಸ್ತಿಗೆ ಕ್ರಮ ಕೈಗೊಳ್ಳಲಿದೆ ಎಂದು ಅವರು ಹೇಳಿದರು.

ಬರೆ ಕುಸಿದು ಸಂಕಷ್ಟದಲ್ಲಿದ್ದ ಕುಟುಂಬಕ್ಕೆ ಪೊನ್ನಪ್ಪ ನೆರವು



ಕಳೆದ ಒಂದು ವಾರ ಸುರಿದ ಬಿರುಗಾಳಿ ಸಹಿತ ಧಾರಾಕಾರ ಮಳೆಯಿಂದ ಬರೆ ಕುಸಿದು ಸಂಕಷ್ಟಕ್ಕೆ ಸಿಲುಕಿದ್ದ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ನಾಪೋಕ್ಲು ಬ್ಲಾಕ್ ಮೇಕೇರಿ ಗ್ರಾಮದ ಶಕ್ತಿನಗರ ಕಾಲೋನಿ ನಿವಾಸಿಗಳಿಗೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ನೆರವು ನೀಡಿದ್ದಾರೆ. ಈ ಸಂದರ್ಭದಲ್ಲಿ ಮೇಕೇರಿ ವಲಯ ಕಾಂಗ್ರೆಸ್ ಅಧ್ಯಕ್ಷ ಪೂಜಾರಿರ ಧ್ರುವ, ಹಾಕತ್ತೂರು ವಲಯ ಅಧ್ಯಕ್ಷ ಪಿಯೂಷ್ ಪೆರೇರ, ಮೇಕೇರಿ ಗ್ರಾಮ ಪಂಚಾಯತ್ ಸದಸ್ಯ ಎಂ.ಯು.ಹನೀಫ್, ಬ್ಲಾಕ್ ಪ್ರಧಾನ ಕಾರ್ಯದರ್ಶಿ ಬಶೀರ್, ಸ್ಥಳೀಯ ಪ್ರಮುಖರಾದ ಹ್ಯಾರಿಸ್, ರಫೀಕ್ ಮತ್ತಿತರರು ಉಪಸ್ಥಿತರಿದ್ದರು.

ಮುಂಡಂಡ ಸುಶೀಲ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಬೇತು ಗ್ರಾಮದ ನಿವಾಸಿ ದಿವಂಗತ ಮುಂಡಂಡ ಸೋಮಣ್ಣ ಅವರ ಧರ್ಮಪತ್ನಿ ಮುಂಡಂಡ ಸುಶೀಲ (76) ಗುರುವಾರ ಅನಾರೋಗ್ಯದಿಂದ ಬೆಂಗಳೂರಿನಲ್ಲಿ ನಿಧನರಾದರು. ಮೃತರ ಅಂತ್ಯಕ್ರಿಯೆ ಶುಕ್ರವಾರ (ಆ.1) ಬೇತು ಗ್ರಾಮದ ಮೃತರ ತೋಟದಲ್ಲಿ ನಡೆಯಲಿದೆ. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ಮನೆಗಳಿಂದ ಸೊಸೈಟಿ ಅಕ್ಕಿ ಖರೀದಿಸುತ್ತಿದ್ದ ದಂಧೆ ಪತ್ತೆ

ಗೂಡ್ಸ್ ಆಟೋ ಹಿಂಬಾಲಿಸಿ ಪ್ರಕರಣ ಪತ್ತೆ ಹಚ್ಚಿದ ಆಹಾರ ನಿರೀಕ್ಷಕಿ



ಸೊಸೈಟಿ ಅಕ್ಕಿ ತುಂಬಿದ್ದ ಗೂಡ್ಸ್ ಆಟೋ ವಶಪಡಿಸಿಕೊಂಡು ಪರಿಶೀಸುತ್ತಿರುವುದು.

ಚಾಲಕ ಪರಾರಿ, 3 ಕ್ವಿಂಟಾಲ್‌ಗೂ ಅಧಿಕ ಅಕ್ಕಿ, ಆಟೋ, ತೂಕದ ಯಂತ್ರ ವಶ

ಮಡಿಕೇರಿ,ಜು.31– ಕಾಳಸಂತೆಯಲ್ಲಿ ಮಾರಾಟಕ್ಕೆ ಮನೆ–ಮನೆಗಳಿಂದ ಸಂಗ್ರಹಿಸುತ್ತಿದ್ದ ಸೊಸೈಟಿ ಅಕ್ಕಿಯನ್ನು ವಶಕ್ಕೆ ಪಡೆದ ಘಟನೆ ಕುಶಾಲನಗರದ ಸುಂದರನಗರ ಗ್ರಾಮದಲ್ಲಿ ನಡೆದಿದೆ.

ಕುಶಾಲನಗರ ತಾಲೂಕು ತಹಶೀಲ್ದಾರ್ ಕಿರಣ್ ಗೌರಯ್ಯ ಅವರ ಮಾರ್ಗದರ್ಶನದಲ್ಲಿ ಕುಶಾಲನಗರ ತಾಲೂಕು ಆಹಾರ ನಿರೀಕ್ಷಕಿ ಸ್ವಾತಿ ಎಂ.ಎಸ್. ಅವರು ಕಾರ್ಯಾಚರಣೆ ನಡೆಸಿ ಮನೆಮನೆಗಳಿಂದ ಗೂಡ್ಸ್ ಆಟೋ ಮೂಲಕ ಸೊಸೈಟಿ ಅಕ್ಕಿ ಸಂಗ್ರಹ ದಂಧೆಯನ್ನು ಪತ್ತೆ ಹಚ್ಚಿದ್ದಾರೆ.

ಮನೆಗಳಿಂದ ಸಂಗ್ರಹಿಸಿದ ಅಕ್ಕಿಯನ್ನು ಅಂಗಡಿ, ಮಿಲ್‌ಗಳಿಗೆ ಸಾಗಾಟಗೊಳಿಸುತ್ತಿರುವ ಶಂಕೆ ಮೇರೆಗೆ ಸುಂಟಿಕೊಪ್ಪದ ಗದ್ದೆಹಳ್ಳದಿಂದ ಗೂಡ್ಸ್ ಆಟೋವೊಂದನ್ನು ತಮ್ಮ ವಾಹನದಲ್ಲಿ ಹಿಂಬಾಲಿಸಿಕೊಂಡು ಬಂದಿದ್ದಾರೆ. ಕುಶಾಲನಗರ ಕೂಡ್ಲೂರು ಬಳಿ ಸುಂದರನಗರ ಗ್ರಾಮದ ಮನೆಯೊಂದರಿಂದ ಅಕ್ಕಿ ಸಂಗ್ರಹಿಸುತ್ತಿದ್ದ ಸಂದರ್ಭ ದಾಳಿ ನಡೆಸಿದ್ದಾರೆ. ಈ ಸಂದರ್ಭ ಆಟೋ ಚಾಲಕ ಸ್ಥಳದಿಂದ ಪರಾರಿಯಾಗಿದ್ದು ಅಕ್ಕಿ ಲೋಡಿಂಗ್ ಕೆಲಸಕ್ಕೆ ಬಂದಿದ್ದ ಓರ್ವನನ್ನು ವಶಕ್ಕೆ ಪಡೆಯಲಾಗಿದೆ.

ಗೂಡ್ಸ್ ಆಟೋ ಸಹಿತ ಅಂದಾಜು 3 ಕ್ವಿಂಟಾಲ್‌ಗೂ ಅಧಿಕ ಅಕ್ಕಿ, 1 ತೂಕ ಮಾಡುವ ಡಿಜಿಟಲ್ ಯಂತ್ರವನ್ನು ವಶಕ್ಕೆ ಪಡೆಯಲಾಗಿದೆ. ಬಳಿಕ ಮಹಜರು ನಡೆಸಿ ಮುಂದಿನ ಕ್ರಮಕ್ಕೆ ಕುಶಾಲನಗರ ಗ್ರಾಮಾಂತರ ಪೊಲೀಸರಿಗೆ ಒಪ್ಪಿಸಲಾಗಿದೆ. ಕಾರ್ಯಾಚರಣೆ ಸಂದರ್ಭ ಇಲಾಖೆ ಕಂಪ್ಯೂಟರ್ ಆಪರೇಟರ್ ಚೇತನ್ ಹಾಜರಿದ್ದರು.

ಹೆಚ್ಚುವರಿ ಮನೆಗಳಿಗೆ ಫಲಾನುಭವಿಗಳ ಆಯ್ಕೆ



ಗ್ರಾಪಂ ಅಧ್ಯಕ್ಷ ಅಚ್ಚಪಂಡ ಎಂ.ಬೋಪಣ್ಣ ಮಾತನಾಡುತ್ತಿರುವುದು.

ವಿರಾಜಪೇಟೆ, ಜು.31–ಗ್ರಾಮೀಣ ಭಾಗದ ಹೆಚ್ಚುವರಿ ಯೋಜನೆಯಡಿ ಮನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು ಉಳಿದ ಫಲಾನುಭವಿಗಳಿಗೆ ಮುಂದಿನ ಸಾಲಿನಲ್ಲಿ ಮೊದಲ ಆದ್ಯತೆ ನೀಡಲಾಗುವುದು ಎಂದು ಬೇಟೋಳಿ ಗ್ರಾಪಂ ಅಧ್ಯಕ್ಷ ಅಚ್ಚಪಂಡ ಎಂ.ಬೋಪಣ್ಣ ಹೇಳಿದರು.

ವಿರಾಜಪೇಟೆ ಬಳಿಯ ಬೇಟೋಳಿ ಗ್ರಾಪಂ ವ್ಯಾಪ್ತಿಯ ಪದುಪಾಡಿ ಶ್ರೀ ಅಯ್ಯಪ್ಪ ದೇವಸ್ಥಾನದ ಸಭಾಂಗಣದಲ್ಲಿ ನಡೆದ ಹೆಚ್ಚುವರಿ ಯೋಜನೆಯಡಿ ನೀಡಲಾಗಿರುವ ಮನೆಗಳಿಗೆ ಫಲಾನುಭವಿಗಳ ಆಯ್ಕೆಯ ವಿಶೇಷ ಗ್ರಾಮಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ನಿವೇಶನ ಇಲ್ಲದವರಿಗೆ ಮನೆ ಹಂಚಲಾಗುತ್ತಿದ್ದು ಬೇಟೋಳಿ ಪಂಚಾಯಿತಿಗೆ ವ್ಯಾಪ್ತಿಗೆ ಒಟ್ಟು 31 ಮನೆಗಳು ಮಂಜೂರಾಗಿದ್ದು ಮೀಸಲಾತಿಯಂತೆ ಪ.ಜಾತಿ–ಪಂಗಡಗಳಿಗೆ ಹಂಚಿ, ಇತರ ಪಂಗಡದವರಿಗಾಗಿ ಇನ್ನು 7 ಮನೆಗಳು ಬಾಕಿ ಇರುವುದಾಗಿ ತಿಳಿಸಿದರು.

ನೋಡಲ್ ಅಧಿಕಾರಿಯಾಗಿ ಆಗಮಿಸಿದ್ದ ಶಿಕ್ಷಣ ಸಂಯೋಜಕ ಬಿ.ಎಸ್. ರಂಗಸ್ವಾಮಿ ಮಾತನಾಡಿ, ಸರಕಾರದ ಯೋಜನೆಗಳು ಪ್ರತಿಯೊಬ್ಬರಿಗೂ ತಲುಪುವಂತಾಗಬೇಕು. ನಿವೇಶನ ರಹಿತ ರೈತರು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವಂತಾಗಬೇಕು ಎಂದರು. ಗ್ರಾಮಸ್ಥ ಎ.ಎಂ.ಹರೀಶ್, ಎ.ಎಸ್.ಪುತ ಕಟ್ಟಿ, ಪಿ.ಬಿ.ಚಂಗಪ್ಪ ಎಂ.ಎಂ.ರಜಾಕ್, ಸಿ.ಎಸ್. ಸುದೀಶ್ ಮಾತನಾಡಿದರು. ವೇದಿಕೆಯಲ್ಲಿ ಉಪಾಧ್ಯಕ್ಷೆ ಕೆ.ಹೆಚ್. ಅಲೀಮಾ, ವೈ.ಎಂ.ಶಾಂತಿ, ಬಿ.ಜೆ.ಯಶೋಧ, ಸಿ.ಎಸ್.ಸುದೀಶ್, ಪಿ.ಕೆ. ಗೀತಾ, ಪಿ.ಎಂ.ಲಕ್ಷ್ಮಿ, ಕೆ.ಆರ್.ಲತಾ ಇದ್ದರು.

ರಾಜ್ಯಕ್ಕೆ ರಸಗೊಬ್ಬರ ನೀಡದೆ ಕೇಂದ್ರದಿಂದ ಅನ್ಯಾಯ



ಯಳಂದೂರು ಪಟ್ಟಣದ ಕೃಷಿ ಇಲಾಖೆ ಕಚೇರಿಯ ಸಭಾಂಗಣದಲ್ಲಿ ಶಾಸಕ ಎ.ಆರ್. ಕೃಷ್ಣಮೂರ್ತಿ ರೈತರಿಗೆ ಬಿತ್ತನೆ ಬೀಜಗಳನ್ನು ವಿತರಣೆ ಮಾಡಿದರು.


ಯಳಂದೂರು: ರಾಜ್ಯಕ್ಕೆ ರಸಗೊಬ್ಬರ ನೀಡುವಲ್ಲಿ ಕೇಂದ್ರ ಸರ್ಕಾರ ಅನ್ಯಾಯ ವೆಸಗಿದೆ, ಅದರೂ ರಾಜ್ಯ ಸರ್ಕಾರ ರೈತರ ಹಿತ ಕಾಯುವಲ್ಲಿ ಬದ್ಧವಾಗಿದ್ದು ರಸಗೊಬ್ಬರದ ಕೊರತೆ ಬಾರದಂತೆ ತಡೆಯಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.

ಪಟ್ಟಣದ ಕೃಷಿ ಇಲಾಖೆಯ ಕಚೇರಿಯ ಸಭಾಂಗಣದಲ್ಲಿ ರೈತರಿಗೆ ಕೃಷಿ ಬಿತ್ತನೆ ಬೀಜಗಳನ್ನು ವಿತರಿಸಿ ಮಾತನಾಡಿದ ಅವರು, ರಸಗೊಬ್ಬರದ ಕೊರತೆಯಾಗದಂತೆ ರಾಜ್ಯ ಸರ್ಕಾರ ಎಚ್ಚರಿಕೆ ವಹಿಸಿದೆ. ಕೇಂದ್ರದ ಕೃಷಿ ಸಚಿವರೇ 15 ದಿನದೊಳಗೆ ರಾಜ್ಯಕ್ಕೆ ಗೊಬ್ಬರ ನೀಡುವ ಭರವಸೆ ನೀಡಿದ್ದಾರೆ. ಆದರೆ ವಿಪಕ್ಷಗಳು ನಮ್ಮ ವಿರುದ್ಧ ರೈತರನ್ನು ಎತ್ತಿಕಟ್ಟುವ ಕೆಲಸವನ್ನು ಮಾಡುತ್ತಿವೆ. ರೈತರ ವಿಚಾರದಲ್ಲಿ ಯಾವುದೇ ಕಾರಣಕ್ಕೂ ರಾಜಕೀಯ ಮಾಡಬಾರದು. ತಾಲೂಕಿನಲ್ಲಿ ಬಿತ್ತನೆ ಬೀಜದ ಕೊರತೆಯಾಗದಂತೆ ಎಚ್ಚರಿಕೆ ವಹಿಸಬೇಕು. ರೈತರಿಂದ ಈ ಸಂಬಂಧ ಯಾವುದೇ ದೂರುಗಳು ಬರಬಾರದು ಎಂದು ಇಲ್ಲಿನ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಎಚ್ಚರಿಕೆ ನೀಡಿದರು.

ಪಕ್ಕದ ತಮಿಳುನಾಡಿನಿಂದ ನಮ್ಮ ಜಿಲ್ಲೆ ಹಾಗೂ ತಾಲೂಕಿಗೆ ಭತ್ತದ ಕಟಾವು ಯಂತ್ರಗಳು ಬರುತ್ತವೆ. ಆದರೆ ಇದು ನೇರವಾಗಿ ಇದರ ಮಾಲೀಕರಿಂದ ಬರುವುದಿಲ್ಲ. ಇದನ್ನು ಮಧ್ಯವರ್ತಿಗಳು ತರಿಸುತ್ತಾರೆ. ಹಾಗಾಗಿ ಪ್ರತಿ ವರ್ಷವೂ ಇವರು ಕಟಾವಿನ ಬೆಲೆಯನ್ನು ಏರಿಸುವುದರಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಕಬ್ಬಿಗೆ ನಮ್ಮ ರಾಜ್ಯದಲ್ಲಿ ಕಡಿಮೆ ಬೆಲೆಯನ್ನು ನೀಡಲಾಗುತ್ತಿದೆ. ಆದರೆ ಪಕ್ಕದ ತಮಿಳುನಾಡಿನಲ್ಲಿ ಇದೇ ಬಣ್ಣಾರಿ ಅಮ್ಮನ್ ಕಾರ್ಖಾನೆ ಹೆಚ್ಚಿನ ಬೆಲೆಗೆ ಕಬ್ಬನ್ನು ಖರೀದಿಸುತ್ತಿದೆ. ಈ ತಾರತಮ್ಯ ನಿವಾರಿಸಬೇಕು. ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ ಈ ಬಗ್ಗೆ ಸಂಬಂಧಪಟ್ಟವರ ಗಮನಕ್ಕೆ ಈ ವಿಷಯವನ್ನು ತಂದು ಕ್ರಮ ವಹಿಸುವಂತೆ ಕೆಲ ರೈತರು ಶಾಸಕರಿಗೆ ಆಗ್ರಹಿಸಿದರು. ಈ ಸಂಬಂಧ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ವಹಿಸುವ ಭರವಸೆಯನ್ನು ಶಾಸಕರು ನೀಡಿದರು.

ಕೃಷಿಕ ಸಮಾಜದ ಅಧ್ಯಕ್ಷ ಗೌಡಹಳ್ಳಿ ರವಿ, ಉಪಾಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ತಾಲೂಕು ಅಧ್ಯಕ್ಷ ಕಿನಕಹಳ್ಳಿ ಪ್ರಭುಪ್ರಸಾದ್ ಜಿಪಂ ಮಾಜಿ ಸದಸ್ಯ ಜೆ. ಯೋಗೇಶ್, ಮದ್ದೂರು ಶ್ರೀಕಂಠ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಅಮೃತೇಶ್ವರ್, ಕೃಷಿ ಅಧಿಕಾರಿ ವೆಂಕಟರಂಗಶೆಟ್ಟಿ ಸೇರಿದಂತೆ ಅನೇಕರು ಇದ್ದರು.

ಬಾಲಕಿ ಕೊಂದ ಆರೋಪಿಗೆ ಜೀವಾವಧಿ ಶಿಕ್ಷೆ



ತಂಗರಾಜು

ಚಾಮರಾಜನಗರ, ಜು.31– ಮದುವೆಯಾಗಲು ಅಪ್ರಾಪ್ತೆ ಬಾಲಕಿಯನ್ನು ಅಪಹರಣ ಮಾಡಿ ಆಕೆಯನ್ನು ಕೊಲೆ ಮಾಡಿದ ಆರೋಪಿಗೆ ಜೀವಾವಧಿ ಶಿಕ್ಷೆ ವಿಧಿಸಿ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾ. ಎಸ್.ಜೆ. ಕೃಷ್ಣ ಆದೇಶ ಹೊರಡಿಸಿದ್ದಾರೆ.

ಕೊಳ್ಳೇಗಾಲ ತಾಲೂಕಿನ ವಡ್ಡರ ದೊಡ್ಡಿ ಗ್ರಾಮದ ಸಮೀಪದ ಗೋಡೇಸ್‌ನಗರದ ತಂಗರಾಜು ಅಲಿಯಾಸ್ ಆರೋಗ್ಯಸ್ವಾಮಿ(35) ಶಿಕ್ಷೆಗೊಳಗಾದ ಆರೋಪಿ. ಈತ ಅಪ್ರಾಪ್ತ ಬಾಲಕಿಯನ್ನು ಮದುವೆಯಾಗಲು ಅಪಹರಣ ಮಾಡಿಕೊಂಡು ಹೋಗಿ ಕೊಲೆ ಮಾಡಿರುವುದು ತನಿಖೆಯಲ್ಲಿ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿ ತಂಗರಾಜುಗೆ ಜೀವಾವಧಿ ಶಿಕ್ಷೆ ಹಾಗೂ 30 ಸಾವಿರ ರೂ. ದಂಡವನ್ನು ಕಟ್ಟುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ನೊಂದ ಬಾಲಕಿ ಕುಟುಂಬದವರಿಗೆ ಆರೋಪಿ ಕಟ್ಟುವ ದಂಡದ ಹಣದಲ್ಲಿ 25 ಸಾವಿರ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ 5 ಲಕ್ಷ ರೂ.ಗಳನ್ನು ನೀಡಬೇಕು ಎಂದು ನ್ಯಾಯಮೂರ್ತಿಗಳು ಆದೇಶದಲ್ಲಿ ತಿಳಿಸಿದ್ದಾರೆ. ಸರಕಾರದ ಪರವಾಗಿ ವಿಶೇಷ ಸರಕಾರಿ ಅಭಿಯೋಜಕ ಕೆ. ಯೋಗೇಶ್ ವಾದ ಮಂಡಿಸಿದ್ದರು.

ಚಾಮರಾಜನಗರ ಡಿಡಿಪಿಐಯವರ ಬೇಜವಾಬ್ದಾರಿ ಆದೇಶದ ಪರಿಣಾಮ

ಉದ್ಯೋಗದ ಆಸೆಯಿಂದ ಹಣ ಕಟ್ಟಿ ಕಳೆದುಕೊಂಡ ಮಹಿಳೆಯರ ಕಣ್ಣೀರು

● ಕೊಳ್ಳೇಗಾಲ ಡಿವೈಎಸ್ಪಿ ಕಚೇರಿ ಮುಂದೆ ಕಾದರೂ ಬಾರದ ಅಧಿಕಾರಿಗಳು ● ಮಹಿಳಾ ಆಯೋಗದ ಸೂಚನೆ ಮೇರೆಗೆ ಕಚೇರಿಗೆ ಬರುವಂತೆ ಹೇಳಿದ ಎಸ್ಪಿ

ಕೊಳ್ಳೇಗಾಲ, ಜು.31– ಕೊಳ್ಳೇಗಾಲದಲ್ಲಿ ಇಲ್ಲದ ಅಬ್ದುಲ್ ಕಲಾಂ ಸಂಸ್ಥೆಗೆ ಚಾಮರಾಜನಗರ ಡಿಡಿಪಿಐ ನಿಯಮ ಮೀರಿ ಬೇಜವಾಬ್ದಾರಿ ಸರ್ಕಾರಿ ಆದೇಶ ನೀಡಿದ ಪರಿಣಾಮ ಅದನ್ನು ನಿಜವಾದ ಸಂಸ್ಥೆ ಎಂದು ನಂಬಿ ನೂರಾರು ಮಂದಿ ಉದ್ಯೋಗದ ಆಸೆಯಿಂದ ಕೋಟ್ಯಾಂತರ ರೂ. ಲಂಚ ನೀಡಿ ಮೋಸ ಹೋಗಿದ್ದು, ಡಿವೈಎಸ್ಪಿ ಕಚೇರಿ ಮುಂಭಾಗ ತಮಗೆ ನ್ಯಾಯ ಒದಗಿಸುವಂತೆ ಮಹಿಳೆಯರು ಕಣ್ಣೀರಿಟ್ಟ ಘಟನೆ ಜರುಗಿದೆ.

ಡಿವೈಎಸ್ಪಿ ಕಚೇರಿ ಮುಂದೆ ಮೋಸ ಹೋದ ನೂರಾರು ಮಂದಿ ಕಣ್ಣೀರಿಡುತ್ತಲೆ ರೈತ ಹೋರಾಟಗಾರ ಅಣಗಳ್ಳಿ ಬಸವರಾಜು ಅವರ ನೇತೃತ್ವದಲ್ಲಿ ನ್ಯಾಯಕ್ಕಾಗಿ ಆಗ್ರಹಿಸಿದರು. ನಮಗೆ ನ್ಯಾಯ ಸಿಗುವವರೆಗೂ ನಾವು ಇಲ್ಲಿಂದ ಕದಲುವುದಿಲ್ಲ. ನಮಗೆ ಮಹಿಳಾ ಆಯೋಗದ ಅಧ್ಯಕ್ಷರ ಸೂಚನೆ ಮೇರೆಗೆ ಎಸ್ಪಿಯವರು ಈ ದಿನ ಬರಲು ಹೇಳಿದ್ದಾರೆ, ನಮಗೆ ನ್ಯಾಯ ಸಿಗುವ ವಿಶ್ವಾಸವಿದೆ ಎಂದರು.

ಮಧ್ಯಾಹ್ನ 2.30ರವರೆಗೆ ತಮ್ಮ ಸಮಸ್ಯೆ ಆಲಿಸಲು ಯಾವ ಪೊಲೀಸ್ ಅಧಿಕಾರಿಗಳು ಆಗಮಿಸದ ಹಿನ್ನೆಲೆ ಅಲ್ಲೆ ಊಟ ತರಿಸಿ ಊಟ ಮಾಡುವ ಮೂಲಕ ನ್ಯಾಯಕ್ಕಾಗಿ ಆಗ್ರಹಿಸಿದರು.



ಕೊಳ್ಳೇಗಾಲ ಡಿವೈಎಸ್‌ಪಿ ಕಚೇರಿ ಮುಂದೆ ಕಾದು ಕುಳಿತಿರುವ ಮಹಿಳೆಯರು.

ಏನಿದು ಅಬ್ದುಲ್ ಕಲಾಂ ಸಂಸ್ಥೆ

2024 ರಲ್ಲಿ ಅಬ್ದುಲ್ ಕಲಾಂ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಇದು ಯೋಗ ಮತ್ತು ಕಂಪ್ಯೂಟರ್ ತರಬೇತಿ ಸಂಸ್ಥೆ ಎಂದು ಹೇಳಲಾಗಿದೆ. ಈ ಸಂಸ್ಥೆ ಚಾಮರಾಜನಗರ ಡಿಡಿಪಿಐಗೆ ಅರ್ಜಿ ಸಲ್ಲಿಸಿ ಯೋಗ ಮತ್ತು ಕಂಪ್ಯೂಟರ್ ತರಬೇತಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಕುರಿತು ಅನುಮತಿ ಕೇಳಿತ್ತು. ಅರ್ಜಿ ಸಲ್ಲಿಸಿದ 24 ಗಂಟೆಯಲ್ಲಿ ಡಿಡಿಪಿಐ ರಾಮಚಂದ್ರರಾಜೇ ಅರಸ್ ಅನುಮತಿ ಕೊಟ್ಟೇಬಿಟ್ಟರು.

ಈ ಅನುಮತಿ ಪತ್ರವನ್ನಿಟ್ಟುಕೊಂಡು ಯೋಗ ಮತ್ತು ಕಂಪ್ಯೂಟರ್ ತರಬೇತಿ ಶಿಕ್ಷಕರ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಿತು. ಡಿಡಿಪಿಐ ಪತ್ರವನ್ನು ನಂಬಿದ ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದರು. ಸಂಸ್ಥೆಯವರು ಉದ್ಯೋಗ ನೀಡುವುದಾಗಿ ಸುಮಾರು 180 ಜನರಿಂದ ತಲಾ ಒಂದು ಲಕ್ಷ, ಎರಡು ಲಕ್ಷ, ಮೂರು ಲಕ್ಷ ಸೇರಿದಂತೆ ತರಾವರಿ ಹಣ ಸುಲಿಗೆ ಮಾಡಿ 3 ಕೋಟಿಗೂ ಅಧಿಕ ಹಣ ಸಂಗ್ರಹಿಸಿ ಮೋಸ ಮಾಡಿದೆ ಎನ್ನಲಾಗಿದೆ.

3 ಕೋಟಿಗೂ ಅಧಿಕ ವಂಚನೆ, ಸಚಿವರ ಮೌನ: ಪ್ರತಿಭಟನೆ ನೇತೃತ್ವ ವಹಿಸಿದ್ದ ಅಣಗಳ್ಳಿ ಬಸವರಾಜು ಮಾತನಾಡಿ, ಅಬ್ದುಲ್ ಕಲಾಂ ಸಂಸ್ಥೆಯವರು ಡಿಡಿಪಿಐ ಅವರಿಗೆ ಲಂಚ ನೀಡಿ ಆದೇಶ ಪತ್ರ ಪಡೆದು ಯೋಗ ಮತ್ತು ಗಣಕ ಯಂತ್ರ ತರಬೇತಿಗಾಗಿ ನುರಿತ ಶಿಕ್ಷಕರ ನೇಮಿಸಿಕೊಳ್ಳುವ ನೆಪದಲ್ಲಿ 3 ಕೋಟಿಗೂ ಮೀರಿದ ವಂಚನೆ ಮಾಡಿದೆ ಎಂದು ಆಪಾದಿಸಿದರು. ಪ್ರತಿ ಫಲಾನುಭವಿಯಿಂದ ಲಕ್ಷದಿಂದ 2 ಲಕ್ಷದವರೆಗೆ 180 ಮಂದಿಯಿಂದ ಕೆಲಸದ ಆಸೆ ತೋರಿಸಿ ಹಣ ಪಡೆದು ಮೋಸ ಮಾಡಿದ್ದಾರೆ ಎಂದು ಸಂಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವಿಚಾರದಲ್ಲಿ ಆದೇಶ ನೀಡಿದ ಡಿಡಿಪಿಐ ಮೌನವಹಿಸಿದ್ದಾರೆ, ಈಗ ಅವರೇ ಸ್ಥಳಕ್ಕೆ ಬಂದು ಇವರಿಗೆ ನ್ಯಾಯ ಸಲ್ಲಿಸಬೇಕು, ಉಸ್ತುವಾರಿ ಸಚಿವ ವೆಂಕಟೇಶ್ ಸಂತ್ರಸ್ಥರ ಕಷ್ಟ ಕೇಳುತ್ತಿಲ್ಲ. ಅವರಿಗೆ ನ್ಯಾಯ ಸಲ್ಲಿಸುವಲ್ಲಿ ಮೌನವಹಿಸಿದ್ದಾರೆ. ಶಾಸಕ ಕೃಷ್ಣಮೂರ್ತಿ ಅವರು ಬ್ಯುಸಿ ಇದ್ದಾರೆ ಎಂದರು.

ಈ ವಿಚಾರ ಪ್ರಸ್ತಾಪಿಸಿದ್ದರೂ ಸಹ ಏಕೊ ಸಚಿವರು ಮೌನವಾಗಿರುವುದು ತಿಳಿಯದಾಗಿದೆ, ಇನ್ನಾದರೂ ಸಚಿವರು ವಂಚನೆಗೊಳಗಾದವರ ಪರ ನಿಲ್ಲಲಿ, ಇಲ್ಲದಿದ್ದರೆ ಮುಖ್ಯಮಂತ್ರಿಗಳಿಗೂ ನಾವು ಮನವಿ ಸಲ್ಲಿಸಿ ಸಚಿವರ ಉಡಾಫೆ ಬಗ್ಗೆ ವಿವರಿಸುತ್ತೇವೆ. ನಾವು ಡಿವೈಎಸ್ಪಿ ಕಚೇರಿಗೆ ಆರೇಳು ಬಾರಿ ನ್ಯಾಯಕ್ಕಾಗಿ ಹೋಗಿ ಬಂದಿದ್ದೇವೆ, ಡಿವೈಎಸ್ಪಿಯವರು ವಂಚನೆ ಮಾಡಿದವರನ್ನು ಕರೆಸುತ್ತೇವೆ ಎಂದು ಲಿಖಿತ ದೂರು ಸ್ವೀಕರಿಸಿದರೂ ಸಹ ನ್ಯಾಯ ಸಿಗಲಿಲ್ಲ, ಮಹಿಳಾ ಆಯೋಗದ ಅಧ್ಯಕ್ಷರೆ ಲಿಖಿತ ದೂರು ನೀಡಿದ ಬಳಿಕ ಎಸ್ಪಿಯವರು ಗುರುವಾರ ಡಿವೈಎಸ್ಪಿ ಕಚೇರಿಗೆ ಬನ್ನಿ ಎಂದು ಹೇಳಿದರು. ಈ ಹಿನ್ನೆಲೆ ಬಂದಿದ್ದೆವೆ, ನ್ಯಾಯ ಸಿಗುವವವರೆವಿಗೂ ಸ್ಥಳ ಬಿಟ್ಟು ಹೋಗಲ್ಲ, ನಮ್ಮನ್ನು ಬಂಧಿಸಿದರೂ ಸಹ ಜೈಲಿಗೆ ಹೋಗಲು ಸಿದ್ಧರಾಗಿಯೇ ಬಂದಿದ್ದೇವೆ ಎಂದರು

ತಾಳಿ, ಕಿವಿಯೋಲೆ, ಕಾಲ್ ಚೈನ್ ಕಳೆದುಕೊಂಡಿದ್ದೇನೆ

ಪ್ರತಿಭಟನಾನಿರತ ಸಿದ್ದಯ್ಯನಪುರದ ಮಹಿಳೆ ರಾಧ ಅವರು ಮಾತನಾಡಿ, ನನ್ನ ಮಗನಿಗೆ ಕೆಲಸ ಕೊಡಿಸುತ್ತೇನೆ ಎಂದು ಅಬ್ದುಲ್ ಕಲಾಂ ಸಂಸ್ಥೆಯವರು ಡಿಡಿಪಿಐ ಆದೇಶ ತೋರಿಸಿ ಒಂದೂವರೆ ಲಕ್ಷ ಹಣ ಕೇಳಿದರು, ಅದನ್ನ ನಂಬಿ ನಾನು ನನ್ನ ತಾಳಿ, ಕಿವಿ ಓಲೆ, ಕಾಲಿನ ಚೈನ್ ಮಾರಿ ಹಣ ಕಟ್ಟಿದ್ದೇನೆ. ಸಂಘದಲ್ಲಿ ಸಾಲ ಮಾಡಿ ಹಣ ಕೊಟ್ಟೆ, ಈಗ ನೀಡಿದ ಹಣ ಹಿಂತಿರುಗಿಸುತ್ತಿಲ್ಲ, ಮಾಡಿದ ಕೆಲಸಕ್ಕೆ ಸಂಬಳ ನೀಡಿಲ್ಲ, ಮೋಸ ಹೋದ ನಾವು ಮಹಿಳೆ ಆಯೋಗಕ್ಕೆ, ಡಿವೈಎಸ್ಪಿಯವರಿಗೆ ದೂರು ನೀಡಿದರೂ ನ್ಯಾಯ ಸಿಕ್ಕಿಲ್ಲ, ಈ ದಿನ ಎಸ್ಪಿಯವರು ಅವರನ್ನು ಕರೆಸುತ್ತೇವೆ ಎಂದಿದ್ದರು. ಹಾಗಾಗಿ ನಾವು ನ್ಯಾಯಕ್ಕಾಗಿ ಬಂದಿದ್ದೇವೆ ಎಂದು ಕಣ್ಣೀರಿಟ್ಟರು.

ಧ್ರುವನಾರಾಯಣ್ ಹುಟ್ಟುಹಬ್ಬ ಆಚರಣೆ



ಚಾಮರಾಜನಗರದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ದಿವಂಗತ ಆರ್.ಧ್ರುವನಾರಾಯಣ್ ಅವರ ಹುಟ್ಟುಹಬ್ಬವನ್ನು ವಿವಿಧ ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ಆಚರಿಸಲಾಯಿತು. ಇದೇ ವೇಳೆ ಧ್ರುವನಾರಾಯಣ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.


> ಚಾಮರಾಜನಗರ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆರ್.ಧ್ರುವನಾರಾಯಣ್ ಅವರ 64ನೇ ಜನ್ಮದಿನದ ಅಂಗವಾಗಿ ಅವರ ಅಭಿಮಾನಿ ಬಳಗ, ರೋಟರಿ ಸಂಸ್ಥೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹೆಲ್ಪ್ ಫೇಜ್ ಇಂಡಿಯಾ, ಬೃಂದಾವನ ಆಸ್ಪತ್ರೆ, ನಾರಾಯಣ ಆಸ್ಪತ್ರೆಯ ಸಹಯೋಗದಲ್ಲಿ ನಡೆದ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರದಲ್ಲಿ ಒಟ್ಟು 628 ಮಂದಿ ಭಾಗವಹಿಸಿ, ತಪಾಸಣೆ ಮಾಡಿಸಿಕೊಂಡರು, ಅದರಲ್ಲಿ ಕೀಲು,ಮೂಳೆ ತಪಾಸಣೆ 318 ಮಂದಿ, ಹೃದಯ ತಪಾಸಣೆ 180 ಮಂದಿ, ಇಸಿಜಿ 86 ಮಂದಿ, ಸ್ತ್ರೀರೋಗ ತಪಾಸಣೆ 55 ಮಂದಿ, ಕಣ್ಣಿನ ತಪಾಸಣೆ 105 ಮಂದಿ 12 ಶಸ್ತ್ರಚಿಕಿತ್ಸೆ, ದಂತ ತಪಾಸಣೆ 46 ಮಂದಿ, ಎಕ್ಸ್‌ರೆ 40 ಮಂದಿ, ಕಿವಿ, ಮೂಗು, ಗಂಟಲು ತಪಾಸಣೆ 51 ಮಂದಿ, ಬಿಪಿ, ಶುಗರ್ 628 ಮಂದಿ ತಪಾಸಣೆ ಮಾಡಿಸಿಕೊಂಡಿದ್ದಾರೆ ಎಂದು ಧ್ರುವನಾರಾಯಣ್ ಅಭಿಮಾನಿ ಬಳಗದ ಅಧ್ಯಕ್ಷರು, ರೋಟರಿ ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು ತಿಳಿಸಿದ್ದಾರೆ.

ಚಾಮರಾಜನಗರ: ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ದಿವಂಗತ ಆರ್.ಧ್ರುವನಾರಾಯಣ್ ಸರಳ ಸಜ್ಜನಿಕೆಯ ರಾಜಕಾರಣಿಯಾಗಿದ್ದು, ಮಾನವೀಯ ಗುಣಗಳನ್ನು ಹೊಂದಿರುವಂತಹ ವ್ಯಕ್ತಿಯಾಗಿದ್ದರು ಎಂದು ಕಾಡಾಧ್ಯಕ್ಷ ಪಿ.ಮರಿಸ್ವಾಮಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆರ್.ಧ್ರುವನಾರಾಯಣ್ ಅವರ 64ನೇ ಜನ್ಮದಿನದ ಅಂಗವಾಗಿ ಅವರ ಅಭಿಮಾನಿ ಬಳಗ, ರೋಟರಿ ಸಂಸ್ಥೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹೆಲ್ಪ್ ಫೇಜ್ ಇಂಡಿಯಾ, ಬೃಂದಾವನ ಆಸ್ಪತ್ರೆ ನಾರಾಯಣ ಆಸ್ಪತ್ರೆಯ ಸಹಯೋಗದಲ್ಲಿ ನಡೆದ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರದಲ್ಲಿ ಧ್ರುವನಾರಾಯಣ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಬಿಪಿ, ಶುಗರ್ ತಪಾಸಣೆ ಮಾಡಿಸಿಕೊಂಡು ಮಾತನಾಡಿದರು. ಎರಡು ಬಾರಿ ಶಾಸಕರಾಗಿ, ಸಂಸದರಾಗಿ ಜಿಲ್ಲೆಯಲ್ಲಿ ಅನೇಕ ಅಭಿವೃದ್ಧಿ ಕೆಲಸ ಮಾಡಿದ್ದರು, ಎಲ್ಲರ ಮನಗೆದ್ದಿದ್ದರು ಎಂದರು.

ಧ್ರುವನಾರಾಯಣ ಅವರದು ಎಂದೂ ಮರೆಯಲು ಸಾಧ್ಯವಾಗದ ವ್ಯಕ್ತಿತ್ವ, ನಂಬಿಕೆ, ವಿಶ್ವಾಸ, ಎಲ್ಲವನ್ನೂ ಕ್ರೋಢೀಕರಿಸುವ ವ್ಯಕ್ತಿತ್ವ ಅವರಲ್ಲಿತ್ತು. ಅವರೊಬ್ಬ ಆದರ್ಶ ರಾಜಕಾರಣಿ. ಬಡವರ ಪರ ಮಾತನಾಡುತ್ತಿದ್ದರು. ಜನರ ಪ್ರೀತಿ ವಿಶ್ವಾಸವನ್ನು ಗಳಿಸಿದ್ದರು. ಅವರನ್ನು ಸ್ಮರಿಸಿ ಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು. ಧ್ರುವನಾರಾಯಣ್ ಅಭಿಮಾನಿ ಬಳಗದ ಅಧ್ಯಕ್ಷರು, ರೋಟರಿ ಸಂಸ್ಥೆಯ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, 'ಧ್ರುವನಾರಾಯಣ ಅಭಿವೃದ್ಧಿ ಹರಿಕಾರರಾಗಿದ್ದರು. ಜಿಲ್ಲೆಯ ಅಭಿವೃದ್ಧಿಗಾಗಿ ಅಪಾರ ಕೊಡುಗೆ ನೀಡಿದ್ದಾರೆ. ಕಳೆದ 13 ವರ್ಷಗಳಿಂದ ಅವರ ಹುಟ್ಟುಹಬ್ಬವನ್ನು ಸರಳವಾಗಿ, ಸೇವಾ ಕಾರ್ಯದೊಂದಿಗೆ ಆಚರಿಸಿಕೊಂಡು ಬರಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರ ಸಮಿತಿ ಅಧ್ಯಕ್ಷ ಹೊಂಗನೂರು ಚಂದ್ರು, ಕನಿಷ್ಠ ವೇತನ ಸಲಹಾ ಸಮಿತಿ ಮಂಡಳಿ ಮಾಜಿ ಅಧ್ಯಕ್ಷ ಉಮೇಶ್ ಎಸ್‌ಪಿಕೆ, ಜಿಪಂ ಮಾಜಿ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ, ಸದಸ್ಯರಾದ ಎಸ್.ಸೋಮನಾಯಕ, ಕೆ.ಪಿ.ಸದಾಶಿವಮೂರ್ತಿ, ಕೇತಮ್ಮ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರಕಲವಾಡಿ ಗುರುಸ್ವಾಮಿ, ಮಾಜಿ ಚೂಡಾಧ್ಯಕ್ಷ ಸುಹೇಲ್ ಖಾನ್, ಸೈಯದ್ ರಫೀ, ತಾಪಂ ಮಾಜಿ ಅಧ್ಯಕ್ಷ ಚಿಕ್ಕಮಹದೇವು, ಬಿ.ಕೆ.ರವಿಕುಮಾರ್, ಎಪಿಎಂಸಿ ಅಧ್ಯಕ್ಷ ಸೋಮೇಶ್, ಮಾಜಿ ಅಧ್ಯಕ್ಷ ನಾಗೇಂದ್ರ, ನಿರ್ದೇಶಕ ಆಲೂರ್ ಪ್ರದೀಪ್, ತಾಪಂ ಮಾಜಿ ಸದಸ್ಯರಾದ ಡಿ.ಪಿ. ಪ್ರಕಾಶ, ಶಿವಸ್ವಾಮಿ, ಮಸಗಾಪುರ ರಾಜು, ಸೋಮೇಶ್ವರ, ಕೃಷ್ಣ, ಮುಖಂಡರಾದ ನಾಗಯ್ಯ, ವೀರಭದ್ರಸ್ವಾಮಿ, ರಂಗಸ್ವಾಮಿ, ದೊಡ್ಡಯ್ಯ, ರಾಮಸಮುದ್ರ ರಾಜಪ್ಪ ಮುಕ್ತಂ, ಕಮಲ್ ಖಾನ್,ಯುವ ಕಾಂಗ್ರೆಸ್ ನಾಗೇಂದ್ರ ನಾಯಕ, ನಗರಸಭಾ ಸದಸ್ಯ ಸ್ವಾಮಿ, ಕೆ.ನಾಗರಾಜು, ಮುಖಂಡರಾದ ಎ.ಎಚ್.ಖಾನ್, ಅಕ್ಷಯ್, ವಕೀಲರಾದ ಅರುಣ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನಾಗರತ್ನ, ಶಕುಂತಲಾ. ವಿನೋದ್, ರೋಟರಿ ಸಂಸ್ಥೆ ಅಬ್ದುಲ್ ಅಜೀಜ್ ದೀನಾ, ಆರ್.ಎಂ.ಸ್ವಾಮಿ, ಕೆ.ಎಂ. ಮಹದೇವಸ್ವಾಮಿ, ಗ್ರಾಮ ಸ್ವಸ್ಥ ಸಿದ್ದರಾಜು ಇದ್ದರು.



ಬ್ರಾಟ್ ನಾನೇ ನೀನಂತೆ
ಈ ಹಾಡೇ ಸೊಗಸಂತೆ!

ಲವ್ 360 ಖ್ಯಾತಿಯ ಶಶಾಂಕ್ ಅವರ ನಿರ್ದೇಶನದ ಬ್ರಾಟ್ ಚಿತ್ರ ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ರಿಲೀಸಾಗುತ್ತಿದೆ. ಡಾರ್ಲಿಂಗ್ ಕೃಷ್ಣ, ಮನಿಶಾ ಕಂದಕೂರ್ ನಟಿಸಿರುವ ಈ ಚಿತ್ರದ ಹಾಡೊಂದರ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಅರ್ಜುನ್ ಜನ್ಯ ಅವರ ಸಂಗೀತ ಸಂಯೋಜನೆಯ ನಾನೇ ನೀನಂತೆ ಎಂಬ ಹಾಡು ಕನ್ನಡ, ತೆಲುಗು, ತಮಿಳು, ಮಲಯಾಳಂ ಹಾಗೂ ಹಿಂದಿ ಭಾಷೆಗಳಲ್ಲಿ ಏಕಕಾಲಕ್ಕೆ ರಿಲೀಸಾಯಿತು. ಕನ್ನಡ ಹಾಗೂ ತೆಲುಗಿನಲ್ಲಿ ಈ ಹಾಡನ್ನು ಗಾಯಕ ಸಿದ್ದ ಶ್ರೀರಾಮ್ ಹಾಡಿದ್ದಾರೆ. ಈ ಹಿಂದೆ ಶಶಾಂಕ್, ಅರ್ಜುನ್ ಜನ್ಯ ಹಾಗೂ ಸಿದ್ದ ಶ್ರೀರಾಮ್ ಕಾಂಬಿನೇಶನ್‌ನ ಜಗವೇ ನೀನು ಗೆಳತಿಯೇ ಹಾಡು ದೊಡ್ಡಮಟ್ಟದಲ್ಲಿ ಯಶಸ್ವಿಯಾಗಿತ್ತು. ಇದೇ ಜೋಡಿ ಮತ್ತೊಮ್ಮೆ ಒಂದಾಗಿದೆ.

ನಾಯಕ ಡಾರ್ಲಿಂಗ್ ಕೃಷ್ಣ ಮಾತನಾಡುತ್ತಾ, ಕೌಸಲ್ಯ ಸುಪ್ರಜಾ ರಾಮಾ ಚಿತ್ರದ ನಂತರ ನನ್ನ ಹಾಗೂ ಶಶಾಂಕ್ ಅವರ ಕಾಂಬಿನೇಶನ್‌ನಲ್ಲಿ ಬರುತ್ತಿರುವ ಚಿತ್ರವಿದು. ಮುಂದಿನ ತಿಂಗಳು ಚಿತ್ರದ ಇನ್ನೊಂದು ಹಾಡು ಬಿಡುಗಡೆಯಾಗಲಿದೆ. ಆ ಹಾಡಂತೂ ನನ್ನ ಮಗಳಿಗೆ ಬಹಳ ಇಷ್ಟ ಎಂದು ತಿಳಿಸಿದರು.

ನನ್ನ ಹಾಗೂ ಅರ್ಜುನ್ ಜನ್ಯ ಅವರ ಕಾಂಬಿ ನೇಶನ್‌ನಲ್ಲಿ ಮೂಡಿಬಂದಿರುವ ಎಲ್ಲಾ ಹಾಡುಗಳು ಅತೀ ಹೆಚ್ಚು ಜನಪ್ರಿಯವಾಗಿವೆ. ನನ್ನ ಸಿನಿ ಜರ್ನಿಯಲ್ಲೇ ಅತೀ ಹೆಚ್ಚು ವೆಚ್ಚದಲ್ಲಿ ಮೂಡಿಬಂದಿರುವ ಹಾಡಿದು. ಈ ಹಾಡಿನ ಟ್ಯೂನ್ ಅಂತಿಮ ಗೊಳಿಸಲು ನನಗೆ ಸುಮಾರು 6 ತಿಂಗಳ ಸಮಯ ಬೇಕಾಯಿತು. ಆನಂದ್ ಆಡಿಯೋ ಮೂಲಕ ನಮ್ಮ ಚಿತ್ರದ ಹಾಡು ಬಿಡುಗಡೆಯಾಗಿದೆ. ಅಂದುಕೊಂಡ ಹಾಗೆ ಆದರೆ ಅಕ್ಟೋಬರ್‌ನಲ್ಲಿ ಬ್ರಾಟ್ ಚಿತ್ರ ತೆರೆಗೆ ಬರಲಿದೆ ಎಂದರು.

ನಾಯಕಿ ಮನಿಶಾ ಮಾತನಾಡುತ್ತಾ, ನನ್ನ ಮೊದಲ ಚಿತ್ರವಿದು. ಇದರಲ್ಲಿ ಮಧ್ಯಮ ವರ್ಗದ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಚಿತ್ರದಲ್ಲೂ ನನ್ನ ಪಾತ್ರದ ಹೆಸರು ಮನಿಶಾ. ನಾನೇ ನೀನಂತೆ ನನಗೆ ತುಂಬಾ ಇಷ್ಟದ ಹಾಡು ಎಂದರು.



ಪ್ರೇಮಕಾವ್ಯ ಒಂದು ಸುಂದರ ದೃಶ್ಯಕಾವ್ಯ



ಎರಡು ವಿಭಿನ್ನ ಮನಸ್ಥಿತಿಯ ಜೋಡಿಗಳ ನಡುವಿನ ಪ್ರೇಮ ಕಥೆ ಪ್ರೇಮಕಾವ್ಯ. ಪ್ರೇಮ ಪಾತ್ರದಲ್ಲಿ ಪ್ರಿಯ ಜೆ ಆಚಾರ್ ಹಾಗೂ ಕಾವ್ಯ ಪಾತ್ರದಲ್ಲಿ ವೈಷ್ಣವಿ ನಟಿಸುತ್ತಿದ್ದಾರೆ. 'ನಮ್ಮನೆ ಯುವರಾಣಿ' ಖ್ಯಾತಿಯ ರಾಘವೇಂದ್ರ ಹಾಗೂ ವಿಕಾಸ್ ನಾಯಕರಾಗಿ ಅಭಿನಯಿಸುತ್ತಿದ್ದಾರೆ.

ರವೀನ್‌ಕುಮಾರ್ ಅವರ ನಿರ್ಮಾಣ ಹಾಗೂ ನಿರ್ದೇಶನ ಇರುವ ಪ್ರೇಮಕಾವ್ಯ ಆ.4ರಿಂದ ಕಲರ್ಸ್ ವಾಹಿನಿಯಲ್ಲಿ ಪ್ರಾರಂಭವಾಗಲಿದೆ. ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರೇಮಕಾವ್ಯ ತಂಡ ಹಾಜರಿದ್ದು ಮಾಹಿತಿ ಹಂಚಿಕೊಂಡಿತು.


ಪ್ರಿಯ ಜೆ. ಆಚಾರ್ ಮಾತನಾಡುತ್ತಾ, ನಾನು ಪ್ರೇಮ ಎಂಬ ಪಾತ್ರದಲ್ಲಿ ಅಭಿನಯಿಸುತ್ತಿದ್ದೇನೆ. ತಂದೆ, ತಾಯಿ ಹಾಗೂ ತಂಗಿಯೇ ನನ್ನ ಪುಟ್ಟ ಪ್ರಪಂಚ. ಹೆಚ್ಚು ವಿದ್ಯಾವಂತೆಯಲ್ಲ. ಆದರೆ ತಂಗಿಯ ಸೈಂಟಿಸ್ಟ್ ಆಗಬೇಕೆಂಬ ಕನಸಿಗೆ ಸಹಕಾರ ನೀಡುತ್ತಿರುತ್ತೇನೆ. ಜೊತೆಗೆ ಬಾಲ್ಯದ ಗೆಳೆಯ ರಾಮ್‌ನನ್ನು ಮನಸಾರೆ ಪ್ರೀತಿಸುತ್ತೇನೆ. ಮುಂದೇನಾಗುತ್ತದೆ ಎನ್ನುವುದೇ ಕುತೂಹಲ ಎಂದು ತಮ್ಮ ಪಾತ್ರದ ಬಗ್ಗೆ ಮಾಹಿತಿ ನೀಡಿದರು.

ಕಾವ್ಯ ಪಾತ್ರಧಾರಿ ವೈಷ್ಣವಿ ಮಾತನಾಡುತ್ತಾ, ನಾನೊಬ್ಬ ವಿದ್ಯಾವಂತೆ. ಸೌಮ್ಯ ಸ್ವಭಾವದ ಹುಡುಗಿ. ಬಾಹ್ಯಾಕಾಶ ವಿಜ್ಞಾನಿಯಾಗಬೇಕೆಂಬುದು ನನ್ನಾಸೆ ನಾನು ಹಳ್ಳಿಯಲ್ಲಿ ಹೆಚ್ಚು ಇರಲ್ಲ. ನಗರದಲ್ಲೇ ಇರುತ್ತೇನೆ ಎಂದರು.

ನಟ ರಾಘವೇಂದ್ರ ಮಾತನಾಡುತ್ತಾ, ನಮ್ಮನೆ ಯುವರಾಣಿಯಲ್ಲಿ ಸಾಕೇತ್ ಆಗಿ ಕಾಣಿಸಿಕೊಂಡಿದ್ದೆ. ಇದರಲ್ಲಿ ಮಾದೇವನಾಗಿ ನಿಮ್ಮ ಮುಂದೆ ಬರಲಿದ್ದೇನೆ. ಮಾತು ಬಾರದ ತಂಗಿ. ಅವಳೇ ನನಗೆ ಪ್ರಪಂಚ. ಅಮ್ಮನ ಮಾತೇ ನನಗೆ ವೇದವಾಕ್ಯ. ಕೆಟ್ಟದ್ದರ ಹಾಗೂ ಕೆಟ್ಟವರ ವಿರುದ್ಧ ಹೋರಾಡುತ್ತೇನೆ. ಸ್ವಲ್ಪ ಮುಂಗೋಪಿ. ಹಾಗಾಗಿ ಎಲ್ಲರೂ ನನ್ನನ್ನು ಕೆಟ್ಟವನನ್ನಾಗಿ ನೋಡುತ್ತಾರೆ ಎಂದು ತಮ್ಮ ಪಾತ್ರದ ಬಗ್ಗೆ ವಿವರಿಸಿದರು.

ನಟ ವಿಕಾಸ್ ಮಾತನಾಡುತ್ತಾ, ಮೊದಲ ಬಾರಿಗೆ ನಾಯಕನಾಗಿ ನಟಿಸುತ್ತಿದ್ದೇನೆ. ನನ್ನ ಪಾತ್ರದ ಹೆಸರು ರಾಮ್. ವೃತ್ತಿಯಲ್ಲಿ ವೈದ್ಯ. ತುಂಬಾ ಮೃದು ಸ್ವಭಾವದ ನಾನು ಮಾದೇವನಿಗೆ ದೊಡ್ಡಮ್ಮನ ಮಗ. ದೊಡ್ಡಮ್ಮನಿಗೆ ನಾನೀ ಊರಿನಲ್ಲೇ ಆಸ್ಪತ್ರೆ ಕಟ್ಟಿ ವೈದ್ಯನಾಗಿರಬೇಕೆಂಬ ಆಸೆ. ದೊಡ್ಡಮ್ಮನ ಆಸೆಯೇ ನನ್ನ ಆಸೆ ಕೂಡ ಎಂದು ತಿಳಿಸಿದರು. ನಿರ್ದೇಶಕ ರವೀನ್‌ಕುಮಾರ್ ಮಾತನಾಡಿ, ಪ್ರೇಮಕಾವ್ಯ ಒಂದು ಸುಂದರ ದೃಶ್ಯಕಾವ್ಯವಾಗಿ ಆ. 4ರಿಂದ ಕಿರುತೆರೆಯಲ್ಲಿ ಮೂಡಿಬರಲಿದೆ ಎಂದರು.

'ಪದ್ಮಗಂಧಿ' ಮೂರು ಭಾಷೆಯ ಟ್ರೈಲರ್ ಬಿಡುಗಡೆ



ಹಿರಿಯ ನಟ ಕೆ.ಸುಚೇಂದ್ರ ಪ್ರಸಾದ್ ಅವರ ನಿರ್ದೇಶನದ ಪದ್ಮಗಂಧಿ ಬಿಡುಗಡೆಗೆ ಸಿದ್ಧವಾಗಿದೆ. ಚಿತ್ರದ ಕನ್ನಡ, ಸಂಸ್ಕೃತ ಮತ್ತು ಹಿಂದಿ ಭಾಷೆಯ ಟ್ರೈಲರ್ ಹಾಗೂ ಹಾಡುಗಳನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಯಿತು. ನಿವೃತ್ತ ಪ್ರೊಫೆಸರ್ ಎಸ್.ಆರ್. ಲೀಲಾ ಅವರ ಕಥೆಯನ್ನಾಧರಿಸಿ ಅವರೇ ನಿರ್ಮಿಸಿರುವ ಪದ್ಮಗಂಧಿ ಚಿತ್ರದ ಟ್ರೈಲರನ್ನು ಕೋಟೆ ರಾಮಚಂದ್ರ ಭಟ್ ಬಿಡುಗಡೆ ಮಾಡಿದರು.

ಪೇಜಾವರ ಮಠಾಧೀಶರಾದ ಜಗದ್ಗುರು ಶ್ರೀ ವಿಶ್ವಪ್ರಸನ್ನ ತೀರ್ಥರು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಶ್ರೀಪಾದರು ಮಾತನಾಡುತ್ತಾ, ಸುಚೇಂದ್ರ ಪ್ರಸಾದ್ ಅವರು ದೊಡ್ಡ ಸಾಹಸಕ್ಕೆ ಕೈಹಾಕಿದ್ದಾರೆ. ಚಿತ್ರರಂಗಕ್ಕೆ ಲಾಭದಾಯಕವಲ್ಲದ ಪರಿಸ್ಥಿತಿಯಲ್ಲಿ ಲೀಲಾ ಅವರು ಈ ಸಿನಿಮಾ ಮಾಡಿದ್ದಾರೆ. ಸಂಸ್ಕೃತ ದೇಶಾಂತರಕ್ಕೂ ಸಲ್ಲುವ ಭಾಷೆ. ಅದಕ್ಕೆ ವಿಸ್ತೃತವಾದಂತ ನೋಡುಗರು, ಕೇಳುಗರು ಇರುತ್ತಾರೆ. ಇದರ ಹಿಂದೆ ಕೈಜೋಡಿಸಿದ ಎಲ್ಲರಿಗೂ ದೊಡ್ಡ ಯಶಸ್ಸು ಸಿಗಲೆಂದು ಶುಭ ಹಾರೈಸಿದರು. ವಿದ್ಯಾರ್ಥಿಯಾಗಿ ಕು.ಮಹಾಪದ್ಮ, ಗುರುಮಾತೆಯಾಗಿ ಉಡುಪಿಯ ಪರಿಪೂರ್ಣ ಚಂದ್ರಶೇಖರ್, ಶತಾವಧಾನಿ ಡಾ.ಆರ್.ಗಣೇಶ್, ಡಾ. ಗೌರಿ ಸುಬ್ರಹ್ಮಣ್ಯ, ಡಾ.ಪ್ರೇಮಾ, ಡಾ.ಹೇಮಂತ್ ಕುಮಾರ್, ಆಚಾರ್ಯ ಮೃತ್ಯುಂಜಯಶಾಸ್ತ್ರಿ, ಜಿ.ಎಲ್.ಭಟ್, ಮೃತ್ಯುಂಜಯ ಶಾಸ್ತ್ರಿ, ಪಂಡಿತ ಪ್ರಸನ್ನವೈದ್ಯ, ಡಾ.ದೀಪಕ್ ಪರಮಶಿವನ್, ಹೇಮಂತ್‌ಕುಮಾರ್. ಜಿ ಇವರೆಲ್ಲ ಪದ್ಮಗಂಧಿ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಡಾ.ದೀಪಕ್ ಪರಮಶಿವನ್ ಅವರ ಸಂಗೀತ, ಮನುಯಪ್ಲಾರ್, ನಾಗರಾಜ್ ಅದ್ವಾನಿ, ಗಿರಿಧರ್ ದಿವಾನ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.


ಸುಚೇಂದ್ರಪ್ರಸಾದ್ ಮಾತನಾಡುತ್ತಾ, ಪದ್ಮಗಂಧಿ ಸಿನಿಮಾ ಹುಟ್ಟಿದ ಬಗ್ಗೆ ಅನುಭವಗಳನ್ನು ಹಂಚಿಕೊಂಡು ಮಾಧ್ಯಮದವರು ಇಂತಹ ಕಾರ್ಯಗಳಿಗೆ ಹೆಚ್ಚಿನ ಪ್ರೋತ್ಸಾಹ, ಸ್ಪಂದನೆ ನೀಡಬೇಕಿದೆ ಎಂದು ಮನವಿ ಮಾಡಿಕೊಂಡರು.

ಈ ಸಿನಿಮಾ ಆದಿಯಿಂದ ಅಂತ್ಯದವರೆಗೂ ಪದ್ಮಗಂಧಿಯ ಪರಿಮಳವನ್ನು ಪಸರಿಸುತ್ತದೆ. ದೈವೀಕ ಗಂಧ ಮೆತ್ತಿಕೊಂಡಿರುವ ಕಮಲದ ಹೂವಿನ ಬಗ್ಗೆಯೇ ಹೆಣೆದಿರುವ ಕಥೆಯಿದು. ನಮ್ಮಲ್ಲಿ ದೈವಿಕ ಅನುಭೂತಿ ಸ್ಫುರಿಸುವ ಕಮಲ ಪುಷ್ಪದ ಬಗ್ಗೆ ಆಳವಾಗಿ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತಾ, ಅದರ ಅಗಾಧತೆ, ಮೊಗೆದರೂ ಮುಗಿಯದ ಅಕ್ಷಯ ಪಾತ್ರೆಯಂತಿದೆ. ಇದೆಲ್ಲವನ್ನು ಸಂಶೋಧಿಸಿ ಚಿತ್ರದಲ್ಲಿ ಸನ್ನಿವೇಶಗಳ ಮೂಲಕ ಕಟ್ಟಿಕೊಡಲಾಗಿದೆ. ನಿರ್ದೇಶಕರು ನನ್ನ ಮನಸ್ಸಿನಲ್ಲಿರುವಂತೆಯೇ ಚಿತ್ರವನ್ನು ತೆರೆ ಮೇಲೆ ತೋರಿಸಿದ್ದಾರೆ ಎಂದು ನಿರ್ಮಾಪಕಿ ಎಸ್.ಆರ್. ಲೀಲಾ ಹೇಳಿದರು.

ಸಿನಿಪದಬಂಧ-587



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. 'ವರ್ಷ'ದ ನಟಿ ಗೌರವಾನ್ವಿತಳು 2
2. ಕಲ್ಯಾಣ್ ಕುಮಾರ್ - ಚಂದ್ರಕಲಾ ಅಭಿನಯಕ್ಕೆ ಬಿ. ಕೃಷ್ಣನ್ ನಿರ್ದೇಶಕ 6
4. " _ _ _ _ _ ಹನ್ನೆರಡು ವರುಷ ನನ್ನ ರೋಷ ವರುಷ......", 5
7. ತ್ರಿಮೂರ್ತಿಗಳಲ್ಲಿ ಒಬ್ಬರು ಇಲ್ಲಿಲ್ಲ 4
8. ವಿಷ್ಣುವರ್ಧನ್ ಕುಂಚ ಹಿಡಿದ ಕಲಾವಿದ 4
10. ದುನಿಯಾ ವಿಜಯ್ ನಟನೆಗೆ ತುಷಾರ್ ರಂಗನಾಥ್ ನಿರ್ದೇಶಕ 4
11. ವಿಷ್ಣುವರ್ಧನ್ - ಶ್ರೀನಾಥ್ ಅಭಿನಯದಲ್ಲಿ ಬಿಲ್ಲು, ಕೊಡಲಿ ಹಿಡಿದವರು 7
14. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕಥೆ ಆಧರಿಸಿರುವ ಚಿತ್ರದಲ್ಲಿ ಶಿವ ಶಿವ ಎನ್ನದ ನಾಲಿಗೆ ಏಕೆ ಎಂಬ ಗೀತೆಯಿದೆ 4
15. ಅಜಯ್ ರಾವ್ - ಮಯೂರಿಯ ಪ್ರೇಮ ಕಾವ್ಯ 4
17. ಹಿಂದಿನಿಂದಲೂ ನಡೆದು ಬಂದ ಆಚಾರವಿರುವ ಅಂಬಿಯ ವಂಶ 6
19. " ನಾನೇ ವೀಣೆ ನೀನೇ ತಂತಿ ಅವನೇ _ _ _...", 3

ಮೇಲಿನಿಂದ ಕೆಳಕ್ಕೆ

1. ಬೆಕ್ಕಿನ ಕಂಗಳ ನಟಿ 3
2. ನವತಾರೆ ಚಿತ್ರದ ನಾಯಕಿ 3
3. ಅಣ್ಣಾವ್ರು ಮೈಸೂರು ರಾಜ ವಂಶದ ಚಕ್ರವರ್ತಿ ಪಾತ್ರ ನಿರ್ವಹಿಸಿರುವ ಚಿತ್ರ 8
4. ಬಿ.ಎಸ್.ರಂಗಾ ನಿರ್ದೇಶನದ ಕಾಮಿಡಿ ಚಿತ್ರಕ್ಕೆ ಅನಂತ್‌ನಾಗ್ ಅಭಿನಯವಿದೆ 8
5. ಈ ನಟಿ ಸಂಪತ್ತುಳ್ಳವಳು 2
6. ಹೆಂಡತಿಯ ಅಪ್ಪ ಸೇನೆಯವನು 4
7. ಶಂಕರ್ ನಾಗ್ - ಭವ್ಯ ಅಭಿನಯದ ಚಿತ್ರವಿಲ್ಲಿ ತಲೆ ಕೆಳಗು 4
9. ಗಾಳಿ ಇಲ್ಲಿ ಅಸ್ತ ವ್ಯಸ್ತ 3
12. ನಾಗರ ಹಾವು ಚಿತ್ರದ ಮಾರ್ಗರೇಟ್ 2
13. ಬ್ರಹ್ಮ ವಿಷ್ಣುವಿನೊಂದಿಗೆ ಬಂದವನು 4
16. ಇದೊಂದು ಜಾನಪದ ಕಲಾ ಪ್ರಕಾರ 3
18. ಸರ್ವರ್ ಸೋಮಣ್ಣನ ಹೀರೋಯಿನ್ 2

ಸಿನಿ ಪದಬಂಧ 586ರ ಉತ್ತರ

	ತ	ರ್ಕ		ಮ	ಯ್ಯಾ	ದೆ	ಮ	ಹ	ಲು	
	ಪ			ದು				ಳ್ಳಿ		
ಅ	ಶ್ವಿ	ನಿ	ಬಾ	ವೆ		ಜಾ		ಯಾ		ಬೆಂ
ದೇ					ರ	ಣ	ಧೀ	ರ/ದ		ಕಿ
ರಾ	ಕ್ಷ	ಸ	ರು		ಣ			ರೇ		ಚೆಂ
ಗ		ಕ್ಷ			ರಂ		ಜೇ	ನು	ಗೂ	ಡು
ಅ	ನು	ರಾ	ಗ	ಸಂ	ಗ	ಮ		ಶಿ		
ದೇ				ಧ್ಯಾ		ಕ	ಲಾ	ವ	ತಿ	
ಹಾ	ಲು	ಜೇ	ನು			ರಂ				
ಡು			ಮ		ಚಂ	ದ	ನ	ದ	ಗೊಂ	ಬೆ
		ಅಂ	ಜ	ನಾ				ತ್ತ		

ವಿಜೇತರು: ರಾಮಸ್ವಾಮಿ,
ಇಬ್ಬಿಗೆಗೂಡು, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಚಿತ್ರೀಕರಣ ಮುಗಿಸಿದ



ಚಾಲೆಂಜಿಂಗ್ ಸ್ಟಾರ್ ದರ್ಶನ್ ನಾಯಕರಾಗಿ ನಟಿಸಿರುವ ಬಹುನಿರೀಕ್ಷಿತ 'ದಿ ಡೆವಿಲ್' ಚಿತ್ರಕ್ಕೆ ಬೆಂಗಳೂರು, ರಾಜಸ್ಥಾನ, ಬ್ಯಾಂಕಾಕ್ ಮುಂತಾದ ಲೊಕೇಶನ್‌ಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ, ಸದ್ಯ ಚಿತ್ರದ ಪೋಸ್ಟ್ ಪ್ರೊಡಕ್ಷನ್ ವರ್ಕ್ ನಡೆದಿದೆ. ಇತ್ತೀಚೆಗೆ ದರ್ಶನ್, ನಾಯಕಿ ರಚನಾ ರೈ ಅಭಿನಯದ ಎರಡು ಹಾಡುಗಳನ್ನು ಬ್ಯಾಂಕಾಕ್‌ನಲ್ಲಿ ಚಿತ್ರೀಕರಿಸಿಕೊಂಡು ಬಂದಿರುವ ದಿ ಡೆವಿಲ್ ಚಿತ್ರತಂಡ ಬಿಡುಗಡೆಯ ಸಿದ್ಧತೆಗಳನ್ನು ಮಾಡಿ ಕೊಳ್ಳುತ್ತಿದೆ. ಈಗಾಗಲೇ ನಾಯಕ ದರ್ಶನ್ ಸೇರಿದಂತೆ ಎಲ್ಲಾ ಕಲಾವಿದರ ಡಬ್ಬಿಂಗ್ ಸಹ ಪೂರ್ಣವಾಗಿದೆ. ಸದ್ಯದಲ್ಲೇ ಹಾಡೊಂದನ್ನು ಬಿಡುಗಡೆ ಮಾಡುವುದಾಗಿ ನಿರ್ದೇಶಕ ಪ್ರಕಾಶ್‌ವೀರ್ ತಿಳಿಸಿದ್ದು, ಆದಷ್ಟು ಬೇಗನೇ ಚಿತ್ರವನ್ನು ತೆರೆಗೆ ತರುವುದಾಗಿ ಹೇಳಿದ್ದಾರೆ.

ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿರುವ ಹಾಗೂ ಈಗಾಗಲೇ ಬಿಡುಗಡೆ ಯಾಗಿರುವ ದರ್ಶನ್ ಅವರ ಹೊಸ ಲುಕ್‌ಗಳ ಪೋಸ್ಟರ್‌ಗಳಿಂದ ಸುದ್ದಿಯಾಗಿರುವ ದಿ ಡೆವಿಲ್ ಚಿತ್ರವನ್ನು ತೆರೆಮೇಲೆ ನೋಡಲು ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ.

ಸುಧಾಕರ್.ಎಸ್.ರಾಜ್ ಅವರ ಛಾಯಾಗ್ರಹಣವಿರುವ ದಿ ಡೆವಿಲ್ ಚಿತ್ರಕ್ಕೆ ಬಿ.ಅಜನೀಶ್ ಲೋಕನಾಥ್ ಅವರ ಸಂಗೀತ ನಿರ್ದೇಶನವಿದೆ. ಹರೀಶ್ ಕೊಮ್ಮೆ ಅವರ ಸಂಕಲನ, ಮೋಹನ್ ಬಿ. ಕೆರೆ ಅವರ ಕಲಾ ನಿರ್ದೇಶನ ಹಾಗೂ ರಾಮ್ ಲಕ್ಷ್ಮಣ್ ಅವರ ಸಾಹಸ ನಿರ್ದೇಶನವಿದೆ. ದರ್ಶನ್ ಜತೆ ನಾಯಕಿಯಾಗಿ ರಚನಾ ರೈ ಅಭಿನಯಿಸಿದ್ದಾರೆ. ತುಳಸಿ, ಅಚ್ಯುತಕುಮಾರ್, ಮಹೇಶ್ ಮಂಜ್ರೇಕರ್, ಶ್ರೀನಿವಾಸಪ್ರಭು, ಶೋಭರಾಜ್ ಮುಂತಾದವರು ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

ಬೃಹತ್ ಉದ್ಯೋಗ ಮೇಳ, ಆರೋಗ್ಯ, ರಕ್ತದಾನ ಶಿಬಿರ, ಜನಪರ ಕಾರ್ಯಗಳ ಮೂಲಕ ಆರ್.ಧ್ರುವನಾರಾಯಣ್ ಹುಟ್ಟುಹಬ್ಬ ಆಚರಣೆ

ಆರ್.ಧ್ರುವನಾರಾಯಣ್ ಕಾಂಗ್ರೆಸ್ ಪಕ್ಷದ ಆಸ್ತಿಯಾಗಿದ್ದರು: ಮಾಜಿ ಸಂಸದ ಡಿ.ಕೆ.ಸುರೇಶ್ ಅಭಿಪ್ರಾಯ

ನಂಜನಗೂಡು, ಜು.31– ಮಾಜಿ ಸಂಸದ ಆರ್.ಧ್ರುವನಾರಾಯಣ್ ವ್ಯಕ್ತಿಯಲ್ಲ, ಶಕ್ತಿಯಾಗಿದ್ದರು. ಕಾಂಗ್ರೆಸ್ ಪಕ್ಷದ ಆಸ್ತಿಯಾಗಿದ್ದರು. ಅವರ ಪುತ್ರ ಶಾಸಕ ದರ್ಶನ್ ರೂಪದಲ್ಲಿ ಧ್ರುವನಾರಾಯಣ್ ಅವರನ್ನು ಕಾಣುತ್ತಿದ್ದೇವೆ ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ತಿಳಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಗುರುವಾರ ಧ್ರುವನಾರಾಯಣ್ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಉದ್ಯೋಗ ಮೇಳ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಧ್ರುವನಾರಾಯಣ್ ನನ್ನ ಆತ್ಮೀಯ ಮಿತ್ರ ನಾನು ಮೊದಲ ಬಾರಿಗೆ ಸಂಸದನಾದಾಗ ಅವರೊಡನೆ ಹೆಚ್ಚಿನ ಒಡನಾಟ ಬೆಳೆಯಿತು. ನಮ್ಮ ಜೊತೆಗೆ ಕೊಂಡಿಯಾಗಿ ಕೆಲಸ ಮಾಡುತ್ತಿದ್ದರು. ಸಜ್ಜನ ರಾಜಕಾರಣಿಯಾಗಿ ಅಳೆದು ತೂಗಿ ಮಾತನಾಡುತ್ತಿದ್ದರು. ಅಲ್ಲದೇ ನಮ್ಮೆಲ್ಲರಿಗೂ ರಾಜಕೀಯ ಸಲಹೆಗಾರರಾಗಿದ್ದರು. ಇಂದು ಅವರು ಬದುಕಿದ್ದಿದ್ದರೆ ರಾಜ್ಯ ಸರ್ಕಾರದಲ್ಲಿ ಹಿರಿಯ ಸಚಿವರಾಗಿ ಕೆಲಸ ಮಾಡುತ್ತಿದ್ದರು. ಅವರ ಆದರ್ಶ, ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಅವರು ಕಾಲವಾಗಿ 3 ವರ್ಷ ಕಳೆದರೂ ಜನರು ಅವರ ಮೇಲೆ ಇಟ್ಟಿದ್ದ ಪ್ರೀತಿ ಕಡಿಮೆಯಾಗಿಲ್ಲ. ಅವರು ಕ್ಷೇತ್ರದ ಯುವಕರಿಗೆ ಉತ್ತಮ ಉದ್ಯೋಗ, ಶಿಕ್ಷಣ ಸಿಗುವಂತೆ ಮಾಡಬೇಕು ಎಂದು ಸದಾ ಕನಸು ಕಾಣುತ್ತಿದ್ದರು. ಅವರ ಆಶಯದಂತೆ ಶಾಸಕ ದರ್ಶನ್ ಕಳೆದ 3 ವರ್ಷದಿಂದ ಉದ್ಯೋಗ ಮೇಳ ನಡೆಸುವ ಮೂಲಕ ಯುವಕ–ಯುವತಿಯರಿಗೆ ಉದ್ಯೋಗ ದೊರಕಿಸಿಕೊಟ್ಟು ತಂದೆಯ ಹಾದಿಯಲ್ಲಿ ಮುನ್ನಡೆಯುತ್ತಿದ್ದಾರೆ ಎಂದು ಹೇಳಿದರು.





ಮಾಜಿ ಸಂಸದ ಡಿ.ಕೆ.ಸುರೇಶ್ ಯುವಕರಿಗೆ ಉದ್ಯೋಗ ನೇಮಕಾತಿ ಪತ್ರ ವಿತರಿಸಿದರು. ಮತ್ತೊಂದು ಚಿತ್ರದಲ್ಲಿ ರಕ್ತದಾನ ಶಿಬಿರಕ್ಕೆ ಚಾಲನೆ ನೀಡುತ್ತಿರುವುದು ಕಾಣಬಹುದು.

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಮಾತನಾಡಿ, ಧ್ರುವನಾರಾಯಣ್ ಸ್ವಂತ ಶಕ್ತಿಯಿಂದ ರಾಜಕೀಯವಾಗಿ ಮೇಲೆ ಬಂದವರು. 2016ರಲ್ಲಿ ನಾನು ಶಾಸಕನಾದಾಗ ನನಗೆ ವರುಣ ಕ್ಷೇತ್ರದ ಪರಿಚಯವಿರಲಿಲ್ಲ. ಆಗ ಸಂಸದರಾಗಿದ್ದ ಧ್ರುವನಾರಾಯಣ್ ನನಗೆ ರಾಜಕೀಯ ಮಾರ್ಗದರ್ಶಕರಾಗಿ ಕ್ಷೇತ್ರದ ಪ್ರತಿ ಹಳ್ಳಿಗೂ ನನ್ನ ಜೊತೆ ಬಂದು ಕಾರ್ಯಕರ್ತರ, ಮುಖಂಡರ ಪರಿಚಯ ಮಾಡಿಕೊಟ್ಟು ಆತ್ಮವಿಶ್ವಾಸ ತುಂಬಿದರು. ನಮ್ಮಂತಹ ಯುವ ರಾಜಕಾರಣಿಗಳಿಗೆ ಅವರು ಪ್ರೇರಣೆಯಾಗಿದ್ದರು. ದಿನದ 12 ಗಂಟೆ ಕೆಲಸ ಮಾಡುತ್ತಿದ್ದ, ಜನರೊಂದಿಗೆ ಬೆರತು ಅವರ ಕಷ್ಟಸುಖ ಅರಿಯುತ್ತಿದ್ದ ಧಣಿವರಿಯದ ರಾಜಕಾರಣಿ ಧ್ರುವನಾರಾಯಣ ಅವರನ್ನು ನಮ್ಮ ಜನ ಮರೆಯುವುದಿಲ್ಲ ಎಂದರು.

97 ಕಂಪನಿಗಳು ಭಾಗವಹಿಸಿದ್ದ ಉದ್ಯೋಗ ಮೇಳದಲ್ಲಿ 1450 ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದರು. 350 ಮಂದಿಗೆ ಸ್ಥಳದಲ್ಲೇ ನೇಮಕಾತಿ ಪತ್ರ ವಿತರಿಸಲಾಯಿತು. ಅಲ್ಲದೇ 913 ಮಂದಿಗೆ ಶುಕ್ರವಾರ ಉದ್ಯೋಗ ನೇಮಕಾತಿ ಪತ್ರ ನೀಡಲಾಗುವುದು ಎಂದು ಕಂಪನಿ ಭರವಸೆ ನೀಡಿವೆ.

ರಕ್ತದಾನ ಶಿಬಿರ, ಆರೋಗ್ಯ ಶಿಬಿರ: ಲಯನ್ಸ್ ಕ್ಲಬ್ ಆಶ್ರಯದಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ 350 ಮಂದಿ ರಕ್ತದಾನ ಮಾಡಿದರು. ಅಲ್ಲದೇ 520 ಮಂದಿ ಆರೋಗ್ಯ ತಪಾಸಣೆಗೆ ಒಳಗಾಗಿದ್ದು, ಹೃದಯ, ಕಣ್ಣಿನ ತಪಾಸಣೆ, ಬಿಪಿ. ಶುಗರ್ ಇನ್ನಿತರ ತಪಾಸಣೆ ನಡೆಸಲಾಯಿತು. ಇದೇ ವೇಳೆ ಧ್ರುವನಾರಾಯಣ್ ಅಭಿಮಾನಿ ಬಳಗದಿಂದ ತಾಲೂಕಿನ ಎಲ್ಲಾ ಹಾಸ್ಟೆಲ್‌ಗಳಿಗೆ ಹೊದಿಕೆ ವಿತರಿಸಲಾಯಿತು. ಅಲ್ಲದೇ ಶಾಲಾ ಮಕ್ಕಳಿಗೆ ಲೇಖನ ಸಾಮಗ್ರಿ ವಿತರಿಸಲಾಯಿತು.

ಸಮಾರಂಭದಲ್ಲಿ ಮಾಜಿ ಸಂಸದ ಬಿ.ಎನ್.ಚಂದ್ರಪ್ಪ, ಮುದ್ದುಹನುಮೇಗೌಡ, ಶಾಸಕರಾದ ಪುಟ್ಟರಂಗಶೆಟ್ಟಿ, ಅನಿಲ್, ಗಣೇಶ್ ಪ್ರಸಾದ್, ಮಾಜಿ ಶಾಸಕರಾದ ಕೇಶವಮೂರ್ತಿ, ನರೇಂದ್ರ ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಕಾಡಾ ಅಧ್ಯಕ್ಷ ಮರಿಸ್ವಾಮಿ, ವಾಲ್ಮೀಕಿ ನಿಗಮ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಪ್ರತಿಮಾ ಪ್ರಸಾದ್, ರಾಮಸ್ವಾಮಿ, ಭರತ್ ರಾಮಸ್ವಾಮಿ, ಕಾಂಗ್ರೆಸ್ ಉಸ್ತುವಾರಿ ಸೋಮೇಶ್, ವಿಶ್ವ ಕರ್ಮ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿ, ಜಿಪಂ ಮಾಜಿ ಸದಸ್ಯೆ ಲತಾ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ನಗರಸಭಾ ಮಾಜಿ ಉಪಾಧ್ಯಕ್ಷ ದೊರೆಸ್ವಾಮಿ, ಮುಖಂಡರಾದ ಇಂಧನ್ ಬಾಬು, ಕುಳ್ಳಯ್ಯ, ರಾಜೇಶ್, ನಾಗರಾಜು, ಪ್ರದೀಪ್ ಕುಮಾರ್, ದೊರೆಸ್ವಾಮಿ ನಾಯಕ, ಮಹದೇವಪ್ಪ ಅಬ್ದುಲ್ ಖಾದರ್, ಕಾಂಗ್ರೆಸ್ ಕಾರ್ಮಿಕ ವಿಭಾಗ ಅಧ್ಯಕ್ಷ ಗೋವಿಂದರಾಜು, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮು, ಕಾಂಗ್ರೆಸ್ ಎಸ್ಸಿ ಘಟಕ ಅಧ್ಯಕ್ಷ ಶಿವಣ್ಣ, ಯೂತ್ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್, ನಗರಸಭಾ ಸದಸ್ಯರಾದ ಎಸ್.ಪಿ.ಮಹೇಶ್, ಗಂಗಾಧರ್, ಪ್ರದೀಪ್, ಕೆ.ಎಂ.ಬಸವರಾಜು, ಸೇರಿದಂತೆ ಹಲವರಿದ್ದರು.

> ನನ್ನ ತಂದೆ ಧ್ರುವನಾರಾಯಣ್ ಅವರು ಈ ಭಾಗದಲ್ಲಿ 2 ಬಾರಿ ಸಂಸದ, ಶಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಜನ್ಮದಿನದ ಅಂಗವಾಗಿ ಸತತ 3ನೇ ಬಾರಿಗೆ ಉದ್ಯೋಗ ಮೇಳ ನಡೆಸಿದ್ದು, ನೂರಾರು ಯುವಕರು ಉದ್ಯೋಗ ಪಡೆದಿದ್ದಾರೆ. ಈ ವರ್ಷವೂ 1450 ಉದ್ಯೋಗ ಆಕಾಂಕ್ಷಿಗಳು ಮೇಳದಲ್ಲಿ ಭಾಗವಹಿಸಿದ್ದಾರೆ. ಅಲ್ಲದೆ ಲಯನ್ಸ್ ಕ್ಲಬ್ ಸಹ ಆರೋಗ್ಯ ಮೇಳ ಹಮ್ಮಿಕೊಂಡು ಜನರ ಚಿಕಿತ್ಸೆಗೆ ನೆರವಾಗಿದೆ. ನನ್ನ ತಂದೆ ಈ ಭಾಗದಲ್ಲಿ ಶಿಕ್ಷಣ ಮತ್ತು ಆರೋಗ್ಯ ಕಲ್ಪಿಸುವ ಜೊತೆಗೆ ಉದ್ಯೋಗ ಕಲ್ಪಿಸಿಕೊಡಲು ಸದಾ ಕಾಲ ಮುಂದಾಗಿದ್ದರು. ಅವರ ದೂರದೃಷ್ಟಿ ಫಲವಾಗಿ ಚಾಮರಾಜನಗರದಲ್ಲಿ ಮೆಡಿಕಲ್ ಕಾಲೇಜು, ಕೇಂದ್ರಿಯ ವಿದ್ಯಾಲಯ, ಲಾ ಕಾಲೇಜು ಸ್ಥಾಪನೆಯಾದವು. ನಾನು ಕೂಡ ಅವರ ದೂರದೃಷ್ಟಿಯ ಚಿಂತನೆಗಳನ್ನು ಮುನ್ನಡೆಸಿಕೊಂಡು ಹೋಗಲು ನನ್ನ ತಂದೆ ಹಾಕಿಕೊಟ್ಟ ಮಾರ್ಗದಲ್ಲಿ ನಡೆದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. – ದರ್ಶನ್, ಶಾಸಕ.

ರೈಲ್ವೆ ಮೇಲ್ಸೆತುವೆಗೆ ವಿ.ಶ್ರೀನಿವಾಸ್ ಪ್ರಸಾದ್ ಹೆಸರು ನಾಮಕರಣ

ನಂಜನಗೂಡು, ಜು.31– ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬ ಸ್ಮರಣಾರ್ಥ ಶಾಸಕ ದರ್ಶನ್ ಅವರು ನಂಜನಗೂಡಿನಲ್ಲಿ ನಿರ್ಮಾಣವಾಗಿರುವ ರೈಲ್ವೆ ಮೇಲ್ಸೆತುವೆಗೆ ಧೀಮಂತ ಮಾಜಿ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಹೆಸರು ನಾಮಕರಣ ಮಾಡುವ ಮೂಲಕ ಗೌರವ ಸಲ್ಲಿಸಿದ್ದಾರೆ ಎಂದು ಶ್ರೀನಿವಾಸ್ ಪ್ರಸಾದ್ ಪುತ್ರಿ ಪ್ರತಿಮಾ ಪ್ರಸಾದ್ ತಿಳಿಸಿದರು.



ನಂಜನಗೂಡಿನ ರೈಲ್ವೆ ಮೇಲ್ಸೆತುವೆಗೆ ವಿ.ಶ್ರೀನಿವಾಸಪ್ರಸಾದ್ ಹೆಸರು ನಾಮಕರಣ ಮಾಡಲಾಯಿತು.

ನಗರಸಭೆ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರೈಲ್ವೆ ಮೇಲ್ಸೆತುವೆಗೆ ವಿ.ಶ್ರೀನಿವಾಸ ಪ್ರಸಾದ್ ಹೆಸರಿನ ನಾಮಫಲಕ ಅನಾವರಣಗೊಳಿಸಿ ಅವರು ಮಾತನಾಡಿದರು.

ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರು ನಂಜನಗೂಡು ಕ್ಷೇತ್ರಕ್ಕೆ ಹಲವು ಮಹತ್ತರ ಕೊಡುಗೆ ನೀಡಿದ್ದಾರೆ. ಅಂತೆಯೇ ಆರ್.ಧ್ರುವನಾರಾಯಣ್ ಕೂಡ ಈ ಭಾಗದ ಜನಪ್ರಿಯ ರಾಜಕಾರಣಿಗಳಲ್ಲಿ ಒಬ್ಬರಾಗಿದ್ದರು. ಧ್ರುವನಾರಾಯಣ್ ಹುಟ್ಟುಹಬ್ಬದ ಸ್ಮರಣಾರ್ಥ ಶಾಸಕ ದರ್ಶನ್ ಅವರು ನಂಜನಗೂಡಿನಲ್ಲಿ ನಿರ್ಮಾಣವಾಗಿರುವ ರೈಲ್ವೆ ಮೇಲ್ಸೆತುವೆಗೆ ವಿ.ಶ್ರೀನಿವಾಸಪ್ರಸಾದ್ ಹೆಸರನ್ನು ನಾಮಕರಣಗೊಳಿಸಿ ಗೌರವ ಸಲ್ಲಿಸಿದ್ದಾರೆ. ನಮ್ಮ ಕುಟುಂಬದ ಪರವಾಗಿ ನಾನು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ಪ್ರಸಾದ್ ಮತ್ತು ಆರ್.ಧ್ರುವನಾರಾಯಣ್ ನಡುವೆ ಉತ್ತಮ ಬಾಂಧವ್ಯವಿತ್ತು. ರಾಜಕೀಯ ಹೊರತಾಗಿ 2 ಕುಟುಂಬ ವರ್ಗದವರು ಆ ಬಾಂಧವ್ಯವನ್ನು ಒಗ್ಗಟ್ಟಿನಿಂದ ಮುಂದುವರಿಸುವ ಮೂಲಕ ಗಟ್ಟಿಗೊಳಿಸುತ್ತೇವೆ ಎಂದರು.

ಶಾಸಕ ದರ್ಶನ್ ಮಾತನಾಡಿ, ವಿ.ಶ್ರೀನಿವಾಸ ಪ್ರಸಾದ್ ಅವರು ನಾಡುಕಂಡ ಧೀಮಂತ ಶ್ರೇಷ್ಠ ರಾಜಕಾರಣಿ. ಶೋಷಿತರ ದಿಟ್ಟ ಧ್ವನಿಯಾಗಿ ಜನಮನ್ನಣೆ ಗಳಿಸಿದ್ದರು. ಅವರ ದೂರದೃಷ್ಟಿ, ಚಿಂತನೆಗಳು, ಕ್ಷೇತ್ರದಲ್ಲಿ ಅವರು ಮಾಡಿರುವ ಕೆಲಸಗಳ ಮೂಲಕ ಜೀವಂತವಾಗಿದೆ. ನಂಜನಗೂಡು ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರ. ಈ ಹಿನ್ನೆಲೆಯಲ್ಲಿ ಅವರಿಗೆ ಗೌರವ ಸೂಚಿಸುವ ಸಲುವಾಗಿ ನಗರಸಭಾ ಆಡಳಿತ ರೈಲ್ವೆ ಮೇಲ್ಸೆತುವೆ ಮತ್ತು ಈ ರಸ್ತೆಗೆ ವಿ.ಶ್ರೀನಿವಾಸ್‌ಪ್ರಸಾದ್ ಹೆಸರನ್ನು ನಾಮಕರಣಗೊಳಿಸಿದೆ. ನನ್ನ ತಂದೆ ಆರ್.ಧ್ರುವನಾರಾಯಣ್ ಅವರ ಹುಟ್ಟುಹಬ್ಬದ ಸ್ಮರಣಾರ್ಥ ಹೆಸರನ್ನು ನಾಮಕರಣಗೊಳಿಸುವ ಮೂಲಕ ಅವರಿಗೆ ಗೌರವ ಸಲ್ಲಿಸಲಾಗುತ್ತಿದೆ. ನಾನು ಕಾನೂನು ಪದವಿ ವ್ಯಾಸಂಗ ಮಾಡುತ್ತಿದ್ದ ವೇಳೆ ಬೆಂಗಳೂರಿನ ಶ್ರೀನಿವಾಸ್ ಪ್ರಸಾದ್ ಅವರ ಶಾಸಕರ ಕೊಠಡಿಯಲ್ಲಿ ಉಳಿದು ಕೋಚಿಂಗ್ ಪಡೆದಿದ್ದೆ. ಆದ್ದರಿಂದ ನನ್ನ ಜೀವನದಲ್ಲೂ ಕೂಡ ವಿ.ಶ್ರೀನಿವಾಸ ಪ್ರಸಾದ್ ಅವರ ಕೊಡುಗೆ ಇದೆ. ಆದ್ದರಿಂದ ನಾನು ಕ್ಷೇತ್ರದ ಶಾಸಕರಾಗಿ ವಿ ಶ್ರೀನಿವಾಸ್ ಪ್ರಸಾದ್ ಅವರ ಹೆಸರನ್ನು ಶಾಶ್ವತಗೊಳಿಸುವ ಕೆಲಸ ಮಾಡುತ್ತೇನೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವ ಮೂರ್ತಿ, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ರಾಮಸ್ವಾಮಿ, ಭರತ್ ರಾಮಸ್ವಾಮಿ, ಮುಖಂಡರಾದ ಯು.ಎನ್.ಪದ್ಮನಾಭರಾವ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್ ಕುಮಾರ್, ಕಾಂಗ್ರೆಸ್ ಅಧ್ಯಕ್ಷರಾದ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ವಾಲ್ಮೀಕಿ ನಿಗಮ ಮಾಜಿ ಅಧ್ಯಕ್ಷ ಎಸ್ಸಿ ಬಸವರಾಜು, ನಗರಸಭಾ ಸದಸ್ಯರಾದ ಗಂಗಾಧರ್, ಎಸ್.ಪಿ.ಮಹೇಶ್, ಪ್ರದೀಪ್, ಗಾಯತ್ರಿ, ಜಿಪಂ ಮಾಜಿ ಸದಸ್ಯೆ ಲತಾ, ಶಶಿರೇಖಾ, ಮುಖಂಡರಾದ ದೊರೆಸ್ವಾಮಿ ನಾಯಕ, ಮುರುಗೇಶ್, ಕುಳ್ಳಯ್ಯ, ಅಬ್ದುಲ್ ಖಾದರ್, ಜಿ.ಬಸವರಾಜು, ಪುಟ್ಟಸ್ವಾಮಿ, ಡಿವೈಎಸ್ಪಿ ರಘು, ಇನ್ಸ್‌ಪೆಕ್ಟರ್ ರವೀಂದ್ರ, ಶ್ರೀನಿವಾಸ್ ಪ್ರಸಾದ್ ಅಭಿಮಾನಿ ಬಳಗದವರು ಹಾಗೂ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಹಳ್ಳಿಗಳ ಅಭಿವೃದ್ಧಿಗೆ ಗಮನ ಹರಿಸುತ್ತೇನೆ



ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು.

ಹುಣಸೂರು, ಜು.31–ಮುಂದಿನ ದಿನಗಳಲ್ಲಿ ತಾಲೂಕಿನ ಹಳ್ಳಿಗಳ ಅಭಿವೃದ್ಧಿಗೆ ಗಮನ ಹರಿಸುತ್ತೇನೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು. ತಾಲೂಕಿನ ಶಿಂಡೇನಹಳ್ಳಿ, ಅಬ್ಬೂರು, ಕಿರಂಗೂರು, ಹರಳಹಳ್ಳಿ, ಶಂಕರಪುರ ಹಾಡಿ, ನಾಗಪುರ ಹಾಡಿಯಲ್ಲಿ ರಸ್ತೆ, ಚರಂಡಿ ಸೇರಿದಂತೆ ಅಂಗವಾಡಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ತಾಲೂಕಿನ ಹಳ್ಳಿಗಳಲ್ಲಿ ಮಳೆಯಿಂದ ಕೆಲವು ರಸ್ತೆಗಳು, ಚರಂಡಿ, ಕುಡಿಯುವ ನೀರಿನ ಪೈಪ್‌ಲೈನ್‌ಗಳು ಹದಗೆಟ್ಟಿವೆ. ಎಲ್ಲಾ ಹಳ್ಳಿಗಳಿಗೂ ನಾನು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಆಗಬೇಕಾದ ಅಭಿವೃದ್ಧಿ ಕಾರ್ಯ ಕೈಗೊಂಡು ಹಳ್ಳಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ಮಳೆಯಿಂದ ಗ್ರಾಮ ಪರಿಮಿತಿ ರಸ್ತೆಗಳು ತುಂಬಾ ಹಾಳಾಗಿದ್ದು, ಸರ್ಕಾರ ನೀಡುವ ಅನುದಾನ ಒಂದು ಗ್ರಾಮಕ್ಕೆ ಸಾಲದು. ಆದ್ದರಿಂದ ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಮಳೆ ಪ್ರದೇಶಕ್ಕೆ ಹೆಚ್ಚು ಅನುದಾನ ನೀಡಿ ಗ್ರಾಮಗಳ ಅಭಿವೃದ್ಧಿಗೆ ಮುಂದಾಗಬೇಕೆಂದು ಮನವಿ ಮಾಡಿದರು.

ಈ ವೇಳೆ ಎಪಿಎಂಸಿ ಮಾಜಿ ಅಧ್ಯಕ್ಷ ಸುಭಾಷ್, ಉಪ ತಹಸೀಲ್ದಾರ್ ಚೆಲುವರಾಜು, ಗ್ರಾಪಂ ಸದಸ್ಯರಾದ ನಾಣ್ಯ ಕುಮಾರಿ, ಜಗದೀಶ್, ಚಂದ್ರಶೇಖರ, ಪ್ರಭಾಕರ್ ಹೆಗ್ಗಡೆ, ಕೆಇಬಿ ಇಂಜಿನಿಯರ್ ದಿಲೀಪ್ ಕುಮಾರ್ ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಶಸ್ತ್ರಚಿಕಿತ್ಸಕ ಡಾ.ಎಂ.ರೇವಣ್ಣಗೆ ಸನ್ಮಾನ



ರಾಷ್ಟ್ರೀಯ ವೈದ್ಯ ದಿನಾಚರಣೆ ಅಂಗವಾಗಿ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೆಲ್ತ್ ಕೇರ್ ಎಕ್ಸಲೆನ್ಸ್ 2025 ಪ್ರಶಸ್ತಿ ಪಡೆದ ತಿ.ನರಸೀಪುರದ ಖ್ಯಾತ ಶಸ್ತ್ರಚಿಕಿತ್ಸಕ ಡಾ.ಎಂ.ರೇವಣ್ಣ ಅವರನ್ನು ಮುದ್ದುಕೃಷ್ಣ, ಆಲಗೂಡು ಎಂ.ಮಂಜು, ಡಾ.ಮಲ್ಲಿಕಾರ್ಜುನಸ್ವಾಮಿ, ಸೋಮಣ್ಣ, ಅಡುಗೆ ಪ್ರಭು, ಅಡುಗೆ ವಿಜಿ, ಮಹೇಶ್, ನಂದೀಶ್, ಆಟೋ ಮೂರ್ತಿ, ರಜತ್, ಕುಮಾರ್, ಪ್ರದೀಪ, ಬಸವರಾಜು ಇದ್ದರು.

ಡಿಪ್ಲೋಮಾ ಪ್ರವೇಶ ಅವಧಿ ವಿಸ್ತರಣೆ

ಮೈಸೂರು, ಜು.31– ಮೈಸೂರಿನ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೋಮಾ ಇಂಜಿನಿಯರಿಂಗ್ ವಿಭಾಗದ ವೃತ್ತಿಪರ ಅಭ್ಯರ್ಥಿಗಳ ಲ್ಯಾಟರಲ್ ಎಂಟ್ರಿ, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ಇಂಜಿನಿಯರಿಂಗ್, ಮೆಕ್ಯಾನಿಕಲ್ ಇಂಜಿನಿಯರಿಂಗ್, ಡಿಪ್ಲೋಮಾ ಕೋರ್ಸುಗಳಿಗೆ ಆಫ್ ಲೈನ್ ಮೂಲಕ ಪ್ರವೇಶ ಪಡೆಯಲು ಆ.11ರವರೆಗೆ ಪ್ರವೇಶ ಅವಧಿ ವಿಸ್ತರಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಈ ಕೋರ್ಸುಗಳಿಗೆ ಪ್ರವೇಶ ಪಡೆಯಬಹುದು. ನಾನ್ ಇಂಜಿನಿಯರಿಂಗ್ ಪ್ರಥಮ ವರ್ಷದ ಡಿಪ್ಲೋಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್ (ಕನ್ನಡ) ಮತ್ತು ಕಮರ್ಷಿಯಲ್ ಪ್ರಾಕ್ಟೀಸ್ (ಇಂಗ್ಲೀಷ್) ಕೋರ್ಸುಗಳಿಗೆ ಅರ್ಹ ಅಭ್ಯರ್ಥಿಗಳಿಗೆ ಸಂಸ್ಥೆಯ ಪ್ರಾಂಶುಪಾಲರ ಹಂತದಲ್ಲಿ ಆಫ್‌ಲೈನ್ ಮೂಲಕ ಪ್ರವೇಶ ನೀಡಲಾಗುವುದು. ಈ ಕೋರ್ಸುಗಳಿಗೆ ಆ.11ರವರೆಗೆ ಅರ್ಜಿ ಸಲ್ಲಿಸಬಹುದು.

ಹೆಚ್.ಡಿ.ಕೋಟೆ ಪತ್ರಕರ್ತರ ಸಂಘಕ್ಕೆ ನಿವೇಶನ ಮಂಜೂರು

ಪತ್ರಕರ್ತರ ದಿನಾಚರಣೆಯಲ್ಲಿ ಶಾಸಕ ಅನಿಲ್

ಹೆಚ್.ಡಿ.ಕೋಟೆ, ಜು.31– ತಾಲೂಕಿನ ಪತ್ರಕರ್ತರ ಸಂಘಕ್ಕೆ ನಿವೇಶನ ಮಂಜೂರು ಮಾಡಿದ್ದೇನೆ ಎಂದು ಶಾಸಕ ಅನಿಲ್ ತಿಳಿಸಿದರು.

ಹೆಚ್.ಡಿ.ಕೋಟೆ ಮತ್ತು ಸರಗೂರು ಪತ್ರಕರ್ತರ ಸಂಘದಿಂದ ಮೈಸೂರಿನ ಲಲಿತ ಮಹಲ್‌ನಲ್ಲಿ ನಡೆದ ಪತ್ರಿಕಾ ದಿನಾಚರಣೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪತ್ರಕರ್ತರ ಸಂಘಕ್ಕೆ ಪಟ್ಟಣದ ಕನಕ ಭವನದ ಪಕ್ಕದಲ್ಲಿ ನಿವೇಶನ ಮಂಜೂರು ಮಾಡಿಕೊಡುವ ಮೂಲಕ ತಾಲೂಕಿನ ಪತ್ರಕರ್ತರ ಬಹುದಿನಗಳ ಬೇಡಿಕೆಯನ್ನು ಈಡೇರಿಸಿದ್ದೇನೆ. ಮುಂದಿನ ದಿನಗಳಲ್ಲಿ ಸುಸಜ್ಜಿತವಾದ ಭವನವನ್ನು ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದರು.

ತಾಲೂಕಿಗೆ ಸಂಬಂಧಿಸಿದಂತೆ ಕೆಲವರು ಪತ್ರಕರ್ತರೆಂದು ಹೇಳಿಕೊಂಡು ಮಾಹಿತಿ ಪಡೆಯುತ್ತಾರೆ. ಆದರೆ ಆ ವರದಿ ಯಾವ ಪತ್ರಿಕೆಗಳಲ್ಲೂ ಪ್ರಕಟಗೊಳ್ಳುವುದಿಲ್ಲ. ಹೀಗಾಗಿ ನಕಲಿ ಪತ್ರಕರ್ತರನ್ನು ಮಟ್ಟಹಾಕಬೇಕು ಎಂದರು.



ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ಮಕ್ಕಳನ್ನು ಸನ್ಮಾನಿಸಲಾಯಿತು.

ನನ್ನ ತಂದೆ ರಾಜಕಾರಣಕ್ಕೆ ಬಾರದಂತೆ ನನ್ನನ್ನು ವಿದ್ಯಾಭ್ಯಾಸದತ್ತ ಮುನ್ನಡೆಸುತ್ತಿದ್ದರು. ಆದರೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಒತ್ತಡದಿಂದಾಗಿ ನನ್ನನ್ನು ಚುನಾವಣೆಗೆ ಸ್ಪರ್ಧಿಸುವಂತೆ ನನ್ನ ತಂದೆ ಚಿಕ್ಕಮಾದು ಅವರು ಸೂಚಿಸಿದ್ದರಿಂದ ನಾನಿಂದು ಶಾಸಕನಾಗಿದ್ದೇನೆ ಎಂದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಪ್ರಸ್ತುತ ಎಐ ತಂತ್ರಜ್ಞಾನ ಗಮನಿಸಿದರೆ ಮುಂದೊಂದು ದಿನ ಪತ್ರಕರ್ತರಿಲ್ಲದ ಪತ್ರಿಕೋದ್ಯಮ ಸೃಷ್ಟಿಯಾಗುವ ಮುನ್ಸೂಚನೆ ಇಂದೇ ಕಾಣುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಸ್ತುತ ಕಾಲಘಟ್ಟದಲ್ಲಿ ಕೆಲ ದೃಶ್ಯ ಮಾಧ್ಯಮಗಳಲ್ಲಿ ಎಐ ತಂತ್ರಜ್ಞಾನ ಅಳವಡಿಸಿಕೊಂಡು ನಿರೂಪಣೆ ಮಾಡುತ್ತಿರುವುದು ಕಂಡು ಬಂದಿದ್ದು ಇದನ್ನು ಗಮನಿಸಿದಾಗ ಈ ಮೇಲಿನ ಆತಂಕ ಎದುರಾಗಿದೆ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ಪತ್ರಕರ್ತರು ಜವಾಬ್ದಾರಿ ಅರಿತು ಕೆಲಸ ಮಾಡಬೇಕು. ಅಂತಹವರಿಗೆ ಸಮಾಜದಲ್ಲಿ ದೊಡ್ಡ ಗೌರವ ದೊರೆಯಲಿದೆ. ಪತ್ರಕರ್ತರು ಬರೆದ ಲೇಖನಗಳಿಂದ ಸಮಾಜಕ್ಕೆ ಒಳಿತಾಗುವಂತ ಕೆಲಸಗಳು ನಡೆಯಬೇಕು. ಅಂತಹ ಲೇಖನಗಳು ಹೆಚ್ಚಿನ ಪ್ರಮಾಣದಲ್ಲಿ ಈ ಸಮಾಜಕ್ಕೆ ಅಗತ್ಯವಿದೆ ಎಂದರು.

ಶಾಸಕರ ಪತ್ನಿ ಸೌಮ್ಯ ಅನಿಲ್ ಮಾತನಾಡಿದರು. ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು ಮಾತನಾಡಿ, ಪತ್ರಕರ್ತರ ಸಂಘಕ್ಕೆ ನಿವೇಶನ ಮಂಜೂರು ಮಾಡಿದ ಶಾಸಕ ಅನಿಲ್ ಅವರಿಗೆ ತಾಲೂಕು ಪತ್ರಕರ್ತರ ಸಂಘದ ವತಿಯಿಂದ ಧನ್ಯವಾದ ತಿಳಿಸಿದರು. ಈ ವೇಳೆ ತಾಲೂಕಿನ ಪ್ರತಿಭಾನ್ವಿತ ಮಕ್ಕಳಿಗೆ ಹಾಗೂ ಪತ್ರಕರ್ತರ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಶಾಸಕರ ಪತ್ನಿ ಸೌಮ್ಯ ಅನಿಲ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ನಿರ್ಮಾಪಕ ಸಂದೇಶ್, ನಟ ಚಂದನ್ ಶೆಟ್ಟಿ, ಸುಂದರ್ ವೀಣಾ, ಜಿಲ್ಲಾ ಪತ್ರಕರ್ತರ ಸಂಘದ ಕಾರ್ಯದರ್ಶಿ ನಾರಾಯಣ್, ತಾಲೂಕು ಉಪಾಧ್ಯಕ್ಷ ಮಹೇಶ್, ಕಾರ್ಯದರ್ಶಿ ನಾಗಾರಾಮ, ಸಹ ಕಾರ್ಯದರ್ಶಿ ದೊಡ್ಡಸಿದ್ದು, ಖಜಾಂಚಿ ಮಂಜು, ನಿರ್ದೇಶಕರಾದ ರೇಣುಕಾ, ಪುಟ್ಟರಾಜು, ರವಿಕುಮಾರ್ ಆರಾಧ್ಯ, ಜಶೀಲಾ, ಜಿ.ರವಿಕುಮಾರ್, ರಂಗರಾಜು, ನಾಗೇಶ್, ಸದಸ್ಯರು ಹಾಜರಿದ್ದರು.

ಅಭಿವೃದ್ಧಿ ನಿರಂತರ ಪ್ರಕ್ರಿಯೆ: ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ

ವರುಣ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳ ಜನಸಂಪರ್ಕ ಸಭೆಯಲ್ಲಿ ಡಾ.ಯತೀಂದ್ರ

ತಿ.ನರಸೀಪುರ, ಜು.31– ಅಭಿವೃದ್ಧಿ ನಿರಂತರ ಪ್ರಕ್ರಿಯೆಯಾಗಿರುವುದರಿಂದ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಹೇಳಿದರು.



ಜನಸಂಪರ್ಕ ಸಭೆಯಲ್ಲಿ ಎಂಎಲ್‌ಸಿ ಡಾ.ಯತೀಂದ್ರ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ವರುಣ ಕ್ಷೇತ್ರ ವ್ಯಾಪ್ತಿಯ ಡಣಾಯಕನಪುರ, ಕೂಡ್ಲೂರು, ಮನ್ನೇಹುಂಡಿ, ಕಿರಗಸೂರು, ಹುಣಸೂರು ಹಾಗೂ ಬಿಲಿಗೆರೆ ಹುಂಡಿ ಗ್ರಾಮಗಳಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು.

ಅಭಿವೃದ್ಧಿ ಒಂದು ನಿರಂತರ ಪ್ರಕ್ರಿಯೆ. ಕ್ಷೇತ್ರದಲ್ಲಿ ನಿರಂತರವಾಗಿ ಅಭಿವೃದ್ಧಿ ಕಾಮಗಾರಿ ಮಾಡಿದರೂ ಸಣ್ಣಪುಟ್ಟ ಕಾಮಗಾರಿ ಬಾಕಿ ಉಳಿದಿರುವುದು ಸಹಜ. ಸರ್ಕಾರ ಹೊಸ ಕಾಮಗಾರಿಗೆ ಹಣ ಬಿಡುಗಡೆ ಮಾಡುತ್ತಿದೆ. ಕಾಮಗಾರಿಗಳೂ ಹೊಸದಾಗಿರುತ್ತವೆ. ಕ್ಷೇತ್ರಕ್ಕೆ ಅಗತ್ಯವಿರುವ ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸಲು ಅನುದಾನ ಬಳಕೆ ಮಾಡಲಾಗುತ್ತದೆ ಎಂದರು.

ಡಣಾಯಕನಪುರದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನ ಶಿಥಿಲಗೊಂಡಿದ್ದು, ಸಂಪೂರ್ಣವಾಗಿ ಕೆಡವಿ ಹೊಸದಾಗಿ ನಿರ್ಮಿಸಿಕೊಡುವಂತೆ ಗ್ರಾಮಸ್ಥರು ಮಾಡಿದ ಮನವಿಗೆ ಸ್ಪಂದಿಸಿದ ಯತೀಂದ್ರ ಹಳೆಯ ಕಟ್ಟಡ 25 ರಿಂದ 30 ವರ್ಷ ಹಳೆಯದಾಗಿದ್ದರೆ ಕೆಡವಿ ಎಸ್ಟಿಮೇಟ್ ಮಾಡಿ, ಈಗಾಗಲೇ ಕಟ್ಟಡ ದುರಸ್ತಿಗಾಗಿ ನೀಡಲಾಗಿರುವ ಅನುದಾನ 5 ಲಕ್ಷ ಬಳಕೆ ಮಾಡದೇ ಇಟ್ಟುಕೊಳ್ಳಿ. ಉಳಿಕೆ ಹಣ ಬಿಡುಗಡೆ ಮಾಡಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು.

ಗ್ರಾಮದಲ್ಲಿ ಗ್ಯಾರಂಟಿ ಯೋಜನೆಗೆ ಸೇರ್ಪಡೆಗೊಳ್ಳದ ಫಲಾನುಭವಿಗಳನ್ನು ಗುರುತಿಸಿ ಸಮಸ್ಯೆ ಆಲಿಸಿ ಯೋಜನೆ ವ್ಯಾಪ್ತಿಗೆ ಸೇರಿಸುವಂತೆ ಗ್ಯಾರಂಟಿ ಸಮಿತಿ ಸದಸ್ಯರಿಗೆ ಸೂಚಿಸಿದ ಯತೀಂದ್ರ ನೀವು ಅಧಿಕಾರಿಗಳನ್ನಿಡಿದು ಯೋಜನೆ ವ್ಯಾಪ್ತಿಗೆ ಫಲಾನುಭವಿಗಳನ್ನು ಸೇರಿಸಲು ಸಾಧ್ಯವಾಗದಿದ್ದರೆ ನಾನೇ ಮಾಡಿಸುತ್ತೇನೆ ಎಂದರು.

ಮನ್ನೇಹುಂಡಿಯಲ್ಲಿ ಪಡಿತರ ವಿತರಣೆ ಸಮರ್ಪಕವಾಗಿ ಆಗುತ್ತಿಲ್ಲ. ಒಂದು ದಿನ ಹೆಬ್ಬೆಟ್ಟು ಪಡೆದು 15 ದಿನ ಬಿಟ್ಟು ಪಡಿತರ ವಿತರಿಸುತ್ತಿದ್ದಾರೆ. ಇದು ಹಳೆಯ ಸಮಸ್ಯೆಯಾಗಿದ್ದು, ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಸಮಸ್ಯೆ ಬಗೆಹರಿದಿಲ್ಲ. ಹಾಗಾಗಿ ನ್ಯಾಯಬೆಲೆ ಅಂಗಡಿ ಮಾಲೀಕತ್ವವನ್ನು ಸ್ಥಳೀಯರಿಗೆ ನೀಡುವಂತೆ ಗ್ರಾಮಸ್ಥರು ತಿಳಿಸಿದರು.

ಇದಕ್ಕೆ ಸ್ಪಂದಿಸಿದ ಯತೀಂದ್ರ ಈ ಬಗ್ಗೆ ಅನೇಕ ದೂರುಗಳಿರುವುದರಿಂದ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘ ಅಥವಾ ಹಾಲಿನ ಡೈರಿಗೆ ಪಡಿತರ ವಿತರಣೆಯನ್ನು ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮದ ಕೆರೆ, ರಸ್ತೆ, ಚರಂಡಿ ಅಭಿವೃದ್ಧಿಗೆ ಕುರುಬ ಸಂಘದ ಅಧ್ಯಕ್ಷ ಮಹೇಶ್ ಮನವಿ ಸಲ್ಲಿಸಿದರು. ಗ್ರಾಮದ ಕನಕ ಭವನ ತುಂಬಾ ಚಿಕ್ಕದಾಗಿದೆ. ಭವನದ ಪಕ್ಕದಲ್ಲಿರುವ ಜಾಗ ನೀಡಲು ದಾನಿಗಳು ಮುಂದೆ ಬಂದಿದ್ದಾರೆ. ಊಟದ ಹಾಲ್ ನಿರ್ಮಾಣಕ್ಕೆ ಅನುದಾನ ನೀಡುವಂತೆ ಮನವಿ ಸಲ್ಲಿಸಿದರು. ಗ್ರಾಮದಲ್ಲಿ ಸ್ಮಶಾನ ಸಮಸ್ಯೆ ಎದುರಾಗಿದೆ. 2 ಕಿಮಿ ನಡೆದು ಹೋಗಬೇಕಿರುವುದರಿಂದ ಸರ್ವೆ ನಂ.144ರಲ್ಲಿ ಒಂದು ಎಕರೆ ಜಾಗ ಕೊಡಿಸಲು ಮನವಿ ಸಲ್ಲಿಸಲಾಯಿತು. ಕೆಎಸ್‌ಆರ್‌ಟಿಸಿ ಡಿಪೋಗೆ 15 ಎಕರೆ, ತೆಂಗು ಮತ್ತು ನಾರು ಅಭಿವೃದ್ಧಿ ನಿಗಮಕ್ಕೆ 5 ಎಕರೆ ಕೊಡಲಾಗಿದೆ. ಅದರಲ್ಲಿ 1 ಎಕರೆ ಕಡಿಮೆ ಮಾಡಿ ಸ್ಮಶಾನಕ್ಕೆ ನೀಡುವಂತೆ ಯತೀಂದ್ರ ಅಧಿಕಾರಿಗಳಿಗೆ ಸೂಚಿಸಿದರಾದರೂ ಅಲ್ಲಿ ಜಾಗ ನೀಡಲು ತಾಂತ್ರಿಕ ಸಮಸ್ಯೆ ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಹೈನೋದ್ಯಮಕ್ಕೆ ನೀಡಿರುವ ಜಾಗದಲ್ಲಿ 1 ಎಕರೆ ಕಡಿಮೆ ಮಾಡಿ ಗ್ರಾಮಸ್ಥರ ಸ್ಮಶಾನಕ್ಕೆ ಜಾಗಕೊಡಿ ಎಂದು ಆದೇಶಿಸಿದರು.

ಈ ವೇಳೆ ಗ್ರಾಪಂ ವ್ಯಾಪ್ತಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿ ಭವ್ಯಶ್ರೀ, ಗೀತಾ ಹಾಗೂ ಡಿ.ಸಿ.ಜಯಂತ್ ಅವರಿಗೆ ಯತೀಂದ್ರ ಪ್ರೋತ್ಸಾಹ ಧನ ವಿತರಿಸಿದರು.

ಕಿರಗಸೂರು ಗ್ರಾಪಂ ಅಧ್ಯಕ್ಷೆ ನಾಗರತ್ನಮ್ಮ, ಮಾಜಿ ಅಧ್ಯಕ್ಷೆ ಜ್ಯೋತಿ, ಚಂದ್ರಮ್ಮ, ಮಾಜಿ ಉಪಾಧ್ಯಕ್ಷ ಮಹಾದೇವ, ಪಿಡಿಓ ಧರಣೇಶ್, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹಾದೇವಣ್ಣ, ತಾಲೂಕು ಕುರುಬರ ಸಂಘದ ನಿರ್ದೇಶಕ ಅರುಣ್ ಕುಮಾರ್, ಬೋರ್‌ವೆಲ್ ಗುತ್ತಿಗೆದಾರ ಪರಶಿವ, ತಾಪಂ ಮಾಜಿ ಸದಸ್ಯ ರಮೇಶ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಹುಣಸೂರು ಬಸವಣ್ಣ, ಡಣಾಯಕನಪುರ ಸೋಮಣ್ಣನಾಯ್ಕ, ಕಾಂಗ್ರೆಸ್ ಮುಖಂಡ ಡಿ.ಆರ್.ಮೂರ್ತಿ, ಎಪಿಎಂಸಿ ಮಾಜಿ ಅಧ್ಯಕ್ಷ ಅನಿಲ್ ಕುಮಾರ್, ಸುನೀಲ್ ಬೋಸ್ ಯುವ ಬ್ರಿಗೇಡ್ ಅಧ್ಯಕ್ಷ ಕುಮಾರ್ ರಾಮೇಗೌಡ, ಗೋಪಾಲ್ ರಾಜ್, ಪುರಸಭಾ ಮಾಜಿ ಅಧ್ಯಕ್ಷ ಸೋಮು, ಸದಸ್ಯರಾದ ಗಣೇಶ್, ಗುರುಸ್ವಾಮಿ, ಎಲ್‌ಐಸಿ ನಿಂಗರಾಜು, ಮಾಜಿ ಸದಸ್ಯ ಎಂ.ಮಿಥುನ್, ಗರ್ಗೇಶ್ವರಿ ಹಾಳೇಗೌಡ, ಮಹದೇವ, ಮುಖಂಡ ವಸಂತ, ಪಿ.ಸ್ವಾಮಿನಾಥ್‌ಗೌಡ, ಅಮಾವಾಸ್ಯೆಗೌಡ, ರಾಜೀವ, ಆಲಗೂಡು ನಾಗರಾಜು ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಕಾರಿಗೆ ಅಡ್ಡ ಮಲಗಿದ ಕಾರ್ಮಿಕರು

ಕಿರಗಸೂರಲ್ಲಿ ಜನಸಂಪರ್ಕ ಸಭೆ ಮುಗಿಸಿ ಹೊರಟ ಯತೀಂದ್ರ ಅವರ ಕಾರಿಗೆ ಅಡ್ಡ ಮಲಗಿದ ಕೆಎಸ್‌ಐಸಿ ಕಾರ್ಮಿಕರು ನ್ಯಾಯ ದೊರಕಿಸಿಕೊಡುವಂತೆ ಮನವಿ ಮಾಡಿದರು. ಕೆಎಸ್‌ಐಸಿ ಫ್ಯಾಕ್ಟರಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸುವುದರಿಂದ ನಾವು ಕೆಲಸ ಕಳೆದು ಕೊಳ್ಳಬೇಕಾಗುತ್ತದೆ. ಹಾಗಾಗಿ ಕ್ರೀಡಾಂಗಣಕ್ಕೆ ಬೇರೆ ಜಾಗ ಗುರುತಿಸಿ ನಮ್ಮ ಕೆಲಸ ಉಳಿಸಿಕೊಡಿ ಎಂದು ಹಲವು ಕಾರ್ಮಿಕರು ಯತೀಂದ್ರ ಅವರ ಕಾರಿಗೆ ಅಡ್ಡ ಮಲಗಿ ಮನವಿ ಮಾಡಿದರು.

ಕಾರ್ಮಿಕರ ಸಮಸ್ಯೆ ಆಲಿಸಿದ ಯತೀಂದ್ರ ಈಗಾಗಲೇ ಕ್ರೀಡಾಂಗಣ ಜಾಗದ ಗುರುತಿಸುವಿಕೆ ಪ್ರಕ್ರಿಯೆ ಮುಗಿದಿದೆ. ಕ್ರೀಡಾಂಗಣ ನಿರ್ಮಾಣದಿಂದ ಕಾರ್ಮಿಕರಿಗೆ ಯಾವುದೇ ತೊಂದರೆಯಾಗುವುದಿಲ್ಲ. ಈ ಸಂಬಂಧ ತಹಸೀಲ್ದಾರ್ ಅವರೊಂದಿಗೆ ಮಾತನಾಡುತ್ತೇನೆ ಎಂದು ಭರವಸೆ ನೀಡಿದರು.

ಮೈಸೂರು ಮಿತ್ರ

'ಉತ್ತಮ ನಾಳೆಗಾಗಿ ಮರು ಬಳಕೆ ಮಾಡಿ' ಪಾಲಿಕೆ ಸದುದ್ದೇಶದ ಪ್ಲಾಸ್ಟಿಕ್ ಪೆಟ್ ಬಾಟಲ್ ಮರು ಬಳಕೆ ಯೋಜನೆಗೆ ಎಳ್ಳು-ನೀರು

ಸ್ವಚ್ಛತೆ ಕಾಪಾಡಿಕೊಳ್ಳುವ ಉದ್ದೇಶದಿಂದ ಪ್ರಾರಂಭಿಸಿದ ಯೋಜನೆ ಅನುದಾನ ಕೊರತೆ ಕಾರಣ ಸ್ಥಗಿತ





ನಗರಪಾಲಿಕೆ ಕಚೇರಿ ಎದುರು ಪ್ರಾಯೋಗಿಕವಾಗಿ ಪ್ಲಾಸ್ಟಿಕ್ ಪೆಟ್ ಬಾಟಲ್ ಮರು ಬಳಕೆ ಯಂತ್ರಕ್ಕೆ ಪ್ಲಾಸ್ಟಿಕ್ ಬಾಟಲ್ ಹಾಕುವ ಮೂಲಕ ಅಂದಿನ ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್ 'ಪೆಟ್ ಬಾಟಲ್ ಯೋಜನೆ'ಗೆ ಚಾಲನೆ ನೀಡಿದ್ದರು.

ಮೈಸೂರು, ಜು.31(ಎಂಕೆ)- 'ಉತ್ತಮ ನಾಳೆಗಾಗಿ ಮರು ಬಳಕೆ ಮಾಡಿ' ಶೀರ್ಷಿಕೆಯಡಿ ಪ್ರೋತ್ಸಾಹ ಧನದೊಂದಿಗೆ ಮೈಸೂರು ನಗರ ಪಾಲಿಕೆ ರೂಪಿಸಿದ್ದ 'ಪ್ಲಾಸ್ಟಿಕ್ ಪೆಟ್ ಬಾಟಲ್ ಮರು ಬಳಕೆ' ಯೋಜನೆ ಕಣ್ಮರೆಯಾಗಿದೆ...!

ವಾರದ ಹಿಂದೆಯಷ್ಟೇ ದೇಶದ ಸೂಪರ್ ಸ್ವಚ್ಛ ನಗರ ಲೀಗ್‌ನಲ್ಲಿ 3ನೇ ಸ್ಥಾನ ಪಡೆದ ಮೈಸೂರು ನಗರದಲ್ಲಿ ಎಲ್ಲೆಂದರಲ್ಲಿ ಬಿಸಾಡುವ ಪ್ಲಾಸ್ಟಿಕ್ (ಕುಡಿಯುವ ನೀರು, ತಂಪು ಪಾನೀಯದ ಪ್ಲಾಸ್ಟಿಕ್ ಬಾಟಲ್‌ಗಳು-ಪೆಟ್ ಬಾಟಲ್) ಬಾಟಲ್‌ಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ರೂಪಿಸಿದ್ದ ಯೋಜನೆ, ಇಚ್ಛಾಸಕ್ತಿ ಮತ್ತು ಅನುದಾನದ ಕೊರತೆಯಿಂದ ಪ್ರಯೋಗಕ್ಕೆ ಮಾತ್ರವೇ ಸೀಮಿತವಾಗಿದೆ.

ವರ್ಷದ ಹಿಂದೆ ನಗರಪಾಲಿಕೆ ಕಚೇರಿ ಎದುರು ಪ್ರಾಯೋಗಿಕವಾಗಿ ಪ್ಲಾಸ್ಟಿಕ್ ಪೆಟ್ ಬಾಟಲ್ ಮರು ಬಳಕೆ ಯಂತ್ರಕ್ಕೆ ಪ್ಲಾಸ್ಟಿಕ್ ಬಾಟಲ್ ಹಾಕುವ ಮೂಲಕ ಅಂದಿನ ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್ ಚಾಲನೆ ನೀಡಿದ್ದರು. ಅಲ್ಲದೆ ಬಸ್ ನಿಲ್ದಾಣ ಸೇರಿದಂತೆ ಜನಸಂದಣಿ ಹೆಚ್ಚಾಗಿರುವ ಸ್ಥಳಗಳಲ್ಲಿ ಈ ಯಂತ್ರಗಳನ್ನು ಇರಿಸಲಾಗುವುದು ಎಂದಿದ್ದರು. ಆದರೆ, ಈ ಯೋಜನೆ ಅನುದಾನವಿಲ್ಲದೆ ಸ್ಥಗಿತಗೊಂಡಿದೆ.

ನಗರದಲ್ಲಿ ನಿತ್ಯ ಸುಮಾರು 500 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ಅದರಲ್ಲಿ ಶೇ.25ರಷ್ಟು ಪ್ಲಾಸ್ಟಿಕ್ ತ್ಯಾಜ್ಯವಾಗಿದೆ. ಈ ಹೊರೆ ಕಡಿಮೆ ಮಾಡಲು ಹಾಗೂ ಸ್ವಚ್ಛತೆ ಜಾಗೃತಿಗಾಗಿ ಎರಡು ಪ್ಲಾಸ್ಟಿಕ್ ಬಾಟಲ್‌ಗೆ 1 ರೂ. ಪ್ರೋತ್ಸಾಹ ಧನ ನೀಡುವ ಮೂಲಕ ಜನರಿಂದಲೇ ಬಾಟಲಿಗಳನ್ನು ಸಂಗ್ರಹಿಸಿ, ಪ್ರತಿಯಾಗಿ ಹಣ ನೀಡುವ ಯೋಜನೆ ಇದಾಗಿತ್ತು ಆದರೆ, ಚಾಲನೆ ಕೊಟ್ಟು ವರ್ಷ ಕಳೆದರೂ ಯೋಜನೆ ಮಾತ್ರ ವಿಸ್ತರಣೆ ಆಗಿಲ್ಲ.

ಆರಂಭವಾಗದ ಬಟ್ಟೆ ಬ್ಯಾಗ್ ಯಂತ್ರ: ಹಾಗೆಯೇ ಪ್ಲಾಸ್ಟಿಕ್ ಚೀಲಗಳ ಬಳಕೆ ತಗ್ಗಿಸಲು ಹಣ ನೀಡಿದರೆ ಬಟ್ಟೆ ಬ್ಯಾಗ್ ವಿತರಿಸುವ ಯಂತ್ರಗಳನ್ನು ಅಳವಡಿಸಲು ನಗರಪಾಲಿಕೆ ಉದ್ದೇಶಿಸಿದ್ದು, ಅದೂ ಆರಂಭವಾಗಿಲ್ಲ. ಯುಪಿಐ ಮೂಲಕ ಯಂತ್ರದಲ್ಲಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ 10 ರೂ.ಪಾವತಿಸಿದರೆ ಅಥವಾ 10 ರೂ. ಇಲ್ಲವೇ 5 ರೂ.ಗಳ ಎರಡು ನಾಣ್ಯ ಹಾಕಿದರೆ ಬ್ಯಾಗ್ ನೀಡುವ ಈ ಯೋಜನೆಯಂತೂ ಪ್ರಾಯೋಗಿಕ ಹಂತದಲ್ಲಿಯೇ ಸ್ಥಗಿತವಾಗಿದೆ.

ನಂಬರ್ 1 ಕನಸಿನ ಮಾತು...!: ನಗರದ ಸ್ವಚ್ಛತೆಯ ದೃಷ್ಟಿಯಿಂದ ಯಾವುದೇ ಜನಪರ ಯೋಜನೆಗಳನ್ನು ಕೈಗೊಳ್ಳದ ಮೈಸೂರು ನಗರಪಾಲಿಕೆ ಮತ್ತೆ ದೇಶದ ನಂಬರ್ 1 ಸ್ವಚ್ಛ ನಗರ ಪಟ್ಟ ಧರಿಸುವುದು ಕನಸಿನ ಮಾತಾಗಿದೆ. ನಗರದಲ್ಲಿ ಕಂಡ ಕಂಡಲ್ಲಿ ಕಸ, ಪ್ಲಾಸ್ಟಿಕ್ ವಸ್ತುಗಳ ರಾಶಿ ಬಿದ್ದಿರುತ್ತದೆ. ವ್ಯವಸ್ಥಿತವಾಗಿ ಕಸ ವಿಲೇವಾರಿ ಮಾಡಲು ಹೆಣಗಾಡುತ್ತಿರುವ ನಗರಪಾಲಿಕೆಯಿಂದ ಹೊಸ ಯೋಜನೆಗಳನ್ನು ಕಾರ್ಯರೂಪಗೊಳಿಸಲು ಸಾಧ್ಯವಿಲ್ಲ ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು ಕಿಡಿಕಾರಿದ್ದಾರೆ.

'ಪೆಟ್ ಬಾಟಲ್ ಮರು ಬಳಕೆ' ಹಾಗೂ 'ಬಟ್ಟೆ ಬ್ಯಾಗ್ ನೀಡುವ' ಯೋಜನೆಗಳನ್ನು ವ್ಯವಸ್ಥಿತವಾಗಿ ಜಾರಿಗೊಳಿಸಿದ್ದರೆ, ಪ್ರವಾಸಿ ತಾಣಗಳು, ದೇವಾಲಯ, ಮಾರುಕಟ್ಟೆ ಪ್ರದೇಶಗಳಲ್ಲಿ ಸ್ವಚ್ಛತೆ ಜೊತೆಗೆ ಜನರಲ್ಲಿಯೂ ಸ್ವಚ್ಛತೆ ಮತ್ತು ಪ್ಲಾಸ್ಟಿಕ್ ಪದಾರ್ಥಗಳನ್ನು ಬಳಸಬಾರದೆಂಬ ಜಾಗೃತಿ ಮೂಡಿಸಿದಂತಾಗುತ್ತಿತ್ತು. ಆದರೆ, ಈ ಎರಡೂ ಇ-ಶೌಚಾಲಯದಂತೆ ಪ್ರಯೋಗವಾದವೇ ಹೊರತು ಜಾರಿಯಾಗಲಿಲ್ಲ ಎಂದು ಬೇಸರ ಹೊರಹಾಕಿದ್ದಾರೆ.

ಆ.5 ರಂದು ಬೆಂಗಳೂರಲ್ಲಿ ರಾಹುಲ್ ಗಾಂಧಿ ನೇತೃತ್ವದಲ್ಲಿ ಮತಗಳ್ಳತನದ ವಿರುದ್ಧ ಪ್ರತಿಭಟನೆ



ಬೆಂಗಳೂರು, ಜು.31- ಮತಗಳ್ಳತನದ ವಿರುದ್ಧ ರಾಹುಲ್ ಗಾಂಧಿ ನೇತೃತ್ವದಲ್ಲಿ ಆ.5 ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುವುದು. ನಂತರ ಚುನಾವಣಾ ಆಯೋಗದ ಕಚೇರಿಗೆ ತೆರಳಿ ಮನವಿಪತ್ರ ಸಲ್ಲಿಸಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿ ಹಾಗೂ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮಾಧ್ಯಮಗಳೊಂದಿಗೆ ಶಿವಕುಮಾರ್ ಅವರು ಗುರುವಾರ ಮಾತನಾಡಿದರು. ಮತದಾರರ ಹಕ್ಕು, ಸಂವಿಧಾನದ ರಕ್ಷಣೆ ಮಾಡಬೇಕಿದೆ. ಕರ್ನಾಟಕದ ಭೂಮಿಯಿಂದಲೇ ಈ ಹೋರಾಟ ಪ್ರಾರಂಭ ಮಾಡಿದರೆ ಹೆಚ್ಚಿನ ಶಕ್ತಿ ದೊರೆಯುತ್ತದೆ ಎಂದು ರಾಹುಲ್ ಗಾಂಧಿ ಇಲ್ಲಿಂದಲೇ ಪ್ರಾರಂಭ ಮಾಡುತ್ತಿದ್ದಾರೆ. ವಿಧಾನಸಭೆ, ಲೋಕಸಭೆ ಚುನಾವಣೆ ವೇಳೆ ಆದಂತಹ ಹಲವಾರು ಲೋಪದೋಷಗಳನ್ನು ನಮ್ಮ ನಾಯಕರು ಎತ್ತಿಹಿಡಿಯಲಿದ್ದಾರೆ ಎಂದು ತಿಳಿಸಿದರು.

ನಮ್ಮ ಸರ್ಕಾರವೇ ಮಾಡಿರುವ ನಿಯಮಗಳು ಹಾಗೂ ನ್ಯಾಯಾಲಯ ನೀಡಿರುವ ನಿರ್ದೇಶನದ ಮೇರೆಗೆ ಪ್ರತಿಭಟನೆ ನಡೆಸಲಾಗುವುದು. ಮುಖಂಡರು, ಕಾರ್ಯಕರ್ತರು ಈ ಪ್ರತಿಭಟನೆಯಲ್ಲಿ ಭಾಗವಹಿಸಬೇಕು ಎಂದು ತಿಳಿಸಲಾಗಿದೆ. ರಾಜ್ಯದ ಎಲ್ಲಾ ಬ್ಲಾಕ್‌ಗಳಿಂದ ಪ್ರತಿನಿಧಿಗಳು ಹಾಜರಾಗಬೇಕು ಎಂದು ಆಹ್ವಾನ ನೀಡಲಾಗಿದೆ ಎಂದರು.

ಕರಡು ಮತದಾರರ ಪಟ್ಟಿಯ ಬಗ್ಗೆ ಏಕೆ ಕಾಂಗ್ರೆಸ್ ಈ ಮೊದಲೇ ಆಕ್ಷೇಪಣೆ ಸಲ್ಲಿಸಲಿಲ್ಲ ಎಂದಾಗ, ನಾವು ಆಕ್ಷೇಪಣೆ ಸಲ್ಲಿಸಿದ್ದೆವು. ಆದರೆ, ಚುನಾವಣಾ ಆಯೋಗ ಅದನ್ನು ಸ್ವೀಕರಿಸಲಿಲ್ಲ. ಮಹದೇವಪುರ ಕ್ಷೇತ್ರದಲ್ಲಿ ಅಭ್ಯರ್ಥಿ ನಾಗೇಶ್ ಅವರು ಹಾಗೂ ಅವರ ಮಗ ದಾಖಲೆಗಳನ್ನು ತೋರಿಸಿದರು. ದಿನೇಶ್ ಗುಂಡೂರಾವ್ ಕ್ಷೇತ್ರ ಗಾಂಧಿನಗರದಲ್ಲೂ ಇದೇ ರೀತಿ ನಡೆದಿದೆ. ಇಲ್ಲಿ ಒಂದು ವಾರ್ಡ್‌ನಲ್ಲಿ 7 ಸಾವಿರದಷ್ಟು ಮತದಾರರ ಸೇರ್ಪಡೆಯಾಗಿದೆ ಎಂದರು.

ಪಾದಯಾತ್ರೆ ಎಲ್ಲಿಂದ ಎಲ್ಲಿಯವರೆಗೆ ಇರಲಿದೆ ಎಂಬುದಕ್ಕೆ ನಾವು ಪಾದಯಾತ್ರೆ ಮಾಡುತ್ತಿಲ್ಲ. ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿ ನಮ್ಮ ವಿಚಾರ ಜನರಿಗೆ ತಿಳಿಸುತ್ತೇವೆ. ನಂತರ ಐದಾರು ನಾಯಕರು ಚುನಾವಣಾ ಆಯೋಗ ಕಚೇರಿಗೆ ಹೋಗಿ ಮನವಿ ಸಲ್ಲಿಸುತ್ತೇವೆ ಎಂದರು.

ನಡಿಗೆ ಮೂಲಕ ಹೋಗುತ್ತೀರಾ ಎಂದು ಕೇಳಿದಾಗ, ಪೊಲೀಸರು ವಾತಾವರಣ ನೋಡಿ ಯಾವ ಸಲಹೆ ನೀಡುತ್ತಾರೋ ಆ ರೀತಿ ಮಾಡುತ್ತೇವೆ. ನಡಿಗೆ ಮೂಲಕ ಆದರೂ ಹೋಗಬಹುದು ಅಥವಾ ವಾಹನದಲ್ಲಿಯಾದರೂ ತೆರಳಬಹುದು ಎಂದರು.

ಯಾವ ಕ್ಷೇತ್ರಗಳ ದಾಖಲೆ ಬಿಡುಗಡೆ ಮಾಡುತ್ತೀರಾ ಎಂದಾಗ, ಈ ವಿಚಾರವನ್ನು ರಾಹುಲ್ ಗಾಂಧಿ ಅವರು ತೀರ್ಮಾನ ಮಾಡಿ ಬಹಿರಂಗಪಡಿಸಿದ್ದಾರೆ. ನಾನು ಈ ವಿಚಾರವಾಗಿ ಏನು ಹೇಳುವುದಿಲ್ಲ ಎಂದರು.

ಮೈಸೂರು-ಕುಶಾಲನಗರ ಹೆದ್ದಾರಿ

ಎರಡನೇ ಹಂತದ ಯೋಜನೆಗೆ ಶೀಘ್ರ ಚಾಲನೆ

●ಸಂಸದ ಯದುವೀರ್ ವಿಶ್ವಾಸ ●ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿಗೆ ಮನವಿ ಸಲ್ಲಿಕೆ



ಸಂಸದ ಯದುವೀರ್ ನವದೆಹಲಿಯಲ್ಲಿ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಸಲ್ಲಿಸಿದರು.

ಮೈಸೂರು, ಜು.31- ಮೈಸೂರು-ಕುಶಾಲನಗರ ಹೆದ್ದಾರಿಯ ಎರಡನೇ ಹಂತದ ಯೋಜನೆಗೆ ಶೀಘ್ರದಲ್ಲೇ ಚಾಲನೆ ದೊರಕುವ ವಿಶ್ವಾಸವಿದೆ ಎಂದು ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಅವರು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದ್ದು, ಈ ಬಗ್ಗೆ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಸಾಂಸ್ಕೃತಿಕ ರಾಜಧಾನಿ ಮೈಸೂರಿಗೆ ಹೆಚ್ಚುವರಿ ಸಂಪರ್ಕ ಸೇವೆ ಕಲ್ಪಿಸಲು ಬದ್ಧವಾಗಿರುವ ಕೇಂದ್ರ ಸರ್ಕಾರ, ಶೀಘ್ರ ಮೈಸೂರು-ಕುಶಾಲನಗರ ಹೆದ್ದಾರಿಯ 2ನೇ ಯೋಜನೆಗೆ ದಿನಾಂಕ ನಿಗದಿಯಾಗಲಿದೆ. 2023ರ ಜುಲೈ 19ರಂದು ಈ ಯೋಜನೆ ಆರಂಭಿಸಲು ಕ್ರಮ ಕೈಗೊಳ್ಳಲಾಗಿತ್ತು. ಎರಡನೇ ಪ್ಯಾಕೇಜ್‌ನಲ್ಲಿ 22.70 ಕಿಲೋ ಮೀಟರ್ ರಸ್ತೆ ನಿರ್ಮಾಣ ಯೋಜನೆ ರೂಪಿಸಲಾಗಿತ್ತು. ಇದಕ್ಕಾಗಿ ಈಗಾಗಲೇ 14.522 ಕಿಲೋ ಮೀಟರ್ ಭೂ ಸ್ವಾಧೀನವಾಗಿದೆ. ಬಾಕಿ 8.178 ಕಿಲೋ ಮೀಟರ್ ಭೂಸ್ವಾಧೀನಕ್ಕೆ ಅರಣ್ಯ ಇಲಾಖೆ ಅನುಮೋದನೆ ಅಗತ್ಯವಿದೆ.

ಯೋಜನೆಗೆ ಚಾಲನೆ ದೊರಕುವ ದಿನಾಂಕ ಘೋಷಣೆಗೆ ಸಚಿವಾಲಯ ಮುಂದಾಗಬೇಕು. ಬಳಿಕ ಕಾಲಮಿತಿಯಲ್ಲಿ ಅರಣ್ಯ ಇಲಾಖೆ ಅನುಮೋದನೆಯನ್ನು ಪಡೆಯಲು ಕ್ರಮ ಕೈಗೊಳ್ಳಲಾಗುವುದು. ಈ ನಿಟ್ಟಿನಲ್ಲಿ ಕೂಡಲೇ ಯೋಜನೆಯ ಆರಂಭದ ದಿನಾಂಕ ಘೋಷಣೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸಚಿವರಾದ ನಿತಿನ್ ಗಡ್ಕರಿ ಅವರಿಗೆ ಮನವಿ ಸಲ್ಲಿಸಿದ್ದೇವೆ. ಅವರು ಸೂಕ್ತ ಕ್ರಮ ಕೈಗೊಳುವ ಭರವಸೆ ನೀಡಿದ್ದಾರೆ ಎಂದು ಯದುವೀರ್ ಮಾಹಿತಿ ನೀಡಿದ್ದಾರೆ.


ಹುಲಿ ಕಾರಿಡಾರ್ ರಕ್ಷಣೆಗೆ ಆದ್ಯತೆ

ಮೈಸೂರು: ಕರ್ನಾಟಕದಲ್ಲಿ ದೀರ್ಘಕಾಲಿನ ಹುಲಿ ಆವಾಸ ಸ್ಥಾನ ಬಲಪಡಿಸಲು ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ ಎಂದು ಸಂಸದ ಯದುವೀರ್ ತಿಳಿಸಿದ್ದಾರೆ.


ಮಹದೇಶ್ವರ ಬೆಟ್ಟಗಳ ಅಭಯಾರಣ್ಯದಲಿ ವನ್ಯಪ್ರಾಣಿಗಳ ಸಾವು, ವನ್ಯಜೀವಿ, ವಿಧಿ ವಿಜ್ಞಾನ, ವಿಷಶಾಸ್ತ್ರದ ಬಗ್ಗೆ ಮಾರ್ಗಸೂಚಿಗಳನ್ನು ಹೊಂದಿರುವ ಬಗ್ಗೆ ಸಂಸತ್ ಅಧಿವೇಶನದಲ್ಲಿ ಪ್ರಶ್ನಿಸಲಾಗಿತ್ತು. ಇದಕ್ಕೆ ಉತ್ತರಿಸಿರುವ ಕೇಂದ್ರ ಅರಣ್ಯ ಸಚಿವರು, ಪ್ರಾಜೆಕ್ಟ್ ಟೈಗರ್ ಯೋಜನೆಯಡಿ ಹುಲಿ ಮೀಸಲು ಪ್ರದೇಶಗಳಲ್ಲಿನ ಆವಾಸ ಸ್ಥಾನ ರಕ್ಷಣೆ, ಜಾಗೃತಿ, ಸಮುದಾಯ ಜಾಗರೂಕತೆಗೆ ಹೆಚ್ಚಿನ ಹಣ ಒದಗಿಸಲಾಗುತ್ತಿದೆ ಎಂದು ವಿವರಣೆ ನೀಡಿರುವುದಾಗಿ ತಿಳಿಸಿದ್ದಾರೆ.

ದಸರಾ ಗಜಪಡೆ ನಿರ್ವಹಣೆಗೆ 70 ಮಂದಿ ನಿಯೋಜನೆ

ಅರಮನೆ ಆವರಣದಲ್ಲಿ ಮೊದಲ ಹಂತದ ಆನೆಗಳ ಮಾವುತ, ಕಾವಾಡಿಗೆ ಶೆಡ್ ನಿರ್ಮಾಣ



ಮೈಸೂರು ಅರಮನೆ ಆವರಣದಲ್ಲಿ ದಸರಾ ಗಜಪಡೆಯ ಮಾವುತ, ಕಾವಾಡಿಗಳ ವಾಸ್ತವ್ಯಕ್ಕೆ ಶೆಡ್ ನಿರ್ಮಿಸುತ್ತಿರುವುದು.



ಅಂಬಾರಿ ಆನೆ ಅಭಿಮನ್ಯು ವಾಸ್ತವ್ಯಕ್ಕೆ ಕೋಡಿ ಸೋಮೇಶ್ವರ ದೇವಾಲಯದ ಬಳಿ ಪ್ರತ್ಯೇಕ ಶೆಡ್ ನಿರ್ಮಿಸಿರುವುದು.

ಮೈಸೂರು, ಜು.31-(ಎಂಟಿವೈ) ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಅಂಬಾರಿ ಆನೆ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 14 ಆನೆಗಳ ನಿರ್ವಹಣೆಗೆ ಅರಣ್ಯ ಇಲಾಖೆ ಮಾವುತ, ಕಾವಾಡಿ ಒಳಗೊಂಡಿರುವ 70 ಮಂದಿಯ ತಂಡ ರಚಿಸಿದ್ದು, ಆ.4ರಂದು ಮೈಸೂರಿಗೆ ಬರುವ ಮೊದಲ ತಂಡದ 9 ಆನೆಗಳ ಮಾವುತ, ಕಾವಾಡಿಗಳ ವಾಸ್ತವ್ಯಕ್ಕೆ ಅರಮನೆ ಆವರಣದಲ್ಲಿ ತಾತ್ಕಾಲಿಕ ಶೆಡ್ ನಿರ್ಮಾಣಕ್ಕೆ ಮುಂದಾಗಿದೆ.

ಪ್ರಸಕ್ತ ಸಾಲಿನ ದಸರಾ ಮಹೋತ್ಸವ ಸೆ.22ರಂದು ಉದ್ಘಾಟನೆಗೊಳ್ಳಲಿದ್ದು, ಅ.2ರಂದು ವಿಶ್ವವಿಖ್ಯಾತ ಜಂಬೂಸವಾರಿ ಮೆರವಣಿಗೆ ಜರುಗಲಿದೆ. ಈ ಬಾರಿ ಚಿನ್ನದ ಅಂಬಾರಿ ಹೊರಲಿರುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ ಮೊದಲ ತಂಡದ 9 ಆನೆಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಎರಡನೇ ತಂಡದಲ್ಲಿ ಬರುವ 5 ಆನೆಗಳನ್ನು ಆಯ್ಕೆ ಮಾಡಲಾಗಿದೆ.

ಪ್ರತಿವರ್ಷದಂತೆ ಈ ಬಾರಿಯೂ 14 ಆನೆಗಳು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿದ್ದು, ಇವೆಲ್ಲವೂ ಅರಮನೆ ಆವರಣದಲ್ಲಿ ಆ.7ರಿಂದ ಅ.4 ಅಥವಾ 5ರವರೆಗೆ ಬೀಡು ಬಿಡಲಿದೆ. ಈ ಗಜಪಡೆಯ ಆರೈಕೆಗೆ ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ನೇತೃತ್ವದಲ್ಲಿ ಎಸಿಎಫ್, ಆರ್‌ಎಫ್‌ಓ, ಡಿಆರ್‌ಎಫ್, ಓರ್ವ ಪಶುವೈದ್ಯ, ಓರ್ವ ಪಶುವೈದ್ಯ ಸಹಾಯಕ, 14 ಮಾವುತರು, 14 ಕಾವಾಡಿಗಳು, ಆನೆಗಳಿಗೆ ಪೌಷ್ಠಿಕ ಆಹಾರ ತಯಾರಿಸಲು 10 ಮಂದಿ, ವಿಶೇಷ ಮಾವುತರು, ಹಾಗೂ ಸಹಾಯಕರ ಜವಾಬ್ದಾರಿ ನಿಬಾಯಿಸುವವರು ಸೇರಿದಂತೆ 70 ಮಂದಿಯನ್ನು ನಿಯೋಜಿಸಲಾಗಿದೆ. ಮೊದಲ ತಂಡ ಮೈಸೂರಿಗೆ ಆಗಮಿಸುತ್ತಿದ್ದಂತೆಯೇ ಆನೆ ಆರೈಕೆ ಮಾಡಲು ನಿಯೋಜಿಸಿರುವ ಎಲ್ಲರೂ ಕಾರ್ಯಪ್ರವೃತ್ತರಾಗಲಿದ್ದಾರೆ. ಆ.7ರಿಂದ ಎರಡನೇ ತಂಡದ ಮಾವುತ, ಕಾವಾಡಿಗಳು ಹೊರತುಪಡಿಸಿ, ಉಳಿದ ಎಲ್ಲರೂ ಅರಮನೆ ಆವರಣದಲ್ಲಿ ದಸರಾ ಗಜಪಡೆ ಆರೈಕೆಯಲ್ಲಿ ನಿರತರಾಗಲಿದ್ದಾರೆ.

24 ಶೆಡ್ ನಿರ್ಮಾಣ: ದಸರಾ ಗಜಪಡೆ ಆಗಮನಕ್ಕೆ ಕೇವಲ ನಾಲ್ಕು ದಿನ ಮಾತ್ರ ಇರುವುದರಿಂದ ಸಿದ್ಧತಾ ಕಾರ್ಯ ಬಿರುಸಾಗಿ ಸಾಗುತ್ತಿದೆ. ಅರಣ್ಯ ಇಲಾಖೆ ಮಾವುತ, ಕಾವಾಡಿ ಹಾಗೂ ಅಡುಗೆ ತಯಾರಕ ಸಿಬ್ಬಂದಿಗಳ ವಾಸ್ತವ್ಯಕ್ಕಾಗಿ 24 ಶೆಡ್‌ಗಳನ್ನು ನಿರ್ಮಿಸುತ್ತಿದೆ. ಅಲ್ಲದೆ, ಪ್ರತಿವರ್ಷದಂತೆ ಅಂಬಾರಿ ಆನೆ ಹಾಗೂ ಒಂದು ಹೆಣ್ಣಾನೆ ವಾಸ್ತವ್ಯಕ್ಕೆ ಪ್ರತ್ಯೇಕ ಶೆಡ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದ್ದು, ಟೆಂಡರ್ ಪಡೆದಿರುವ ಮೈಸೂರಿನ ತಫರುಲ್ ಅಹ್ಮದ್ ಅವರು ಶೆಡ್ ನಿರ್ಮಾಣ ಕಾರ್ಯದಲ್ಲಿ ಮುಂದಾಗಿದ್ದಾರೆ. ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಬಳಿ ಆನೆಗಳ ಪೌಷ್ಠಿಕ ಆಹಾರ ತಯಾರಿಕೆ ಹಾಗೂ ಸ್ಟೋರ್ ರೂಂಗೂ ಪ್ರತ್ಯೇಕ ಶೆಡ್ ನಿರ್ಮಿಸಲಾಗುತ್ತಿದ್ದು, ಆ.4ರೊಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ. ಎರಡನೇ ತಂಡದ ಆನೆಗಳು ಬರುವ ವೇಳೆ ಭುವನೇಶ್ವರಿ ದೇವಾಲಯದ ಸಮೀಪ 5 ಆನೆ, ಮಾವುತ, ಕಾವಾಡಿಗಳ ವಾಸ್ತವ್ಯಕ್ಕೆ ಪ್ರತ್ಯೇಕ ಶೆಡ್ ನಿರ್ಮಿಸಲಾಗುತ್ತದೆ.

ಗಜಪಯಣಕ್ಕೆ ಸಿದ್ಧತೆ: ಪ್ರಸಕ್ತ ಸಾಲಿನ ದಸರಾ ಮಹೋತ್ಸವದ ಮೊದಲ ಕಾರ್ಯಕ್ರಮ ಗಜಪಯಣದ ಮೂಲಕ ಆ.4ರಂದು ಆರಂಭವಾಗಲಿದೆ. ಹುಣಸೂರು ತಾಲೂಕಿನ ವೀರನಹೊಸಳ್ಳಿ ಗೇಟ್ ಬಳಿ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 9 ಆನೆಗಳಿಗೆ ಅಂದು ಮಧ್ಯಾಹ್ನ 12.34ರಿಂದ 12.59ರವರೆಗೆ ಸಲ್ಲುವ ಶುಭ ತುಲಾ (ಅಭಿಜಿನ್) ಲಗ್ನದಲ್ಲಿ ಗಣ್ಯರು ಪುಷ್ಪಾರ್ಚನೆ ಮಾಡುವ ಮೂಲಕ ಗಜಪಯಣಕ್ಕೆ ಚಾಲನೆ ನೀಡಲಿದ್ದಾರೆ. ಬಳಿಕ ನಾಗಾಪುರ ಹಾಡಿ ಸಮೀಪ ಸಭಾ ಕಾರ್ಯಕ್ರಮ ಜರುತ್ತದೆ. ಗಜಪಯಣಕ್ಕೆ ವೀರನಹೊಸಳ್ಳಿ, ನಾಗಾಪುರ ಹಾಡಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರು ಆಗಮಿಸುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ವತಿಯಿಂದ 5 ಸಾವಿರ ಜನರಿಗೆ ಊಟ ವ್ಯವಸ್ಥೆ ಮಾಡಲಾಗುತ್ತಿದೆ. ಈಗಾಗಲೇ ವೇದಿಕೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸ್ಥಳ ಪರಿಶೀಲಿಸಲಾಗಿದ್ದು, ವೀರನಹೊಸಳ್ಳಿ ಗೇಟ್‌ನಿಂದ ಸಭಾ ಕಾರ್ಯಕ್ರಮ ನಡೆಯುವ ಸ್ಥಳದವರೆಗೂ ರಸ್ತೆಯಲ್ಲಿ ತಳಿರು ತೋರಣದಿಂದ ಶೃಂಗರಿಸಲು ಸೂಚನೆ ನೀಡಲಾಗಿದೆ. ಸಭಾ ಕಾರ್ಯಕ್ರಮದಲ್ಲಿ ಆದಿವಾಸಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಟಿಬೆಟಿಯನ್ ನೃತ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲು ಕ್ರಮ ಕೈಗೊಳ್ಳಲಾಗಿದೆ.

ಸಿದ್ಧತೆ ಮಾಡಿಕೊಳ್ಳಲಾಗಿದೆ

ಗಜಪಯಣಕ್ಕಾಗಿ ಈಗಾಗಲೇ ವೀರನಹೊಸಳ್ಳಿ ಬಳಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ವೇದಿಕೆ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ ನಡೆಸಲಾಗಿದೆ. ಗಜಪಯಣದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸುವ 5 ಸಾವಿರ ಮಂದಿ ಸ್ಥಳೀಯರಿಗೆ ಊಟದ ವ್ಯವಸ್ಥೆ ಮಾಡಲಾಗುತ್ತದೆ. ಮೊದಲ ತಂಡದಲ್ಲಿ ಆಗಮಿಸುವ ಆನೆ, ಮಾವುತ, ಕಾವಾಡಿಗಳ ವಾಸ್ತವ್ಯಕ್ಕೆ ಅರಮನೆ ಆವರಣದಲ್ಲಿ ಶೆಡ್ ನಿರ್ಮಿಸಲಾಗುತ್ತಿದೆ. ಗಜಪಡೆ ನಿರ್ವಹಣೆಗೆ 70 ಮಂದಿ ತಂಡ ಸಜ್ಜುಗೊಳಿಸಲಾಗಿದೆ.

- ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸನ್ ಆಫ್ ಸರ್ದಾರ್-2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಎಲ್ಟುಮುತ್ತಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ಹೌಸ್ ಮೇಟ್ಸ್ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಎಲ್ಟುಮುತ್ತಾ (ಕ) + ಕೊತಲ್ವಾಡಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
-	-
ಪ್ರಭಾ	
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಂಚೇಗೌಡನಕೊಪ್ಪಲು ಶಾಲೆಯ 300 ಮಕ್ಕಳಿಗೆ ರಕ್ತದ ಗುಂಪಿನ ಚೀಟಿ ವಿತರಣೆ



ಮೈಸೂರಿನ ಮಂಚೇಗೌಡನಕೊಪ್ಪಲು ಸರ್ಕಾರಿ ಶಾಲೆಯಲ್ಲಿ 300 ಮಕ್ಕಳಿಗೆ ರಕ್ತ ಪರೀಕ್ಷೆ ನಡೆಸಿ, ರಕ್ತದ ಗುಂಪಿನ ಗುರುತಿನ ಚೀಟಿ ವಿತರಿಸಲಾಯಿತು.

ಮೈಸೂರು, ಜು.31(ಎಂಕೆ)- ಮೈಸೂರಿನ ಮಂಚೇಗೌಡನಕೊಪ್ಪಲು ಸರ್ಕಾರಿ ಶಾಲೆಯಲ್ಲಿ ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಗೋಲ್ಡ್ ಹಾಗೂ ಜೀವದಾರ ರಕ್ತ ನಿಧಿ ಕೇಂದ್ರದ ವತಿಯಿಂದ 300 ಮಕ್ಕಳಿಗೆ ರಕ್ತ ಪರೀಕ್ಷೆ ನಡೆಸಿ, ರಕ್ತದ ಗುಂಪಿನ ಗುರುತಿನ ಚೀಟಿ ವಿತರಿಸಲಾಯಿತು.

ಅಲ್ಲದೆ ರಕ್ತದ ಮಹತ್ವ, ರಕ್ತದಾನ ಮಾಡುವುದರಿಂದಾಗುವ ಪ್ರಯೋಜನಗಳು, ರಕ್ತದಾನದ ಶ್ರೇಷ್ಠತೆ, ಅಪಘಾತ ಸಂದರ್ಭಗಳಲ್ಲಿ ರಕ್ತದಾನದಿಂದ ಜೀವ ಉಳಿಸುವ ಸಾಧ್ಯತೆಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲಾಯಿತು. ಅಲ್ಲದೆ ದಾನಿಗಳು ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆಯೂ ತಿಳಿಹೇಳಲಾಯಿತು.

ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಗೋಲ್ಡ್ ಅಧ್ಯಕ್ಷೆ ರಶ್ಮಿ ಬಸವರಾಜ್ ಮಾತನಾಡಿ, ರಕ್ತದಾನ, ಇತರೆ ದಾನಗಳಲ್ಲಿ ಅಮೂಲ್ಯ ಮತ್ತು ಶ್ರೇಷ್ಠದಾನವಾಗಿದೆ. ರಕ್ತದಾನ ಮಾಡುವುದರಿಂದ ಒಂದು ಜೀವ ಉಳಿಸಬಹುದು ಎಂದು ಹೇಳಿದರು. ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಇನ್ನರ್ ವೀಲ್ ಕ್ಲಬ್ ಕಾರ್ಯದರ್ಶಿ ಪ್ರತಿಭಾ, ಮಾಜಿ ಅಧ್ಯಕ್ಷೆ ಡಾ.ಪ್ರೇಮಾ ರವಿ, ಶಾಲಿನಿ, ಮಾಜಿ ಉಪ ಮೇಯರ್ ಮಹದೇವಪ್ಪ, ಮುಖಂಡರಾದ ಶ್ರೀನಿವಾಸ್, ರಾಮಚಂದ್ರು, ಶಾಲೆಯ ಮುಖ್ಯ ಶಿಕ್ಷಕರಾದ ಶುಭ, ಸಹ ಶಿಕ್ಷಕರಾದ ಪುಷ್ಪ, ಅನುಪಮಾ, ಕೃಷ್ಣಮ್ಮ ಮತ್ತಿತರರಿದ್ದರು.

ಇಂದು 'ಸ್ವಾತಿ ನಕ್ಷತ್ರ' ಪೂಜೆ

ಮೈಸೂರು: ಮೈಸೂರಿನ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಆ.1ರಂದು ವಿಶೇಷ 'ಸ್ವಾತಿ ನಕ್ಷತ್ರ' ಪೂಜೆ ಏರ್ಪಡಿಸಲಾಗಿದೆ. ಅಂದು ಮಧ್ಯಾಹ್ನ 12 ಗಂಟೆಗೆ ಪೂಜೆ ನಂತರ ಪ್ರಸಾದ ವಿನಿಯೋಗವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಅವರನ್ನು ಮೊ : 99004 00000 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ಧರ್ಮಸ್ಥಳದಲ್ಲಿ ಸಮಾಧಿ ಪ್ರಕರಣ: 6ನೇ ಪಾಯಿಂಟ್‌ನಲ್ಲಿ ಮಾನವ ಮೂಳೆಗಳು ಪತ್ತೆ

ಧರ್ಮಸ್ಥಳ, ಜು.31– ಧರ್ಮಸ್ಥಳ ಶವ ಹೂತಿಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಮೂರನೇ ದಿನ ಮಹತ್ವದ ಬೆಳವಣಿಗೆ ನಡೆದಿದೆ. ಇಂದು ಉತ್ಖನನದ ವೇಳೆ 6 ನೇ ಪಾಯಿಂಟ್‌ನಲ್ಲಿ ಮಾನವ ಮೂಳೆಗಳು ಪತ್ತೆಯಾಗಿವೆ ಎಂದು ಎಸ್‌ಐಟಿ ಮೂಲಗಳಿಂದ ತಿಳಿದಿದೆ.

6ನೇ ಪಾಯಿಂಟ್‌ನಲ್ಲಿ ಸಿಕ್ಕ ಮೂಳೆಗಳನ್ನು ನಿಯಮದಂತೆ ಅಧಿಕಾರಿಗಳು ಸಂಗ್ರಹಿಸಿದ್ದು, ಎಫ್‌ಎಸ್‌ಎಲ್ ಪರೀಕ್ಷೆಗೆ ಕಳುಹಿಸಲಾಗುತ್ತದೆ. ಆರನೇ ಸ್ಪಾಟ್‌ನಲ್ಲಿ ಒಟ್ಟು 12 ಮೂಳೆಗಳು ಪತ್ತೆಯಾಗಿವೆ. ಜೊತೆಗೆ ಸ್ಥಳದಲ್ಲಿ ಪುರುಷನ ಒಳ ಉಡುಪು ಕೂಡ ಪತ್ತೆಯಾಗಿದೆ ಎಂದು ತಿಳಿದುಬಂದಿದೆ.

ಅನಾಮಿಕ ವ್ಯಕ್ತಿ ಹೇಳಿದ ಜಾಗದಲ್ಲೇ ಅಸ್ಥಿಪಂಜರದ ಮೂಳೆಗಳು ಪತ್ತೆಯಾಗಿದ್ದು, ಎಸ್‌ಐಟಿ ತನಿಖೆಗೆ ಮಹತ್ವದ ಸುಳಿವು ಸಿಕ್ಕಂತಾಗಿದೆ. ಇದರ ಜೊತೆಗೆ ಅರಣ್ಯ ಮತ್ತು ಕಂದಾಯ ಇಲಾಖೆ ಕೂಡ ಆರನೇ ಜಾಗದ ನಕ್ಷೆ ಪರಿಶೀಲನೆ ನಡೆಸಿದೆ. ಇನ್ನು ಉತ್ಖನನ ನಡೆಸುವ ಸ್ಥಳದಲ್ಲಿ ನೇತ್ರಾವತಿ ನದಿ ನೀರಿನ ಒರತೆ ಇದ್ದ ಕಾರಣ ಗುಂಡಿಯಲ್ಲಿ ನೀರು ತುಂಬಿತು. ನೀರನ್ನು ಹೊರ ತೆಗೆಯಲು ಪಂಪ್ ಸೆಟ್ ತರಿಸಿದ ಅಧಿಕಾರಿಗಳು ಮುಂದಿನ ಕ್ರಮ ಕೈಗೊಂಡರು.

ಪತ್ತೆಯಾಗಿರುವುದು ಗಂಡಸಿನ ಮೂಳೆ ಎಂಬ ಮಾಹಿತಿ ಲಭ್ಯವಾಗಿದೆ. ಮಾಧ್ಯಮಗಳ ಕ್ಯಾಮರಾ ಕಣ್ಣಿಂದ ತಪ್ಪಿಸಲು ಘಟನಾ ಸ್ಥಳಕ್ಕೆ ಹಸಿರು ಬಣ್ಣದ ಪರದೆ ಹಾಕಿದ ಎಸ್‌ಐಟಿ ಟೀಂ ಸಂಪೂರ್ಣವಾಗಿ ಬಂದ್ ಮಾಡಿದೆ. ಹಿಟಾಚಿ ಬಳಸಿ ನಿರಂತರವಾಗಿ ಕಾರ್ಯಾಚರಣೆ ನಡೆಸಿದ್ದು, ಈ ವೇಳೆ ತಲೆ ಬುರುಡೆಯ ಒಂದು ಭಾಗವೂ ಪತ್ತೆಯಾಗಿದೆ. ಎಲ್ಲವನ್ನೂ ಮುಂದಿನ ತನಿಖೆಗಾಗಿ ಸೇಫ್ ಆಗಿ ಇಡಲಾಗಿದೆ.

ಧರ್ಮಸ್ಥಳ ಶವ ಹೂತಿಟ್ಟ ಪ್ರಕರಣದ ಆರನೇ ಪಾಯಿಂಟ್ ಬಳಿ ಶೋಧ ಕಾರ್ಯ ಮುಕ್ತಾಯವಾಗಿದ್ದು, ಸ್ಥಳದಲ್ಲಿ ಪತ್ತೆಯಾದ ಮೂಳೆಗಳನ್ನು ಸುರಕ್ಷಿತವಾಗಿ ಸಂಗ್ರಹಿಸಲು ಪೊಲೀಸರು ಅಗತ್ಯ ಪರಿಕರಗಳನ್ನು ಸ್ಥಳಕ್ಕೆ ತೆಗೆದುಕೊಂಡು ಹೋದರು. ಅಸ್ಥಿಗಳ ಸಂಗ್ರಹಕ್ಕೆ ಬಳಸಲು ಡಬ್ಬಿ ಉಪ್ಪು ಮತ್ತು ಪ್ಲಾಸ್ಟಿಕ್ ಕವರ್‌ಗಳನ್ನು ಪೊಲೀಸರು ಬಳಸಿದ್ದಾರೆ. ಪತ್ತೆಯಾದ ಮೂಳೆಗಳನ್ನು ಎಸ್‌ಐಟಿ ತಂಡ ಕಾನೂನು ಪ್ರಕ್ರಿಯೆಯ ಮೂಲಕ ಸರಿಯಾಗಿ ಸಂಗ್ರಹಿಸಿ ದಾಖಲಿಸಿಕೊಂಡಿದೆ.



ಈ ಸಂದರ್ಭದಲ್ಲಿ ಎಸಿ ಸ್ಟೆಲ್ಲಾ ವರ್ಗೀಸ್ ಅವರ ಸಮ್ಮುಖದಲ್ಲಿ ಮಹಜರು ಪ್ರಕ್ರಿಯೆ ನಡೆಸಲಾಯಿತು. ಸಂಗ್ರಹಿಸಿದ ಅಸ್ಥಿಪಂಜರ, ತಲೆಬುರುಡೆ ಅವಶೇಷಗಳು ಮತ್ತು ಸ್ಥಳದ ದಾಖಲೆಗಳು ಸೇರಿ ಎಲ್ಲ ಮಾಹಿತಿಯನ್ನೂ ಸವಿವರವಾಗಿ ದಾಖಲಿಸಲಾಗಿದೆ. ಮಹಜರು ಪ್ರಕ್ರಿಯೆಯ ಬಳಿಕ, ಶೋಧ ನಡೆಸಿದ ಗುಂಡಿಯನ್ನು ಹಿಟಾಚಿ ಯಂತ್ರದ ಸಹಾಯದಿಂದ ಮುಚ್ಚುವ ಕಾರ್ಯ ನಡೆಸಲಾಯಿತು. ಅಲ್ಲದೆ 6ನೇ ಪಾಯಿಂಟ್ ಅನ್ನು ಸಂರಕ್ಷಿತ ಪ್ರದೇಶ ಎಂದು ಗುರುತಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯಲ್ಲಿ ಇಂದಿನ ಬೆಳವಣಿಗೆಯು ಮತ್ತೊಂದು ಪ್ರಮುಖ ಹಂತವಾಗಿದೆ.

ಅನಾಮಿಕ ಗುರುತಿಸಿರುವ ಇನ್ನೂ 7 ಪಾಯಿಂಟ್‌ಗಳನ್ನು ಅಗೆಯಲು ಕಾರ್ಯ ಬಾಕಿ ಇದೆ. ನಿನ್ನೆವರೆಗೆ ಅಗೆದ 5 ಪಾಯಿಂಟ್‌ಗಳು ನದಿಗೆ ಸಮೀಪದಲ್ಲಿದ್ದು, ಕೊಚ್ಚಿಕೊಂಡು ಹೋಗಿರುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. 6 ನೇ ಪಾಯಿಂಟ್ ನಂತರದ ಸ್ಥಳಗಳು ನದಿಯಿಂದ ದೂರ ಇದೆ ಎನ್ನಲಾಗಿದೆ.

ಒಂದನೇ ಸ್ಥಳದಲ್ಲಿ ಸಿಕ್ಕ ಪಾನ್ ಕಾರ್ಡ್‌ನ ವ್ಯಕ್ತಿಯ ಗುರುತು ಪತ್ತೆ

ಧರ್ಮಸ್ಥಳ, ಜು.31– ಧರ್ಮಸ್ಥಳ ಗ್ರಾಮದಲ್ಲಿ ಪ್ರಭಾವಿಗಳ ಸೂಚನೆ ಮೇರೆಗೆ ನೂರಾರು ಶವಗಳನ್ನು ಹೂತುಹಾಕಿರುವುದಾಗಿ ಅನಾಮಿಕ ನೀಡಿದ ದೂರಿನ ಮೇರೆಗೆ ದಾಖಲಾದ ಪ್ರಕರಣದಲ್ಲಿ ಭಾರೀ ಬೆಳವಣಿಗೆಗಳು ನಡೆಯುತ್ತಿವೆ. ಸಾಕ್ಷಿ ದೂರುದಾರ ತೋರಿಸಿದ ಮೊದಲ ಜಾಗದಲ್ಲಿ ಎಸ್‌ಐಟಿ ನೆಲ ಅಗೆದಾಗ ಪಾನ್‌ಕಾರ್ಡ್ ಹಾಗೂ ಎಟಿಎಂ ಕಾರ್ಡ್ ಪತ್ತೆಯಾಗಿತ್ತು. ಇದೀಗ ಅದರ ವಿವರಗಳು ಬಹಿರಂಗವಾಗಿವೆ. ಮೊದಲ ಸ್ಥಳದಲ್ಲಿ ಅಗೆಯುವಾಗ ಪುರುಷರೊಬ್ಬರ ಪ್ಯಾನ್ ಕಾರ್ಡ್ ಪತ್ತೆಯಾಗಿತ್ತು. ಈ ವ್ಯಕ್ತಿಯ ಕುಟುಂಬವನ್ನು ಪತ್ತೆ ಹಚ್ಚುವಲ್ಲಿ ವಿಶೇಷ ತನಿಖಾ ತಂಡ ಯಶಸ್ವಿಯಾಗಿದೆ. ಇದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಕ್ತಿಯದ್ದು ಎಂದು ಗೊತ್ತಾಗಿದೆ.

ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕಿನ ಸುರೇಶ್ ಎಂಬ ವ್ಯಕ್ತಿ ಮಾರ್ಚ್ 2025ರಲ್ಲಿ ತನ್ನ ಸ್ವಂತ ಗ್ರಾಮದಲ್ಲಿ ಕಾಮಾಲೆಯಿಂದ ನಿಧನರಾಗಿದ್ದರು. ಅಲ್ಲಿಯೇ ಅವರ ಅಂತ್ಯಕ್ರಿಯೆಯನ್ನು ಸಹ ನಡೆಸಲಾಗಿತ್ತು. ಈ ಪ್ಯಾನ್ ಕಾರ್ಡ್ ಅವರದ್ದೇ ಎಂದು ತಿಳಿದು ಬಂದಿದೆ. ಈ ಸಂಬಂಧ ಎಸ್‌ಐಟಿ ಅಧಿಕಾರಿಗಳು ಆ ವ್ಯಕ್ತಿಯ ಮನೆಗೆ ಭೇಟಿ ನೀಡಿದ್ದು, ತಂದೆ ಮಗನ ಪ್ಯಾನ್ ಕಾರ್ಡ್ ಅನ್ನು ದೃಢಪಡಿಸಿದ್ದಾರೆ.

ಮೃತ ವ್ಯಕ್ತಿ ಮದ್ಯವ್ಯಸನಿಯಾಗಿದ್ದರು ಎಂದು ಎಸ್‌ಐಟಿ ಅಧಿಕಾರಿಗಳು ಹೇಳಿದ್ದು, ಸಾಯುವ ಮೊದಲು ಧರ್ಮಸ್ಥಳಕ್ಕೆ ಭೇಟಿ ನೀಡಿದ್ದರು. ಈ ವೇಳೆ ಈ ಪ್ಯಾನ್ ಕಾರ್ಡ್ ಕಳೆದುಹೋಗಿರಬಹುದು ಎಂದು ಶಂಕಿಸಿದ್ದಾರೆ.

ಇನ್ನು ಎಟಿಎಂ ಕಾರ್ಡ್ ಜೊತೆ ಮಹಿಳೆ ಒಬ್ಬರ ಡೆಬಿಟ್ ಕಾರ್ಡ್ ಕೂಡ ಪತ್ತೆಯಾಗಿತ್ತು. ಈ ಬಗ್ಗೆ ಎಸ್‌ಐಟಿ ಅಧಿಕಾರಿಗಳು ಬ್ಯಾಂಕ್ ಅನ್ನು ಸಂಪರ್ಕಿಸಿದ್ದು, ಅವರು ಇನ್ನೂ ರೂಪೇ ಡೆಬಿಟ್ ಕಾರ್ಡ್ ಬಗ್ಗೆ ಮಾಹಿತಿ ನೀಡಿಲ್ಲ ಎಂದು ಹೇಳಿದ್ದಾರೆ. ಅವರು ಇರಬಹುದಾದ ಸ್ಥಳದ ಬಗ್ಗೆಯೂ ಪರಿಶೀಲನೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ಮೈಸೂರು ದಸರಾ ಚಲನಚಿತ್ರೋತ್ಸವ ಉಪ ಸಮಿತಿಯಿಂದ 'ಕಿರುಚಿತ್ರ ಸ್ಪರ್ಧೆ'

ಮೈಸೂರು, ಜು.31– ಮೈಸೂರು ದಸರಾ–2025ರ ಚಲನಚಿತ್ರೋತ್ಸವ ಉಪಸಮಿತಿ ವತಿಯಿಂದ 'ಕಿರುಚಿತ್ರ ಸ್ಪರ್ಧೆ' ಏರ್ಪಡಿಸಲಾಗಿದೆ.

ಶೀರ್ಷಿಕೆ ಒಳಗೊಂಡಂತೆ 10 ನಿಮಿಷ ಅವಧಿ ಮೀರದ, ಅದು 2024ರ ನವೆಂಬರ್‌ನಿಂದ ಪ್ರಸಕ್ತ ಆ.25ರೊಳಗೆ ನಿರ್ಮಿಸಿರುವ, ಯಾವುದೇ ಆನ್‌ಲೈನ್ ಮಾಧ್ಯಮದಲ್ಲಿ ಬಿಡುಗಡೆಯಾಗಿರದ, ಯಾವುದೇ ಭಾಷೆಯ ಕಿರುಚಿತ್ರಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಲು ಆ.26ರವರೆಗೆ ವಿಡಿಯೋ ಸಲ್ಲಿಸಬಹುದು. ಎಂಪಿ4 ಫಾರ್ಮೆಟ್‌ನಲ್ಲಿ ಗೂಗಲ್ ಡ್ರೈವ್‌ನಲ್ಲಿ ಅಪ್ಲೋಡ್ ಮಾಡಿ, ಆ ಲಿಂಕ್ ಅನ್ನು ಅರ್ಜಿಯಲ್ಲಿ ನಮೂದಿಸಬೇಕು. ಹೆಚ್ಚಿನ ಮಾಹಿತಿಗೆ ಈ.ಶ್ರೇಯಸ್(ಮೊ.ಸಂ.7411564510) ಹಾಗೂ Mydff_Mysuru ಫೇಸ್‌ಬುಕ್, ಇನ್ಸ್ಟಾಗ್ರಾಮ್, ವಾಟ್ಸಾಪ್ ಪೇಜ್ ಸಂಪರ್ಕಿಸಬಹುದು.

ಸ್ಪರ್ಧೆಗೆ ಸಲ್ಲಿಕೆಯಾಗುವ ಅತ್ಯುತ್ತಮ ಮೂರು ಕಿರುಚಿತ್ರಗಳಿಗೆ ಪ್ರಶಸ್ತಿ ನೀಡಲಾಗುವುದು. ಅತ್ಯುತ್ತಮ ಸಂಕಲನ ಹಾಗೂ ಛಾಯಾಗ್ರಹಣಕ್ಕೂ ಪ್ರಶಸ್ತಿ ದೊರಕಲಿದೆ. ಪ್ರಶಸ್ತಿ ಜೊತೆಗೆ ನಗದು ಬಹುಮಾನ ಹಾಗೂ ಪ್ರಮಾಣ ಪತ್ರ ನೀಡಲಾಗುವುದು. ಎಲ್ಲಾ ಕಿರುಚಿತ್ರಗಳಿಗೂ ಪ್ರಮಾಣ ಪತ್ರ ನೀಡಿ, ಪ್ರೋತ್ಸಾಹಿಸಲಾಗುವುದು.

ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿದ್ದು, ವಿಜೇತ ಹಾಗೂ ಅತ್ಯುತ್ತಮ ಕಿರುಚಿತ್ರಗಳನ್ನು ಐನಾಕ್ಸ್ ಚಿತ್ರಮಂದಿರದಲ್ಲಿ ಪ್ರದರ್ಶಿಸಲಾಗುವುದು. ಆಯ್ಕೆಯಾದ ಚಿತ್ರಗಳನ್ನು ಮಾತ್ರ ಡಿಸಿಪಿ ಫಾರ್ಮೆಟ್‌ನಲ್ಲಿ ನೀಡಬೇಕಾಗುತ್ತದೆ. ಷರತ್ತು ಹಾಗೂ ನಿಯಮ ಪಾಲಿಸದ ಕಿರುಚಿತ್ರಗಳನ್ನು ತಿರಸ್ಕರಿಸುವ ಅಧಿಕಾರ ಸಮಿತಿಗಿದೆ ಎಂದು ಚಲನಚಿತ್ರೋತ್ಸವ ಉಪಸಮಿತಿ ಕಾರ್ಯದರ್ಶಿಯಾದ ವಾರ್ತಾ ಇಲಾಖೆ ಮೈಸೂರು ಸಹ ನಿರ್ದೇಶಕ ಟಿ.ಕೆ.ಹರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಮಿಳುನಾಡು ರಾಜ್ಯ ಬಿಜೆಪಿ ಉಪಾಧ್ಯಕ್ಷೆಯಾಗಿ ನಟಿ ಖುಷ್ಬೂ ನೇಮಕ

ಚೆನ್ನೈ, ಜು.31– ಹೆಸರಾಂತ ಚಿತ್ರ ನಟಿ ಖುಷ್ಬೂ ಸುಂದರ್ ಅವರನ್ನು ತಮಿಳುನಾಡು ಬಿಜೆಪಿಯ ಉಪಾಧ್ಯಕ್ಷರಾಗಿ ನೇಮಿಸಲಾಗಿದೆ. ಚೆನ್ನೈನಲ್ಲಿರುವ



ಬಿಜೆಪಿ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಪಕ್ಷದ ರಾಜ್ಯಾಧ್ಯಕ್ಷ ನೈನಾರ್ ನಾಗೇಂದ್ರನ್ ಅವರು ಖುಷ್ಬೂ ಅವರಿಗೆ ಹೊಸ ಜವಾಬ್ದಾರಿ ನೀಡುವುದನ್ನು ಅಧಿಕೃತವಾಗಿ ಪ್ರಕಟಿಸಿದರು. ಇದೇ ವೇಳೆ, ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿರುವ ಪ್ರೊ. ರಾಮ ಶ್ರೀನಿವಾಸನ್ ಹಾಗೂ ರಾಜ್ಯ ಕಾರ್ಯದರ್ಶಿಯಾಗಿ ನೇಮಕವಾಗಿರುವ ಆರ್. ತ್ಯಾಗರಾಜನ್ ಅವರಿಗೆ ಅದೇ ಹುದ್ದೆಗಳಲ್ಲಿ ಮುಂದುವರಿಸಲು ನಿರ್ಧರಿಸಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷರು ಘೋಷಿಸಿದ್ದಾರೆ. ನೈನಾರ್ ನಾಗೇಂದ್ರನ್ ಅವರು ಇದೇ ವರ್ಷ ಏಪ್ರಿಲ್ ನಿಂದ ತಮಿಳುನಾಡು ಬಿಜೆಪಿ ಅಧ್ಯಕ್ಷರಾಗಿ ನೇಮಕವಾಗಿದ್ದಾರೆ. 2014ರಲ್ಲಿ ಖುಷ್ಬೂ ಅವರು ಬಿಜೆಪಿಗೆ ಸೇರ್ಪಡೆಯಾಗಿದ್ದರು.

ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘಕ್ಕೆ ಆಯ್ಕೆ

ಮೈಸೂರು, ಜು.31– ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ಆಡಳಿತ ಮಂಡಳಿಯ 2025–30ನೇ ಸಾಲಿನ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎಂ.ಸಿ. ಮರಿಸ್ವಾಮಿ, ಉಪಾಧ್ಯಕ್ಷರಾಗಿ ಎಸ್. ಕೃಷ್ಣಶೆಟ್ಟಿ, ಜಯಪಾಲ್, ಶಿವರುದ್ರಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಬಿ.ಎನ್. ಆನಂದರಾವ್, ಸಹ ಕಾರ್ಯದರ್ಶಿಗಳಾಗಿ ಕೆ. ಪಟ್ಟಾಭಿರಾಮ್, ಪ್ರಭುಸ್ವಾಮಿ, ಖಜಾಂಚಿಯಾಗಿ ಆಲನಹಳ್ಳಿ ಎಂ. ರಾಜು, ಸಹ ಖಜಾಂಚಿಗಳಾಗಿ ಸಾಲುಂಡಿ ಬಸಪ್ಪ, ನಾಗಪ್ರಕಾಶ್, ಪತ್ರಿಕಾ ಕಾರ್ಯದರ್ಶಿಯಾಗಿ ಜೆ.ಚಾಮಯ್ಯ, ಸಂಘಟನಾ ಕಾರ್ಯದರ್ಶಿಯಾಗಿ ವಿ. ರಾಜು, ನಿರ್ದೇಶಕರಾಗಿ ಜವರಯ್ಯ, ಚಿನ್ನಸ್ವಾಮಿ ಪಿ.ಎಲ್., ನಾರಾಯಣಸ್ವಾಮಿ, ಆನಂದ್, ಪುಟ್ಟಸ್ವಾಮಿ, ರಾಚಯ್ಯ, ಆರ್. ಪುಟ್ಟಸುಬ್ಬಪ್ಪ, ಬಿಳಿಕೆರೆ ಮಹದೇವು ಆಯ್ಕೆಯಾಗಿದ್ದಾರೆ.